
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 36

ಸೆಪ್ಟೆಂಬರ್ 7, 2003 ಬೆಲೆ ರೂ. 3.00



ಶೈಕ್ಷಣಿಕ ಸಮಸ್ಯೆಗಳು ಮತ್ತು ಸಿಡಿದೆದ್ದ ವಿದ್ಯಾರ್ಥಿ ಚಳುವಳಿ





ಕೃಷ್ಣ ಸೂತ್ರ ರೈತರ ಆತ್ಮಹತ್ಯೆ ತಡೆದೀತೇ?

ಉತ್ತರ ಪ್ರದೇಶ ಹೊಲಸು ನಾಟಕಕ್ಕೆ ತೆರೆ


ಬೆಣ್ಣೆಹೊಳೆ ನಿರಾಶ್ರಿತರು ಅತಂತ್ರದಲ್ಲಿ



ಬೆಂಗಳೂರಿನಲ್ಲಿ ಸೆಪ್ಟೆಂಬರ್ 9 - ರ್‍ಯಾಲಿ

ದುಡಿವ ಜನ ಬರುವರು ದಾರಿ ಬಿಡಿ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 42

ಕಳೆದ ಸಂಚಿಕೆಯಲ್ಲಿ ಭಾರಿ ವೇಗದಲ್ಲಿ ಮಿಲಿಟರಿ ಲಾರಿಗಳ ಓಡಾಟ, ಕುಡಿದು ತೂರಾಡುವ ಸೈನಿಕರು, ಫ್ಯಾಸಿಸ್ಟ್ ದಬ್ಬಾಳಿಕೆ ಸಾವಿರಾರು ಜನರನ್ನು ನುಂಗಿ ಹಾಕಿದ್ದು, ನೆಹರುರವರ ಪ್ರಜಾಪ್ರಭುತ್ವದ ಅಡಿಯಲ್ಲಿ; ಪೋಲೀಸರು ಹಿಂಬಾಲಿಸುವ ಭಯದಲ್ಲಿ ನೀರಸ ಮೌನ ತಳೆದ ತೆಲಂಗಾಣ ಪ್ರಜೆಗಳು; ತೆಲಂಗಾಣವನ್ನು ಕೊಲ್ಲುವುದನ್ನು ಗುರಿಯಾಗಿಸಿಕೊಂಡ ಪತ್ರಿಕೆಗಳು ಮತ್ತು ಕ್ರಾಂತಿಯ ಪ್ರಖರ ಜ್ವಾಲೆಯನ್ನು ಅಡಗಿಸಲು ಪ್ರಭುತ್ವಕ್ಕೆ ಸಾಧ್ಯವಾಗದ ಬಗ್ಗೆ ಓದಿರುವಿರಿ. ಮುಂದೆ...



ಕನ್ನಡಕ್ಕೆ: ವಿಶ್ವ ಕುಂದಾಪುರ

ದುರ್ಗಮ ಅರಣ್ಯದಲ್ಲಿ ತೆಲಂಗಾಣ ಗೆರಿಲ್ಲಾಗಳೊಂದಿಗೆ...

ಬೆಳ್ಳಿ ಬಣ್ಣದ ಹೊಳೆಯುವ 9 ಚೇಂಬರ್ ಪಿಸ್ತೂಲ್ ಒಂದು ನನ್ನ 'ಧೋತಿ' ಯಲ್ಲಿ ಭದ್ರವಾಗಿ ಕುಳಿತಿತ್ತು. ನನಗೋ ಅಪಾರ ರೋಮಾಂಚನವಾಗಿತ್ತು. ನೀರಸ ಪರಿಸರ ಮತ್ತು ಕಾವಲುಗಾರರುಳ್ಳ ನಿರ್ಗಮದ ಪ್ರದೇಶಗಳು ಹಿಂದೆ ಹಿಂದೆ ಹೋದಂತೆ ನಾವು ಸುರಕ್ಷಿತವಾಗಿ ಕ್ರಾಸ್‌ಕಂಟ್ರಿ ಮಾಡುತ್ತಾ ರೈತಾಪಿ ಜನತೆಯ ನೆಲದತ್ತ ಪಯಣಿಸಿದೆವು.

ಹಂತಹಂತವಾಗಿ ನಾವು 200 ಮೈಲಿ ದೂರವನ್ನು ಕ್ರಮಿಸಬೇಕಿತ್ತು. ಇದೀಗ ಮೊದಲ ಹಂತವನ್ನಷ್ಟೇ ನಾವು ಪ್ರವೇಶಿಸಿದ್ದೆವು.

ಅದು ಚಂದ್ರನ ಬೆಳಕು ಚೆಲ್ಲಿದ ರಾತ್ರಿಯಾಗಿತ್ತು. ವಿಶಾಲ ಬೋಳುಗುಡ್ಡಗಳು, ಕಣ್ಣಿನ ವಿಸ್ತಾರದುದ್ದಕ್ಕೂ ಚಾಚಿದ್ದ ಉಳುಮೆ ಮಾಡದ ಗದ್ದೆಗಳು, ಮುಳ್ಳಿನ ಪೊದೆಗಳು, ಎತ್ತಿನಗಾಡಿಗಳು ಸಾಗುವ ಹಾದಿ.... ಈ ಎಲ್ಲ ದೃಶ್ಯ ಬೆಳದಿಂಗಳಲ್ಲಿ ನಯನಮನೋಹರವಾಗಿ ಕಾಣುತ್ತಿತ್ತು. ಅನತಿದೂರದಲ್ಲಿ ಉದ್ದನೆಯ ತಾಳೆಮರಗಳು ಚಂದ್ರನ ಬೆಳಕಿನಲ್ಲಿ ರಾರಾಜಿಸುತ್ತಿದ್ದವು. ಎಲ್ಲವೂ ಅಮೋಘವಾಗಿ ಕಾಣಿಸುತ್ತಿತ್ತು, ಒಂದು ರೀತಿಯ ಭ್ರಮಿತ ಶಾಂತಿ ನೆಲೆಸಿತ್ತು. ನಾವು ದೂತನ ಜತೆ ಭಾರವಾದ ಹೆಜ್ಜೆಗಳನ್ನಿಡುತ್ತಾ ನಡೆದೆವು. ನಾವು 15 ಮೈಲು ನಡೆದು ಬಂದಿದ್ದರೂ ಆತ ಇನ್ನೂ ನಿಲ್ಲುವ ಸೂಚನೆಯೇ ಇರಲಿಲ್ಲ. ಅಷ್ಟರೊಳಗೆ .... 'ಢಂ' ಒಂದು, 'ಢಂ' ಎರಡು.... ಒಂದರ ಹಿಂದೊಂದು ಹಾರಿಸಿದ ಗುಂಡಿನ ಸದ್ದು ಬಲಗಡೆಯಿಂದ ಕೇಳಿಬಂತು.

ಹಣೆಯ ಮೇಲೆ ಬೆವರಹನಿಗಳು ಮೂಡಿದ್ದ ನಮ್ಮ ದೂತ 'ಅವಿತುಕೊಳ್ಳಿ' ಎಂದು ನನ್ನ ಕಿವಿಯಲ್ಲಿ ಉಸುರಿದ. ನಾವು ಕೆಲ ನಿಮಿಷ ಕಾಲ ಪೊದೆಯ ಹಿಂದೆ ಅಡಗಿ ಕುಳಿತೆವು. "ಇದು ಶತ್ರು ಏಜೆಂಟರ ವಿರುದ್ಧ ಯಾವುದೋ ತಂಡ ಗುಂಡು ಹಾರಿಸಿದ್ದಿರಬೇಕು ಅಥವಾ ಗೆರಿಲ್ಲಾ ಎಂದು ಭ್ರಮಿಸಿ ಅಡ್ಡಾಡುವ ನಾಯಿಯತ್ತ ಪೊಲೀಸರು ಗುಂಡು ಹಾರಿಸಿದ್ದಿರಬೇಕು. ಇದು ಅವರಿಗೆ ಮಾಮೂಲು ಸಂಗತಿ" ಎಂದು ಹೇಳಿದ ದೂತ ಆಸಕ್ತಿದಾಯಕ ತಮಾಷೆ ಪ್ರಕರಣವೊಂದನ್ನು ವಿವರಿಸಿದ.



ತೆಲಂಗಾಣದ ಗೆರಿಲ್ಲಾ ಯೋಧ

ಸಿಕ್ಕಿದ್ದು ಸೆಗಣಿ ಮಾತ್ರ

"ಒಂದು ದಿನ ದನವೊಂದು ಹಿಂಬಾಗಿಲಿನಿಂದ ಪೊಲೀಸ್ ಶಿಬಿರವನ್ನು ಪ್ರವೇಶಿಸಿತ್ತು. 'ನಿಲ್ಲು' ಎಂದು ಕೂಗಿದ ಸೆಂಟ್ರಿ ಗುಂಡು ಹಾರಿಸಿಯೇಬಿಟ್ಟ. ಅದರ ಬೆನ್ನಲ್ಲೇ ಶುರುವಾಯಿತು ನೋಡಿ ಗುಂಡಿನ ಸುರಿಮಳೆ. ಅಲ್ಲಿದ್ದ ಪೊಲೀಸರೆಲ್ಲ ಎಡೆಬಿಡದೆ ಗುಂಡುಹಾರಿಸುತ್ತ ನಿಂತರು. ಏನಿಲ್ಲವೆಂದರೂ ಇನ್ನೂರು ಸುತ್ತು ಗುಂಡು ಹಾರಿಸಲಾಗಿತ್ತು. ಕೊನೆಗೂ ಬಂದೂಕುಗಳಿಗೆ ವಿಶ್ರಾಂತಿಕೊಟ್ಟು ಮೃತ 'ಗೆರಿಲ್ಲಾಗಳ' ಶವ ಹುಡುಕಲು ಹೊರಟರು. ಒಂದು ಸೆಗಣಿ ಮುದ್ದೆ ಅವರ ಸ್ವಾಗತಕ್ಕೆ ಕಾದಿತ್ತು! ಒಂದು ದನ ಕೂಡ ಅವರ ಕೋಟೆ ಭೇದಿಸಿ ಬಂದಿತ್ತು. ಕೊನೆಗೆ ಪೊಲೀಸರಿಗೆ ಸಿಕ್ಕಿದ ಫಲವೆಂದರೆ ಸೆಗಣಿ ತೆಗೆದು ಸ್ವಚ್ಛ ಮಾಡುವ ಕೆಲಸ. ಈ ಪ್ರಕರಣವನ್ನು ಆತ ಪಿಸುಮಾತಿನಲ್ಲೇ ವಿವರಿಸಿದ.

'ಏನೇ ಇರಲಿ. ನಾವು ಅಪಾಯವನ್ನು ಎದುರು ಹಾಕಿಕೊಳ್ಳಲಾಗದು. ನಾವು ನಮ್ಮ ದಾರಿಯನ್ನು ಬದಲಾಯಿಸಬೇಕು' ಎಂದು ಸಲಹೆ ಮಾಡಿದ ಆತ ಎದುರಿಗೆ ದೂರದಲ್ಲಿ ಕಾಣಿಸುತ್ತಿದ್ದ ಬೆಟ್ಟದೆಡೆ ನೋಡಿ ತುಟಿ ಕಚ್ಚಿಕೊಂಡ. ಲಗುಬಗನೆ ಹೆಜ್ಜೆ ಹಾಕತೊಡಗಿದ. ಆತನ ನಿರ್ಧಾರದಲ್ಲಿ ಪೂರ್ಣ ವಿಶ್ವಾಸವಿಟ್ಟ ನಾವೂ ಆತನನ್ನು ಹಿಂಬಾಲಿಸಿದೆವು.

ಮುಳ್ಳುಕಂಟೆಗಳ ಪೊದೆಯಲ್ಲಿ ವೇಗವಾಗಿ ಸಾಗುತ್ತಿದ್ದಾಗ ಮೈಕೈಗೆ ತರಚಿದ ಗಾಯಗಳಾಗುತ್ತಿದ್ದವು. ಈ ರೀತಿಯಲ್ಲಿ ನಾನೆಂದೂ ಮುಳ್ಳುಪೊದೆಗಳಲ್ಲಿ ಸಾಗಿ ಹೋಗಿರಲಿಲ್ಲ. ತರಚುತ್ತಿರುವುದರ ನಡುವೆಯೂ ಅತಿ ಚಿಕ್ಕ ಪ್ರಾಯದ ಆ ಹುಡುಗನ ಬಗ್ಗೆ ನಾನು ಯೋಚಿಸತೊಡಗಿದೆ. ನಮ್ಮನ್ನು ದಾರಿ ತೋರಿಸುತ್ತಾ ಕರೆದು ಕೊಂಡು ಹೋಗುತ್ತಿದ್ದ ಈ ಹುಡುಗನಿಗೆ ಆ ಪ್ರದೇಶದ ಇಂಚಿಂಚೂ ನೆಲದ ಪರಿಚಯವೂ ಕರತಲಾಮಲಕವಾಗಿತ್ತು. ದಷ್ಟಪುಷ್ಟ, ಕಟ್ಟುಮಸ್ತಾದ, ಗೋಧಿಕಪ್ಪು ಮೈಬಣ್ಣದ ಬಾಲಕನ ಎಚ್ಚರ, ಜವಾಬ್ದಾರಿಯ ಅರಿವು ಹಾಗೂ ತಣ್ಣಗಿನ - ತರ್ಕಬದ್ಧ ನಿರ್ಧಾರ ನನ್ನನ್ನು ಚಕಿತಗೊಳಿಸಿತು.

ಅಲ್ಲೆಲ್ಲೋ ಅನತಿದೂರದಲ್ಲಿ ಗುಂಡು ಹಾರಿಸಲಾದ ಕೆಲವೇ ಸೆಕೆಂಡುಗಳಲ್ಲಿ ನಮ್ಮ ದಾರಿ ಬದಲಾಯಿಸುವ ನಿರ್ಧಾರಕ್ಕೆ ಆತ ಬಂದಿದ್ದ. ಮೂಲ ಸ್ಥಳ ತಪ್ಪಿಹೋದ ಪಕ್ಷದಲ್ಲಿ ಪರ್ಯಾಯ ನೆಲೆ ಯಾವುದೆಂದು ಯೋಜಿಸಿದ. ಪರ್ಯಾಯ ಜಾಗಕ್ಕೆ ತಂಡ ಬಾರದಿದ್ದರೆ ಅಲ್ಲೇ ನೆರೆ ಹೊರೆಯಲ್ಲಿ ನಾವು ಹೋಗಬಹುದಾದ ಸಂಭಾವ್ಯ 'ಕೇಂದ್ರಗಳ' ಬಗ್ಗೆ ಯೋಚಿಸಿದ. "ಒಂದು ವೇಳೆ ಅತ್ಯಂತ ಕೆಟ್ಟ ಸನ್ನಿವೇಶ ಎದುರಾದರೆ ನಮ್ಮ ತುರ್ತು 'ಆಹಾರ' ಸಂಗ್ರಹ ಎಲ್ಲಿದೆ ಎಂಬುದು ನನಗೆ ತಿಳಿದಿದೆ. ನಾನು ನಿಮ್ಮನ್ನು ಎರಡು-ಮೂರು ದಿನ 'ಬೆಟ್ಟ'ವೊಂದರಲ್ಲಿ ಇರಿಸಬಲ್ಲೆ. ನಿಮ್ಮನ್ನು ಅಲ್ಲಿ ಬಿಟ್ಟು ನನ್ನ ಪಾಡಿಗೆ ನಾನು ಪರ್ಯಾಯ 'ಕೇಂದ್ರ ಗಳನ್ನು' ಹುಡುಕಿಕೊಂಡು ಹೋಗಬಹುದು. ನಾವು ಕೇಂದ್ರಗಳನ್ನು ಬದಲಾಯಿಸುತ್ತಾ ಇರುತ್ತೇವೆ. ಹೀಗಾಗಿ ಅವುಗಳನ್ನು ಹುಡುಕಲು ನಾನು ಸ್ವಲ್ಪ ಅಲೆದಾಡ ಬೇಕಾಗಬಹುದು ಅಷ್ಟೆ. ಆದರೆ ನಾನು ನಿಮ್ಮನ್ನು ಈ ದಾರಿಯಿಂದಂತೂ ಕರೆದುಕೊಂಡು ಹೋಗುವುದಿಲ್ಲವಪ್ಪ. ಇಲ್ಲ, ಇಲ್ಲ, ನಾವು ಅಪಾಯವನ್ನು ಮೈಮೇಲೆ ಎಳೆದು ಕೊಳ್ಳುವಂತಿಲ್ಲ" ಅಪ್ರಜ್ಞಾಪೂರ್ವಕವಾಗಿ ತಾನೊಬ್ಬ ತಾತ ಎನ್ನುವ ರೀತಿಯಲ್ಲಿ ಆತ ನಮಗೆ ಸಲಹೆ ಮಾಡಿದ.

ಕಾರ್ಮಿಕರ ಪಕ್ಷದ ಗುಂಡಿನ ಕಾಳಗ.....

ಹೌದು, ತೆಲಂಗಾಣದ ಗ್ರಾಮೀಣ ಪ್ರದೇಶದಲ್ಲಿ ಕಾರ್ಮಿಕರ ಪಕ್ಷ ಗುಂಡಿನ ಹೋರಾಟ ಆರಂಭಿಸಿರುವುದನ್ನು ನಾನು ಗಮನಿಸಿದೆ. ನಾನು ಕಂಡ ಅದರ ಪ್ರಥಮ 'ಬಲಿಪಶು' ನೇತೃತ್ವದಲ್ಲಿ ನಾನಿಲ್ಲಿ ಮುಂದೆ ಸಾಗುತ್ತಿದ್ದೆ.

(ಮುಂದುವರಿಯುವುದು

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- ಸೆಪ್ಟೆಂಬರ್ 9, ಬೆಂಗಳೂರಿನಲ್ಲಿ ರ‍್ಯಾಲಿ
- ಸೆಪ್ಟೆಂಬರ್ 18, ಮಂಗಳೂರಿನಲ್ಲಿ ರ‍್ಯಾಲಿ
- **ಸೆಪ್ಟೆಂಬರ್ 05, 2003**
  ಡಾ. ಜಿ.ರಾಮಕೃಷ್ಣ ಅಭಿನಂದನಾ ಸಮಾರಂಭ, ಸೆನೆಟ್ ಹಾಲ್, ಬೆಂಗಳೂರು ಬೆಳಿಗ್ಗೆ 10-30 ಕ್ಕೆ
- **ಸೆಪ್ಟೆಂಬರ್ 10, 2003**
  ಕ್ಯಾನ್‌ಕುನ್‌ನಲ್ಲಿ ನಡೆಯಲಿರುವ WTO ಸಭೆಯಲ್ಲಿ ಅಂಗೀಕರಿಸಲಿರುವ ಜನ ವಿರೋಧಿ ಅಂಶಗಳ ವಿರುದ್ಧ ರಾಜ್ಯ ಮಟ್ಟದ ಪ್ರತಿಭಟನಾ ಪ್ರದರ್ಶನ.
  ಸ್ಥಳ : ಬಸವೇಶ್ವರ ಸರ್ಕಲ್, ಬೆಂಗಳೂರು
  ಬೆಳಿಗ್ಗೆ: 11.30 ಕ್ಕೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಆರಂಭ
- **ಸೆಪ್ಟೆಂಬರ್ 11, 2003**
  ಸಿಐಟಿಯು ದ.ಕ. ಜಿಲ್ಲಾ ಸಮ್ಮೇಳನ
- **ಸೆಪ್ಟೆಂಬರ್ 13, 2003**
  ಮೇರಿ ದೇವಾಸಿಯಾ ಸ್ಮರಣೆ
  ರಾಜ್ಯ ಸರ್ಕಾರಿ ನೌಕರರ ಚಳುವಳಿಯ ಸಮರಶೀಲ ನಾಯಕಿ ಮೇರಿ ದೇವಾಸಿಯಾ ನಿಧನರಾಗಿ ಹತ್ತು ವರ್ಷಗಳಾದ ಸಂದರ್ಭದಲ್ಲಿ ಸ್ಮರಣೆ.
- **ಸೆಪ್ಟೆಂಬರ್ 16, 17, 2003**
  ಬಳ್ಳಾರಿ ಜಿಲ್ಲಾ ಸಿಐಟಿಯು ಸಮ್ಮೇಳನ ಹೊಸಪೇಟೆ
- **ಸೆಪ್ಟೆಂಬರ್ 21,2003**
  ಮಂಡ್ಯ ಜಿಲ್ಲಾ ಸಿಐಟಿಯು ಸಮ್ಮೇಳನ, ಮಂಡ್ಯ

ಸೆಪ್ಟೆಂಬರ್ 9, ಬೆಂಗಳೂರಿನಲ್ಲಿ ಸಿಪಿಐ(ಎಂ) ಬೃಹತ್ ರ‍್ಯಾಲಿ

ಮಲ್ಲೇಶ್ವರಂನಲ್ಲಿ ಬಹಿರಂಗ ಸಭೆ

ಕೇಂದ್ರ-ರಾಜ್ಯ ಸರ್ಕಾರಗಳ ಜನದ್ರೋಹಿ ನೀತಿಗಳ ವಿರುದ್ಧ ಸಿಪಿಐ(ಎಂ) ಕರೆ ನೀಡಿರುವ ರಾಷ್ಟ್ರವ್ಯಾಪಿ ರಾಜಕೀಯ ಪ್ರಚಾರಾಂದೋಲನದ ಕರೆಯಂತೆ ಕರ್ನಾಟಕದಲ್ಲಿಯೂ ಆಗಸ್ಟ್ 16 ರಿಂದ 29 ರವರೆಗೆ ಆರು ಪ್ರಾದೇಶಿಕ ಜಾಥಾಗಳು ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿವೆ.

ಈ ನೀತಿಗಳಿಗೆ ಜನತೆಯ ಪ್ರತಿರೋಧ ವ್ಯಕ್ತಪಡಿಸಲು, ನೈಜ ಪರ್ಯಾಯ ಸಾರಲು ಸೆಪ್ಟೆಂಬರ್ 9 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಬೃಹತ್ ರ‍್ಯಾಲಿಯನ್ನು ಸಂಘಟಿಸಲಾಗುತ್ತಿದೆ. ಇದರಲ್ಲಿ ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಭಾಗವಹಿಸಿ ಜನತೆಯನ್ನುದ್ದೇಶಿಸಿ ಮಾತ ನಾಡುವರು. ಅಲ್ಲದೇ ರಾಜ್ಯ ನಾಯಕರು ಮಾತನಾಡಲಿದ್ದಾರೆ. ಈ ರ‍್ಯಾಲಿಯು ಬೆಳಿಗ್ಗೆ 11.30 ಕ್ಕೆ ಸರಿಯಾಗಿ ಬೆಂಜ್ಜಿಕ್ ಬಳಿಯ ಚಿಕ್ಕಲಾಲ್‌ಬಾಗ್ ನಿಂದ ಹೊರಟು ಮಲ್ಲೇಶ್ವರಂ ಮೈದಾನ ತಲುಪುವುದು. ಅಲ್ಲಿ ಬೃಹತ್ ಬಹಿರಂಗ ಸಭೆ ನಡೆಯಲಿದೆ.

ಕ್ಯಾನ್‌ಕುನ್ WTO ಸಭೆಯ ವಿರುದ್ಧ ರೈತ, ಕೂಲಿಕಾರರ ಬೃಹತ್ ಪ್ರತಿಭಟನೆ

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳಿಂದ ಭಾರತವೂ ಸೇರಿ ಅಭಿವೃದ್ಧಿಶೀಲ ದೇಶಗಳ ಕೃಷಿ ರಂಗ ಸಂಪೂರ್ಣ ನಾಶವಾಗಿ, ರೈತ ಆತ್ಮಹತ್ಯೆಗಳು, ಕೂಲಿಕಾರರ ಹಸಿವಿನ ಸಾವುಗಳಿಗೆ ಗುರಿಯಾಗುತ್ತಿರುವ ಸಂದರ್ಭದಲ್ಲಿ ಈ ಬಿಕ್ಕಟ್ಟನ್ನು ಮತ್ತಷ್ಟು ಭೀಕರಗೊಳಿಸುವ ದೃಷ್ಟಿಯಿಂದ ಅಮೆರಿಕಾ ಮತ್ತಿತರೆ ಶ್ರೀಮಂತರ ರಾಷ್ಟ್ರಗಳ ಬಹುರಾಷ್ಟ್ರೀಯ ಕಂಪನಿಗಳ ಲೂಟಿಯನ್ನು ಶಿಕ್ಷಣ, ಆರೋಗ್ಯ ಇತ್ಯಾದಿ 'ಸೇವಾ' ಕ್ಷೇತ್ರಗಳಿಗೆ ವಿಸ್ತರಿಸಲು ಸಹಾಯವಾಗುವ ಉದ್ದೇಶದಿಂದ General Agreement on Tradeing Services (GATS)ನ ವಿಷಯವನ್ನು ಕ್ಯಾನ್‌ಕುನ್ WTO ಸಭೆಗೆ ತರಲು ಪ್ರಯತ್ನಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಅಭಿವೃದ್ಧಿಶೀಲ ದೇಶಗಳ ಅಭಿವೃದ್ಧಿಗೆ ಸಂಬಂಧಿಸಿ 'ದೋಹಾ' WTO ಸಭೆಯಲ್ಲಿ ಶ್ರೀಮಂತ ರಾಷ್ಟ್ರಗಳು ನೀಡಿದ್ದ ಭರವಸೆಗಳನ್ನು ಈಡೇರಿಸುವುದರ ಬಗ್ಗೆ ಚರ್ಚಿಸಿ, ತೀರ್ಮಾನಗಳನ್ನು ಮಾಡುವ ಬದಲಿಗೆ ಹೊಸ ಅಂಶಗಳನ್ನು ಚರ್ಚೆಗೆ ತರಬಾರದೆಂದು ಅಮೆರಿಕಾ ಮತ್ತಿತರೆ ಶ್ರೀಮಂತ ರಾಷ್ಟ್ರಗಳ ವಿಪರೀತವಾಗಿ ಹೆಚ್ಚಳ ಮಾಡುತ್ತಿರುವ ಕೃಷಿ ಸಬ್ಸಿಡಿಗಳನ್ನು ಕಡಿತ ಮಾಡಬೇಕು, ಆಮದುಗಳನ್ನು ನಿಯಂತ್ರಿಸಲು ಮತ್ತೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ಮತ್ತೆ ಜಾರಿಗೆ ತರಬೇಕೆಂದು ಆಗ್ರಹಿಸಿ ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳು ನಡೆಯುತ್ತಿವೆ. ಬಿಜೆಪಿ ನಾಯಕತ್ವದ ಎನ್‌ಡಿಎ ಸರ್ಕಾರ, ಎಲ್ಲಾ ಅಭಿವೃದ್ಧಿ ಶೀಲ ದೇಶಗಳನ್ನು ಒಟ್ಟುಗೂಡಿಸಿ WTO ಸಭೆಯಲ್ಲಿ ಈ ದಿಸೆಯಲ್ಲಿ ಕೆಲಸ ಮಾಡಬೇಕೆಂದು ಒತ್ತಾಯಿಸಿ ದೇಶದ ರೈತ, ಕೂಲಿಕಾರ ಸಂಘಟನೆಗಳು, ಕಾರ್ಮಿಕ ಸಂಘಟನೆ ಮತ್ತಿತರ ಸಂಘಟನೆಗಳು ಕ್ಯಾನ್‌ಕುನ್ WTO ಸಭೆ ಆರಂಭವಾಗುವ ದಿನದಂದು ಬೃಹತ್ ಪ್ರತಿಭಟನೆಗಳ ನಡೆಸುತ್ತಿವೆ.

ಇದರ ಭಾಗವಾಗಿ ಬೆಂಗಳೂರಿನಲ್ಲಿ ಸೆಪ್ಟೆಂಬರ್ 10 ರಂದು ಬೆಳಿಗ್ಗೆ 11.30 ಗಂಟೆಗೆ ಚಿಕ್ಕಲಾಲ್‌ಬಾಗ್‌ನಿಂದ ಬೃಹತ್ ರೈತ ಕೂಲಿಕಾರ ಮೆರವಣಿಗೆ ಆರಂಭವಾಗಿ ಬಂದು ಗಂ ಬಸವೇಶ್ವರ ಸರ್ಕಲ್‌ನಲ್ಲಿ ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಗುತ್ತಿದೆ.

KPRS-AIAWU ರಾಜ್ಯಸಮಿತಿಗಳು ಜಂಟಿಯಾಗಿ ಪ್ರತಿಭಟನೆಯನ್ನು ಸಂಘಟಿಸು

ಆತ್ಮಹತ್ಯೆಗೆ ಸಾಂತ್ವನ ಸೂತ್ರ : ರೈತರನ್ನು ರಕ್ಷಿಸೀತೆ?

ರೈತರ-ರೈತ ಕುಟುಂಬಗಳ ಸರಣಿ ಆತ್ಮಹತ್ಯೆಗಳ ...ಸ್ಫೋಟಕ ಸ್ಥಿತಿಯ ಹಿನ್ನೆಲೆಯಲ್ಲಿ ಸರ್ಕಾರ ಏನೂ ...ಮಾಡುತ್ತಿಲ್ಲವೆಂದು ಭಾವನೆ ಸಾರ್ವತ್ರಿಕ ...ವಾಗುತ್ತಿರುವಂತೆಯೇ ಆ ಕಳಂಕದಿಂದ ...ರಾಗಲೋ ಎಂಬಂತೆ ಮುಖ್ಯಮಂತ್ರಿ ...ಸ್.ಎಂ.ಕೃಷ್ಣರವರ ಸರ್ಕಾರ ದಡಬಡಾಯಿಸಿ ...ಂದಿಷ್ಟು ಪರಿಹಾರದ ಸೂತ್ರಗಳನ್ನು ಪ್ರಕಟಿಸಿದೆ. ... ಸೂತ್ರವು ಸಚಿವ ಸಂಪುಟ ಹೇಳಿದಂತೆ 856 ...ಕೋಟಿ ರೂಪಾಯಿಗಳು ವಿವಿಧ ಕ್ರಮಗಳನ್ನು ...ಂದಿರುತ್ತದೆ. ಹತಾಶೆಗೊಂಡ ಕೃಷಿಕರ ಮನದಲ್ಲಿ ...ಂದಷ್ಟು ನಂಬುಗೆಯನ್ನು ಚಿಗುರಿಸಿತು ನಿಜ.

ಆದರೆ ರೈತರ ಆತ್ಮಹತ್ಯೆಗೆ ದೂಡುತ್ತಿರುವ ...ಮೂಲಭೂತ ಅಂಶಗಳತ್ತ ಸರ್ಕಾರದ ಗಮನವೇ ...ಲ್ಲದಿರುವುದು ಆತಂಕಕಾರಿಯಾಗಿದೆ. ರಾಜ್ಯದ ...ರು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಸಾಲ-...ಲದ ಭಾಧೆ. ಈಗ ಸಹಕಾರಿ ಸಂಘಗಳಲ್ಲಿರುವ ...ಲದ ಮೇಲಿನ ಬಡ್ಡಿಯನ್ನು ಮನ್ನಾ ...ಡಲಾಗಿದೆ. ದೀರ್ಘಾವಧಿ ಸಾಲದ ಮೇಲಿನ ...ಬಡ್ಡಿದರ ಶೇ.14.5 ರಿಂದ ಶೇ.9ಕ್ಕೆ ಇಳಿಸಲಾಗಿದೆ. ...ಕ್ಕಾಗಿ 40.30 ಕೋಟಿ ಮೀಸಲಾಗಿರಿಸಲಾಗಿದೆ. ...ರೀಗ ಸಾಲವನ್ನು ಕಟ್ಟಲಾಗದ ಗಂಭೀರ ...ಸ್ಥಿತಿಯನ್ನು ಇವರು ಎದುರಿಸುತ್ತಿದ್ದಾರೆ. ...ರಿಂದ ಅಂತಹ ಸಾಲದ ಮನ್ನಾವೇ ಆಗಬೇಕು. ...ಲಾಗಿ ಬಹಳಷ್ಟು ರೈತರು ಸಾಹುಕಾರರ ಸಾಲದ ...ಗೆ ಸಿಕ್ಕಿರುವುದೇ ಹೆಚ್ಚು. ಇದನ್ನು ತಪ್ಪಿಸಲು ...ಸ ಸಾಲ ನೀಡುವ ವ್ಯವಸ್ಥೆ ಅತ್ಯಗತ್ಯವಾಗಿದೆ. ...ವ ಸಂಪುಟವು ಇದರತ್ತ ಚಿಂತಿಸಿಲ್ಲ. ...ಹುಕಾರರ ಸಾಲದ ಮೇಲಿನ ಹೆಚ್ಚಿನ ಬಡ್ಡಿಯ ...ನಿಯಂತ್ರಣ ಮಾಡುವುದರತ್ತ ಕ್ರಮವಹಿಸುವುದಾಗಿ ...ನೋ ಹೇಳಿದ್ದಾರೆ. ಇದು ತುರ್ತಾಗಿ ...ಬೇಕು.

...ತಹ ಸಾಂತ್ವನ?


2001 ರ ಮಾರ್ಚ್ ನಂತರದ ವಿದ್ಯುತ್ ಬಾಕಿ ... ಕೋಟಿ, 107 ಕೋಟಿ ರೂ. ನೀರಿನ ...ಯ ಬಾಕಿ, 3.50 ಕೋಟಿ ಭೂಕಂದಾಯ ... ಮಾಡಿರುವುದಾಗಿ ಹೇಳಿದೆ. ಸೋಯಾ, ...ಳ, ಸೂರ್ಯಕಾಂತಿಯನ್ನು ಕನಿಷ್ಟ ಬೆಂಬಲ ...ಯಲ್ಲಿ ಖರೀದಿಸಲು 200 ಕೋಟಿ ರೂ. ...ರ್ತ ನಿಧಿ ಸ್ಥಾಪಿಸಲಾಗುವುದು ಎಂದಿದೆ. ...ದರೆ ಪ್ರತಿವರ್ಷವೂ ಬೆಲೆ ಕುಸಿತದ ...ಗೀಡಾಗುವ ತೊಗರಿ, ಶೇಂಗಾ, ಭತ್ತ, ...ಯಂತಹ ಫಸಲುಗಳ, ಬೆಳೆದ ರೈತರ ...ೇನು? ಇರಿಸಲಾಗಿರುವ ಈ ಆವರ್ತ ನಿಧಿ ...ದಕ್ಕೆ ಸಾಲುತ್ತದೆ. ವಿದ್ಯುತ್ ಬಾಕಿಯೂ ಸಹ ...ರ ಹಿಂದಿನದ್ದನ್ನೂ ಮನ್ನಾ ಮಾಡಲು ರೈತರು ...ವಳಿ ನಡೆಸಿದ್ದರು. ಸರ್ಕಾರ ನೀಡಿರುವ ...ತ್ ಬಾಕಿಯ ಬಿಲ್ ಅತ್ಯಂತ ಅವೈಜ್ಞಾನಿಕ, ...ಸ್ತವಿಕತೆಯಿಂದ ಕೂಡಿತ್ತು. ವಿದ್ಯುತ್ ...ರಾಜು ಸಮರ್ಪಕವಾಗಿಸಲು ಕ್ರಮಗಳಿಲ್ಲ. ...ಾಗಿ ವಿದ್ಯುತ್ ಕಡಿತದ ಹೊಸ ಪ್ರಸ್ತಾಪವಿದ್ದು ...ಸೆಟ್ ರೈತರಿಗೆ ಭಾದೆ ತಪ್ಪಿದ್ದಲ್ಲ. ಹೀಗೆ ...ರದ ಕ್ರಮಗಳು ಕೊಂಚ 'ಸಾಂತ್ವನ' ಹೇಳುವ ...ಂದು ಬಣ್ಣಿಸಿಕೊಂಡರೂ ಮೂಲಭೂತ ಸಮಸ್ಯೆಯನ್ನು ಬಗೆಹರಿಸಲಾರದು.

...ಜಕ್ಕೂ ರೈತರನ್ನು ಉಳಿಸಬೇಕೆಂದರೆ ...ಸಿತ ತಡೆಯಬೇಕು. ವಿದೇಶಿ ವಸ್ತುಗಳ ...ಗೆ ತಡೆಯೊಡ್ಡಬೇಕು. ಪ್ರಮಾಣಾತ್ಮಕ ...ಧ ಪುನಃ ಹೇರಬೇಕು. ವಿದ್ಯುತ್ ದರಗಳ ಹಿಂತೆಗೆಯಬೇಕು. ಆದರೆ ಇವುಗಳತ್ತ ...ದ ಗಮನವೇ ಇಲ್ಲ.

...ಲಿಕಾರರತ್ತ ತೀರಾ ನಿರ್ಲಕ್ಷ್ಯ

...ನ್ನೊಂದೆಡೆ ರಾಜ್ಯದಲ್ಲಿ ಕೃಷಿ ಕೂಲಿಕಾರರು ...ಸುತ್ತಿರುವ ಸಂಕಷ್ಟಗಳತ್ತ ಕೃಷ್ಣರ ಸರ್ಕಾರದ ...ತೀರಾ ನಿರ್ಲಕ್ಷ್ಯ ವಹಿಸಿದೆ. ಭೀಕರ ...ದ ಹಿನ್ನೆಲೆಯಲ್ಲಿ ಕೆಲಸ ಹುಡುಕಿಕೊಂಡು ...ಲ್ಲಿ ಒಂದೆರಡು ದಿನಗಳಾದರೂ ಕೆಲಸ ...ಎಂದು ಗುಳೆ ಹೋಗುತ್ತಿದ್ದಾರೆ. ಜೀವನ ...ಳಿಗೆ ಅಂಡಲೆಯುತ್ತಿದ್ದಾರೆ. ಕೃಷಿ

ಕೃಷ್ಣರ ಸೂತ್ರ ಮೂಲಭೂತ ಸಮಸ್ಯೆಗಳತ್ತ ಒಟ್ಟು ನೀಡಿಲ್ಲ. ಪರಿಹಾರದ ಹೊರೆಯನ್ನು ಮತ್ತೇ ದುಡಿಯುವ ವರ್ಗದ ಹೆಗಲಿಗೇರಿಸಿದೆ.



ಕೂಲಿಕಾರರಿಗೆ ಕೆಲಸ ಸೃಷ್ಟಿಸುವ ಯೋಜನೆಗಳೇ ಇಲ್ಲಿಲ್ಲ. ಕೂಲಿಗಾಗಿ ಕಾಳು ಯೋಜನೆಯಂತೆ ಕಾಳು ಹಾಗೂ ಒಂದಿಷ್ಟು ಭಾಗ ಹಣ ನೀಡುವುದು ತಕ್ಷಣದ ಅಗತ್ಯವಾಗಿದೆ. ಈ ದಿಶೆಯಲ್ಲಿ ಬರದ ಕಾಮಗಾರಿಗಳನ್ನು ವ್ಯಾಪಕವಾಗಿ ಕೈಗೊಳ್ಳಬೇಕು. ಕಡಿಮೆ ಧರದಲ್ಲಿ ಆಹಾರ ಪಡಿತರ ವಸ್ತುಗಳನ್ನು ರೇಷನ್ ಅಂಗಡಿಗಳ ಮೂಲಕ ನೀಡಬೇಕು. ಆದರೆ ಇವಾವುದನ್ನು ಕೃಷ್ಣರ ಸಂಪುಟ ಗಮನಿಸದೇ ಇರುವುದು ಆಘಾತಕಾರಿ.

ಕೇಂದ್ರದ ಹೊಣೆಗೇಡಿತನ

ಒಟ್ಟಾರೆ ರೈತ ಕೃಷಿ ಕೂಲಿಕಾರರನ್ನು ರಕ್ಷಿಸುವಲ್ಲಿ ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರದ ಹೊಣೆಯೂ ಪ್ರಮುಖವಿದೆ. ಕೇಂದ್ರದ ವಾಜಪೇಯಿ ಸರ್ಕಾರವೂ ಇದಕ್ಕಾಗಿ ಹೆಚ್ಚಿನ ನೆರವು ನೀಡಲೇಬೇಕು. ಆದರೆ ಅದು ಹೊಣೆಗೇಡಿತನದಿಂದ ವರ್ತಿಸುತ್ತಿದೆ. ಅದಕ್ಕಾಗಿ ರಾಜ್ಯ ಸರ್ಕಾರವು ಹೆಚ್ಚಿನ ಅಗತ್ಯವಾದ ಧಾನ್ಯ-ಧನ ಸಹಾಯ ಪಡೆಯುವ ಕೇಂದ್ರದ ಮೇಲೆ ಒತ್ತಡ ಹಾಕಬೇಕು, ಹೋರಾಡಬೇಕು.

ಸಹಾಯ ಕಡಿತ ಹಿಂತೆಗೆದುಕೊಳ್ಳಿ

ಕೃಷ್ಣರ ಸರ್ಕಾರಕ್ಕೆ ಈ ಸನ್ನಿವೇಶವನ್ನು ಎದುರಿಸಲು ಪ್ರಾಮಾಣಿಕ ಮನಸ್ಸಿದೆಯೇ ಎಂಬ ಪ್ರಶ್ನೆ ಏಳುತ್ತದೆ. ಈಚೆಗಿನ ವಿಧಾನ ಸಭೆಯಲ್ಲಿ 'ಕೃಷಿ -ಆರೋಗ್ಯ ವಿದ್ಯುತ್ ಕ್ಷೇತ್ರ, ಶಿಕ್ಷಣ, ಸರ್ಕಾರಿ ಆಡಳಿತದ ಗಾತ್ರದ ಕಡಿತಕ್ಕೆ ಸಹಾಯಧನದ ಹಿಂತೆಗೆತ ನಿರ್ಧಾರ ಪ್ರಕಟಿಸಿತ್ತು. ಇಂತಹ ಸಹಾಯಧನದ ಕಡಿತ ಜನರ ಆರೋಗ್ಯ ಶಿಕ್ಷಣದಂತಹ ಮೂಲಭೂತ ಅಗತ್ಯಗಳನ್ನು ರಕ್ಷಿಸೀತೇ? ಖಂಡಿತ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರ ತನ್ನ ನಿರ್ಧಾರ ಹಿಂತೆಗೆಯಲೇಬೇಕು. ವಿಶೇಷವಾಗಿ ಬರಪೀಡಿತ ಎಲ್ಲಾ ಪ್ರದೇಶಗಳಲ್ಲಿ ಶಿಕ್ಷಣದ ಶುಲ್ಕವನ್ನು 'ಮಾಫಿ' ಮಾಡಬೇಕು. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಆಸ್ಪತ್ರೆಗಳಲ್ಲಿ ವಿಧಿಸುತ್ತಿರುವ ಶುಲ್ಕಗಳನ್ನು ರದ್ದುಗೊಳಿಸಬೇಕು.

ಶ್ರೀಮಂತರಿಂಗೆ ತುಂಬಿದೆ ತಿಜೋರಿ ದುಡಿವವರ ಕಿಸೆಗೇಕೆ ಕತ್ತರಿ!

ಇಂತಹ ಸಾಂತ್ವನದ ಸೂತ್ರಕ್ಕೆ ಹಣ ಕ್ರೋಡೀಕರಿಸುತ್ತಿರುವ ಕೃಷ್ಣರ ಸರ್ಕಾರದ ವಿಧಾನಗಳು ವಿಚಿತ್ರ ಇವೆ. ರಾಜ್ಯದಲ್ಲಿರುವ ಹಣವಂತರ ಕಡೆಗೆ ವಿಶಿಷ್ಟ ಕಣ್ಣು ಹಾಯಿಸದೇ ದುಡಿಯುವ ನೌಕರರ ಜೇಬಿಗೆ ಕತ್ತರಿ ಹಾಕಿದೆ. ಏಳು ತಿಂಗಳುಗಳವರೆಗೆ ಸರ್ಕಾರಿ ನೌಕರರ ಸಂಬಳದಲ್ಲಿ ಪ್ರತಿ ತಿಂಗಳು ಒಂದು ದಿನದ ಸಂಬಳವನ್ನು ಇದಕ್ಕಾಗಿ ಕಡಿತ ಮಾಡಲಾಗುವುದು. ರಜಾನಗದು ರದ್ದುಪಡಿಸಲಾಗಿದೆ. ಈ ವರ್ಷದ ಜುಲೈ 1 ರಿಂದ ನೀಡಬೇಕಾಗಿದ್ದ ತುಟ್ಟಿ ಭತ್ಯೆ ಸ್ಥಗಿತಗೊಳಿಸಲಾಗಿದೆ. ಪಿಂಚಣಿ ಯೋಜನೆಯಲ್ಲಿಯೂ ಕಡಿತ ಮಾಡಲಾಗಿದೆ. ರಾಜ್ಯದ ಉದ್ಯಮ ಪತಿಗಳಿಗೆ ನೂರಾರು ಕೋಟಿ ರಿಯಾಯತಿ ಘೋಷಿಸುವ ಕೃಷ್ಣರವರು ಸಂಕಷ್ಟದ ಸಂದರ್ಭದಲ್ಲಿ ಅವರಿಂದಲೂ ಗ್ರಾಮೀಣ ಪ್ರದೇಶದ ಶ್ರೀಮಂತರಿಂದ ಸಂಪನ್ಮೂಲ ಕ್ರೋಡೀಕರಿಸಬೇಕಿತ್ತು. ದುಡಿಯುವ ವರ್ಗವನ್ನೇ ಅವರ ದುಡಿತದ ಫಲವನ್ನು ದೋಚುವ ನೀತಿ ಖಂಡನಾರ್ಹ. ಮೇಲಾಗಿ ಇಂತಹ ತೀರ್ಮಾನವನ್ನು ಕೃಷ್ಣರ ಸಂಪುಟವು ಸಂಬಂಧಿಸಿದವರ ಜೊತೆಯಲ್ಲಿ ಚರ್ಚೆಯನ್ನೂ ಮಾಡದೇ ಏಕಪಕ್ಷೀಯವಾಗಿ ತೆಗೆದುಕೊಳ್ಳುತ್ತಿದೆ. ದುಡಿಯುವ ನೌಕರರ ಶ್ರಮದ ಫಲ ಕಿತ್ತುಕೊಳ್ಳಲು ಕೃಷ್ಣರವರಿಗೆ

ಈವಾರ ಕರ್ನಾಟಕ
ಒಂದು ನೋಟ
ಎಸ್ ವೈ ಗುರುಶಾಂತ್

ಅಧಿಕಾರ ಕೊಟ್ಟವರಾರು? ನೌಕರರೆಂದರೆ ಇವರ ಗುಲಾಮರೆಂದು ಸರ್ಕಾರ ಭಾವಿಸಿದೆಯೇ? ಸರ್ಕಾರ ಏನು ಮಾಡಿದರೂ ಯಾರೂ ಪ್ರಶ್ನಿಸಬಾರದು, ಪ್ರತಿಭಟಿಸಬಾರದು. ಸರ್ಕಾರಿ ನೌಕರರ ಮುಷ್ಕರ ನಿಷೇಧದ ತೀರ್ಪನ್ನು ಈ ಸರ್ಕಾರಗಳು ಬಳಸುತ್ತಿವೆ. ಇಂತಹುದೇ ತೀರ್ಪನ್ನು ಬಳಸಿಯೇ ಆಡಳಿತದ ಕಡಿತಕ್ಕೆ ಮುಂದಾಗಿ ರೇಷ್ಮೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯನ್ನೇ ಮುಚ್ಚಿ ನೌಕರರನ್ನು ಮನೆಗೆ ಕಳುಹಿಸಲಾಗುತ್ತಿದೆ. ಈ ನಿರ್ಧಾರ ಕೃಷಿಕರಿಗೂ, ಸಣ್ಣ ಕೈಗಾರಿಕೆಗಳಿಗೂ ಮಾರಕವಾದುದು. ಈಗಲೇ ಸ್ವಯಂ ನಿವೃತ್ತಿ ಯೋಜನೆಯನ್ನು ಹೇರಲಾಗುತ್ತಿದೆ. ಇವುಗಳನ್ನು ಯಾರೂ ಪ್ರತಿಭಟಿಸಬೇಕಿಲ್ಲ! ಸುಪ್ರಿಂ ಕೋರ್ಟಿನ ತೀರ್ಪು ಇದೆಯಲ್ಲ! ಇಂತಹ ಕ್ರಮಗಳನ್ನು ನೌಕರರ ಸಂಘಟನೆಗಳು, ಪ್ರಜಾಸತ್ತಾತ್ಮಕ ಶಕ್ತಿಗಳು ಸಹಿಸಬಾರದು.

WTO ಸಭೆಯಲ್ಲಿ ಭಾರತ ?

ಇನ್ನೊಂದು ಮಹತ್ವದ ಅಂಶ ಸೆಪ್ಟೆಂಬರ್ 9 ರಂದು ಕಾನ್‌ಕೋನ್‌ನಲ್ಲಿ ವಿಶ್ವವಾಣಿಜ್ಯ ಸಂಘದ ಸಭೆ ಆರಂಭವಾಗುತ್ತಿದೆ. ಇದರಲ್ಲಿ ಕೃಷಿ ಉತ್ಪನ್ನಗಳ ಆಮದನ್ನು ನಿಯಂತ್ರಿಸಲು ಮತ್ತೆ ಪ್ರಮಾಣಾತ್ಮಕ ನಿರ್ಬಂಧ ವಿಧಿಸಲು ಕೃಷಿಗೆ ಅಮೇರಿಕ ಮುಂತಾದ ಶ್ರೀಮಂತ ರಾಷ್ಟ್ರಗಳು ನೀಡುತ್ತಿರುವ ವಿಪರೀತ ಸಬ್ಸಿಡಿಯನ್ನು ಕಡಿತ ಮಾಡಲು ಭಾರತ ಸರ್ಕಾರವು ಅಭಿವೃದ್ಧಿಶೀಲ ರಾಷ್ಟ್ರಗಳ ಜೊತೆಗೂಡಿ ಒತ್ತಡತರಬೇಕು. ಅಮೇರಿಕದ ಒತ್ತಡಕ್ಕೆ ಮಣಿಯಬಾರದು. ಇದಕ್ಕಾಗಿ ಕೇಂದ್ರದ ಮೇಲೆ ರಾಜ್ಯ ಸರ್ಕಾರವು ಒತ್ತಡ ಹಾಕಬೇಕಿದೆ. ಒಟ್ಟಾರೆ ಕೃಷ್ಣರ ಸರ್ಕಾರ ಇಂದಿನ ಗಂಭೀರ ಪರಿಸ್ಥಿತಿಯನ್ನು ಅರಿತು ತನ್ನ ನೀತಿಯಲ್ಲಿ ಪುನರ್ ಬದಲಾವಣೆ ಮಾಡಿಕೊಳ್ಳಬೇಕು.

ಉತ್ತರ ಕರ್ನಾಟಕದಲ್ಲೇ ಹೈಕೋರ್ಟ್ ಪೀಠ

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ವಿಷಯವು ಮತ್ತೇ ವಿವಾದವಾಗಿ ಎದ್ದಿದೆ. ಕರ್ನಾಟಕದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಉತ್ತರ ಕರ್ನಾಟಕದಲ್ಲಿ ನ್ಯಾಯಪೀಠದ ಸ್ಥಾಪನೆಯನ್ನು ನಿರಾಕರಿಸಿ ಸರ್ಕಾರಕ್ಕೆ ವರದಿಯನ್ನು ನೀಡಿದ್ದಾರೆ. ಇದನ್ನು ವಿರೋಧಿಸಿ ನ್ಯಾಯಪೀಠಕ್ಕಾಗಿ ಧಾರವಾಡ, ಗುಲ್ಬರ್ಗಾ, ವಿಜಾಪುರ ಮುಂತಾದೆಡೆಗಳಲ್ಲಿ ಚಳುವಳಿ ನಡೆದಿದೆ.

ಉತ್ತರ ಕರ್ನಾಟಕದಲ್ಲಿ ನ್ಯಾಯಪೀಠದ ಸ್ಥಾಪನೆಯನ್ನು ಒಂದು ವಿವಾದವನ್ನಾಗಿಯೇ ಬೆಳೆಸಲಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ನ್ಯಾಯಪೀಠ ಸ್ಥಾಪನೆಯಾಗುವುದು ಅತ್ಯಗತ್ಯ. ಹಿಂದೆಯೂ ಹಲವಾರು ನ್ಯಾಯಮೂರ್ತಿಗಳು ಇದರ ಅಗತ್ಯವನ್ನು ಮನಗಂಡು ಸರ್ಕಾರಕ್ಕೆ ಶಿಫಾರಸ್ಸಿನ ವರದಿ ನೀಡಿಯೂ ಇದ್ದಾರೆ. ಈಗ ಮುಖ್ಯನ್ಯಾಯಮೂರ್ತಿಗಳಾದ ಶ್ರೀ ಜೈನ್‌ರವರು ನೀಡಿರುವ ವರದಿಯನ್ನು ಒಪ್ಪಲಾಗದು. ಅದೇನಿದ್ದರೂ ಅವರೆಂತಹ ಸ್ಥಾನದಲ್ಲಿದ್ದರೂ ಅದು ಒಬ್ಬ ವ್ಯಕ್ತಿಯ ವರದಿ ಅಷ್ಟೇ. ಆದ್ದರಿಂದ ಹೈಕೋರ್ಟ್ ಪೀಠದ ಸ್ಥಾಪನೆಗೆ ಅಗತ್ಯವಾದ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು.

ನಾಗೇಗೌಡರ ನೇಮಕ : ವಿಲೀನಕ್ಕೆ ಅಡ್ಡಿಯೇ?

ಅಖಿಲ ಭಾರತ ಪ್ರಗತಿಪರ ಜನತಾದಳದ ಕರ್ನಾಟಕದ ಘಟಕದ ಅಧ್ಯಕ್ಷರಾಗಿ ಮಾಜಿ ಸಚಿವ ನಾಗೇಗೌಡರ ನೇಮಕವಾಗಿದೆ. ಹಾಲಿ ಶಾಸಕರೂ, ಮಾಜಿ ಸಚಿವರಾಗಿದ್ದ ಶ್ರೀ ಸಿ.ಭೈರೇಗೌಡರ ಅಕಾಲಿಕ ನಿಧನದಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನ ತುಂಬಲಾಗಿದೆ. ಈ ನೇಮಕಾತಿಯ ಬಗ್ಗೆ ಹೊರಗೆ ಮಾತ್ರವಲ್ಲ, ಅ.ಭಾ.ಪ್ರ. ಜನತಾದಳದ ಒಳಗೂ ಅಸಮಾಧಾನ ಮತ್ತು ಅತೃಪ್ತಿಯನ್ನು ಹುಟ್ಟುಹಾಕಿದೆ. ಬಹಿರಂಗ ಟೀಕೆಗಳು ಕೇಳಿಬಂದಿವೆ. ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾಗಿ ಜನತಾದಳ ಬಲಿಷ್ಟವಾಗಿ ರೂಪುಗೊಳ್ಳಲು ಎಲ್ಲಾ ಬಣಗಳ ವಿಲೀನದ ಪ್ರಕ್ರಿಯೆ ಒಂದು ಪ್ರಮುಖ ಅಂಶವೆಂಬುದು ನಿರ್ವಿವಾದ. ಈ ದಿಕ್ಕಿನಲ್ಲಿ ವಿಲೀನದ ಪ್ರಕ್ರಿಯೆ ಮತ್ತು ಇತರೆಡೆಗಳ ನಾಯಕರುಗಳನ್ನು ಒಳಗೊಳ್ಳಲು ಪ್ರಯತ್ನಗಳು ನಡೆದಿವೆ. ಕೊಂಚ ಯಶಸ್ಸು ಕಂಡಿದೆ. ಜೆಡಿ(ಎಸ್)ನೊಂದಿಗೆ ಜೆಡಿ(ಯು) ವಿಲೀನವಾದಾಗ, ಅದಕ್ಕಾಗಿ ಜನತೆಯಿಂದ ದೊರೆತ ಅಪೂರ್ವ ಸ್ಪಂದನ ಗಮನಾರ್ಹ. ಇಂತಹ ಪ್ರಕ್ರಿಯೆಯು ಉಳಿದ ದೊಡ್ಡ ಬಣವಾದ ಎಐಪಿಜೆಡಿನಲ್ಲಿಯೂ ಬರಬೇಕು ಎಂಬ ನಿರೀಕ್ಷೆ ಸಹಜ. ಹಾಗಾಗಿ ವಿಲೀನಕ್ಕೆ ಸಹಕಾರಿಯಾಗುವಂತಹವರು ಎಐಪಿಜೆಡಿಯ ಅಧ್ಯಕ್ಷರಾಗಿರಬೇಕೆಂಬ ಮಾತು ಕೇಳಿಬಂದಿತ್ತು. ಎಐಪಿಜೆಡಿಯ ಬಹಳಷ್ಟು ನಾಯಕರಲ್ಲಿ ಜೆಡಿ(ಎಸ್) ಜೊತೆಗೆ ವಿಲೀನವಾಗಲು ಒಲವು ಉಳ್ಳವರು ಗಣನೀಯ ಸಂಖ್ಯೆಯಲ್ಲಿರುವುದಾಗಿ ವರದಿಯಾಗಿದೆ. ಆದರೆ ನಾಗೇಗೌಡರವರು ವಿಲೀನಕ್ಕೆ ವಿರೋಧ ಎಂಬುದೇ ಅವರ ನೇಮಕಾತಿಯ ಬಗ್ಗೆ ಎದ್ದ ಭಿನ್ನ ಸ್ವರಕ್ಕೆ ಕಾರಣ. ಈ ವಿಲೀನಕ್ಕೆ ವಿರೋಧವಾಗಿರುವ ರಾಮಕೃಷ್ಣ ಹೆಗಡೆಯವರ ತಂತ್ರ ಇದಾಗಿದೆ ಎಂಬುದು ಹಿನ್ನೆಲೆಯ ಸುದ್ದಿ. ಯಾರು ಹೋದರೂ ಎಐಡಿಜೆಡಿ ಅಸ್ತಿತ್ವ ಉಳಿಸಿಕೊಳ್ಳುವುದು, ಜನತಾದಳದ ಬಣಗಳು ವಿಘಟನೆಯಾಗಿ ಉಳಿಯಲು ಎಷ್ಟು ಸಾಧ್ಯವೋ ಅಷ್ಟು ಉಳಿಸಿಕೊಳ್ಳುವದು. ಮುಖ್ಯವಾಗಿ ಜೆಡಿ(ಎಸ್) ಒಂದು ಪರ್ಯಾಯ ಶಕ್ತಿಯಾಗಿ ರಾಜ್ಯದಲ್ಲಿಯೂ ಆ ಮೂಲಕ ರಾಷ್ಟ್ರದಲ್ಲಿಯೂ ಬರಬಾರದೆಂಬ ತಂತ್ರ ಗೊತ್ತಿರುವಂತಹದೇ. ಇಂತಹ ಹಾದಿ ಹಿಡಿದವರು, ಅವರನ್ನು ನಂಬಿದವರು ಯಾವ ಕಂದರಕ್ಕೆ ಬೀಳಬಹುದು ಎಂದು ಈಗಲೇ ಊಹಿಸುವುದು ಕಷ್ಟ ಎನ್ನುತ್ತಾರೆ ತಿಳಿದವರು.

ಇಂತಹ ಸ್ಥಿತಿಯಲ್ಲಿ ಎಐಪಿಜೆಡಿಯಿಂದ ಅನೇಕರು ಜೆಡಿ(ಎಸ್) ನತ್ತ ಹೊರ ನಡೆಯಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ವರ್ತಮಾನ ಪತ್ರಿಕೆಗಳಿಂದ ದೊರೆತ ಮಾಹಿತಿ. ಕಾದು ನೋಡೋಣ!

ಕೃಷ್ಣಾ ನೀರು : ನ್ಯಾಯಮಂಡಳಿ ರಚನೆ

ಕೃಷ್ಣಾ ಕಣಿವೆಯ ... ನೀರಿನ ಹಂಚಿಕೆಯನ್ನು ಇತ್ಯರ್ಥಗೊಳಿಸಲು ಕೇಂದ್ರ ಸರ್ಕಾರವು 'ನ್ಯಾಯಮಂಡಳಿ' ರಚನೆಗೆ ಮುಂದಾಗಿದೆ. ಇದು [illegible]

ಇರಾಕ್ ಯುದ್ಧ ಮತ್ತು ಆಟೋ ಚಾಲಕರು ! ಸಂಬಂಧವೇನು ?

ಆಟೋರಿಕ್ಷಾ ಚಾಲಕರಿಗೂ ಇರಾಕ್ ಮೇಲೆ ಅಮೇರಿಕಾ ನಡೆಸಿದ ಯುದ್ಧಕ್ಕೂ ಎಲ್ಲಿಯ ಸಂಬಂಧ? ಎಂದು ನೀವು ಹುಬ್ಬೇರಿಸಬಹುದು. ಸಂಬಂಧವಿದೆ ಎಂದು ಹೇಳುತ್ತಾರೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅವರು ಬೆಂಗಳೂರಿನ ಗೌಡನ ಪಾಳ್ಯದಲ್ಲಿ ಅಗಸ್ಟ್ 15 ರಂದು ನಡೆದ ಸಿ.ಐ.ಟಿ.ಯು. ಸಂಯೋಜಿತ ಆಟೋರಿಕ್ಷಾ ಚಾಲಕರ ಸಂಘದ 28 ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ

ಎಆರ್‌ಡಿಯು ವಾರ್ಷಿಕ ಸಮ್ಮೇಳನ



ಮಾತನಾಡುತ್ತಾ ಹೇಳಿದ್ದು ಹೀಗೆ.

ಅಮೇರಿಕಾ ಸದ್ದಾಂ ಹುಸೇನ್ ಮತ್ತು ಸಾಮೂಹಿಕ ವಿನಾಶಕಾರಿ ಶಸ್ತ್ರಾಸ್ತ್ರ ನಾಶ ಮಾಡುವ ನೆಪ ಹೂಡಿ ಇರಾಕ್ ಮೇಲೆ ಯುದ್ಧ ಸಾರಿತು. ಆದರೆ ನಿಜವಾದ ಉದ್ದೇಶ ಇರಾಕ್‌ನಲ್ಲಿರುವ ಭಾರೀ ತೈಲ ಸಂಪತ್ತನ್ನು ವಶಪಡಿಸಿಕೊಳ್ಳುವುದೇ ಆಗಿತ್ತು. ಶಸ್ತ್ರಾಸ್ತ್ರ ನಾಶ ಕೇವಲ ನೆಪ ಮಾತ್ರ ಎಂಬುದು ಯುದ್ಧಾ ನಂತರ ಜಗತ್ತಿಗೇ ತಿಳಿದಿದೆ. ಹೀಗೆ ತೈಲ ಸಂಪತ್ತನ್ನು ವಶಪಡಿಸಿಕೊಳ್ಳುವ ಮೂಲಕ ಜಗತ್ತಿನ ತೈಲ ವ್ಯವಹಾರದಲ್ಲಿ ಬಲಿಷ್ಠವಾಗಲು ಅಮೇರಿಕಾ ಮುಂದಾಗಿದೆ. ತೈಲ ಬೆಲೆ ಅಮೇರಿಕಾದ ನಿರ್ಧಾರಕ್ಕನುಗುಣವಾಗಿ ನಿಗದಿಯಾಗುತ್ತದೆ. ಇದು ಬೆಂಗಳೂರಿನ ಆಟೋ ಚಾಲಕರ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಸವಿವರವಾಗಿ ವಿವರಿಸಿದ ಜಿ.ಎನ್. ನಾಗರಾಜ್‌ರವರು ಅಫಘಾನಿಸ್ತಾನದ ಮೇಲೆ ಮಾಡಿದ ಯುದ್ಧವೂ ಸಹಾ ಬಿನ್ ಲಾಡೆನ್‌ನನ್ನು ಕೊಲ್ಲುವುದಕ್ಕಲ್ಲ ಅದು ನೆಪ ಮಾತ್ರ ಎಂದರು.

ಆಟೋ ಚಾಲಕರು ಸರ್ಕಾರದ ಇಂತಹ ನೀತಿಗಳ ವಿರುದ್ಧ ಹೋರಾಟಕ್ಕೆ ಮುಂದಾಗಬೇಕೆಂದು ಆಟೋ ಚಾಲಕರಿಗೆ ಕರೆ ನೀಡಿದರು.

ಕೋಮುವಾದ ವಿರುದ್ಧ ಹೋರಾಡಿ

ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮತ್ತು ಸಂಘದ ಅಧ್ಯಕ್ಷರಾದ ಮೀನಾಕ್ಷಿ ಸುಂದರಂ ಮಾತನಾಡಿ ಕೋಮುವಾದಿಗಳು ಆಟೋ ಚಾಲಕರಲ್ಲಿ ಒಡಕನ್ನುಂಟು ಮಾಡಲು ಯತ್ನಿಸುತ್ತಿದ್ದಾರೆ. ಚಾಲಕರು ಎಚ್ಚರದಿಂದಿರಬೇಕು ಎಂದರು. ಗುಜರಾತ್ ಗಲಭೆಯ ನಂತರದ ಪರಿಸ್ಥಿತಿಯನ್ನು ಉದಾಹರಣೆ ಸಹಿತ ವಿವರಿಸಿದ ಅವರು ಇತ್ತೀಚೆಗೆ ಅಹ್ಮದಾಬಾದ್ ನಗರದ ಆಟೋ ಚಾಲಕರ ಸ್ಥಿತಿಯಿಂದ ನಾವು ಎಚ್ಚರಗೊಳ್ಳಬೇಕು. ಅಲ್ಲಿಯ ಚಾಲಕರು ತಮ್ಮ ಆಟೋಗಳ ಮೇಲೆ ತಮ್ಮ ಧರ್ಮವನ್ನು ಪ್ರತಿಬಿಂಬಿಸುವ ಚಿನ್ಹೆಗಳನ್ನು (ಓಂ, ಚಂದ್ರ ಅಥವಾ ಶಿಲುಬೆ) ಬರೆದುಕೊಂಡಿದ್ದಾರೆ. ಚಿಹ್ನೆಯನ್ನು ನೋಡಿ ಆಯಾ ಧರ್ಮದ ಪ್ರಯಾಣಿಕರೆ ಆಟೋ ಹತ್ತಬೇಕು. ಒಂದು ವೇಳೆ ಬೇರೆ ಧರ್ಮದ ಪ್ರಯಾಣಿಕರನ್ನು ಕರೆದೊಯ್ದರೆ, ಆ ಚಾಲಕನ ಮೇಲೆ ಮತ್ತೊಂದು



ಧರ್ಮದ ಚಾಲಕರೇ ಹಲ್ಲೆ ಮಾಡುತ್ತಾರೆ. ಇಂತಹ ಸ್ಥಿತಿ ಬೆಂಗಳೂರಿಗೆ ಬರದಂತೆ ಆಟೋ ಚಾಲಕರು ಜಾಗ್ರತೆ ವಹಿಸಬೇಕು ಎಂದು ಹೇಳಿದರು.

ನಗರದಲ್ಲಿ ಆಟೋರಿಕ್ಷಾಗಳಿಗೆ ಮತ್ತಷ್ಟು ಹೊಸ ಪರ್ಮಿಟ್‌ಗಳನ್ನು ಕೊಡಲು ಮುಂದಾಗಿರುವ ಸರ್ಕಾರದ ನಿರ್ಧಾರವನ್ನು ಬಲವಾಗಿ ಖಂಡಿಸಿದ ಮೀನಾಕ್ಷಿ ಸುಂದರಂ, ಸರ್ಕಾರ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ನೆಪದಲ್ಲಿ ಆಟೋ ಪರ್ಮಿಟ್ ನೀಡಿ ನಿರುದ್ಯೋಗಿಗಳನ್ನು ಸಾಲದ ಕೂಪಕ್ಕೆ ತಳ್ಳುತ್ತಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಮನಸ್ಸಿದ್ದರೆ ಹೊಸ ಹೊಸ ಉದ್ಯೋಗ ಸೃಷ್ಟಿಸಲಿ. ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚು ಗಮನ ನೀಡುವ ಮೂಲಕ ಹಳ್ಳಿಗಳಿಂದ ಕೆಲಸ ಅರಸಿ ನಗರಗಳಿಗೆ ವಲಸೆ ಬರುವುದನ್ನು ತಪ್ಪಿಸಿ ಎಂದು ಸರ್ಕಾರಕ್ಕೆ ಕಿವಿ ಮಾತು ಹೇಳಿದರು. ಯಾವುದೇ ಕಾರಣಕ್ಕೂ ಹೊಸ ಪರ್ಮಿಟ್ ನೀಡಬಾರದೆಂದು ಅವರು ಒತ್ತಾಯಿಸಿದರು.

ರಾಜ್ಯ ಸಾರಿಗೆ ಆಯುಕ್ತರಾದ ಐ.ಎಂ.ವಿಠ್ಠಲ ಮೂರ್ತಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಅವರು ಚಾಲಕರ ಕರ್ತವ್ಯಗಳ ಬಗ್ಗೆ ಹೇಳುತ್ತಾ ಸಾರ್ವಜನಿಕರಿಗೆ ಆಟೋ ಚಾಲಕರು ಉತ್ತಮ ಸೇವೆ ಸಲ್ಲಿಸುವಂತೆ ಕರೆ ನೀಡಿದರು. ಇದಕ್ಕೂ ಮೊದಲು ಅವರು ರಾಷ್ಟ್ರ ಧ್ವಜಾರೋಹಣ ಮಾಡಿದರು.

ಹೊಸ ಪರ್ಮಿಟ್ ನೀಡಲು ಸರ್ಕಾರ ಮುಂದಾದಲ್ಲಿ ಉಗ್ರ ಪ್ರತಿಭಟನೆ ನಡೆಸಲು ಸಭೆ ನಿರ್ಣಯಿಸಿತು. ಸಭೆಗೆ ಮುನ್ನ ಜಯನಗರದ ಸೌತ್ ಎಂಡ್ ವೃತ್ತದಿಂದ ಗೌಡನಪಾಳ್ಯದವರೆಗೆ 100 ರಷ್ಟು ಆಟೋಗಳ ಜೊತೆ ಚಾಲಕರು ಮೆರವಣಿಗೆ ನಡೆಸಿದರು. ಸಭೆಯಲ್ಲಿ 300 ಕ್ಕೂ ಅಧಿಕ ಸದಸ್ಯರು ಪಾಲ್ಗೊಂಡಿದ್ದರು. ಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯ್ತು.

ಅಧ್ಯಕ್ಷರಾಗಿ-ಮೀನಾಕ್ಷಿಸುಂದರಂ; ಉಪಾಧ್ಯಕ್ಷರಾಗಿ-ಎ.ಎಸ್.ಟಿ.ಅರಸು, ಎಮ್.ಜಗನ್ನಾಥ ರಾವ್, ಜೆ.ಚೆಲ್ಲಯ್ಯ; ಪ್ರಧಾನಕಾರ್ಯದರ್ಶಿಯಾಗಿ ಹೆಚ್.ಜಿ.ಶ್ರೀನಿವಾಸಮೂರ್ತಿ; ಸಂಘಟನಾ ಕಾರ್ಯದರ್ಶಿಗಳಾಗಿ-ಪುಟ್ಟಲಿಂಗಯ್ಯ, ಜಂಟಿ ಕಾರ್ಯದರ್ಶಿಗಳಾಗಿ-ಎನ್.ಶ್ರೀನಿವಾಸ್, ರುದ್ರಮೂರ್ತಿ, ಕೆ.ಬಿ.ಕೆಂಪೇಗೌಡ, ಎಸ್.ರಾಘವೇಂದ್ರ ಪ್ರಭು ಸಹ ಕಾರ್ಯದರ್ಶಿಗಳಾಗಿ-ಸದಾಶಿವ.ಟಿ.ಎಸ್., ವಿ.ಬಾಲರಾಜ್, ಸಿ.ಟಿ.ಲೋಕೇಶ್, ಆರ್.ನವೀನ್ ಶೆಣೈ; ಖಜಾಂಚಿ-ಸಿ.ಎನ್.ಶ್ರೀನಿವಾಸ ಮತ್ತು ಪ್ರದೇಶವಾರು 40 ಜನ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಆಯ್ಕೆ ಮಾಡಲಾಗಿದೆ.

ವರದಿ : **ಹೆಚ್.ಜಿ.ಶ್ರೀನಿವಾಸಮೂರ್ತಿ**
ಸಿದ್ಧಯ್ಯ

ಆನೇಕಲ್:
ಹಕ್ಕುಪತ್ರಗಳಿಗಾಗಿ ಒತ್ತಾಯಿಸಿ ಧರಣಿ

ಸರ್ಕಾರಿ ಜಮೀನಿನಲ್ಲಿ ಅನಧಿ[illegible] ವಾಸದ ಮನೆಗಳನ್ನು ಸಕ್ರಮಗೊಳಿಸಿ ಹ[illegible] ಪತ್ರ ನೀಡುವಂತೆ ಒತ್ತಾಯಿಸಿ ಆನೇಕಲ[illegible] ನಾಗರೀಕರು ಬೆಂಗಳೂರು ನಗ[illegible] ಜಿಲ್ಲಾಧಿಕಾರಿಗಳ ಕಛೇರಿ ಎದುರು ಧ[illegible] ನಡೆಸಿದರು. ಆನೇಕಲ್ ತಾಲ್ಲೂ[illegible] ಡಿ.ವೈ.ಎಫ್.ಐ. ಘಟಕದ ನೇತೃತ್ವದ[illegible] ಇತ್ತೀಚೆಗೆ ನಡೆದ ಈ ಕಾರ್ಯಕ್ರಮದ[illegible] ನೂರಾರು ಜನರು ಭಾಗವಹಿಸಿದರು.

ನಿವೇಶನದ ಹಕ್ಕು ಪತ್ರ ನೀಡಬೇ[illegible] ಹಳದಿ ರೇಷನ್ ಕಾರ್ಡ್‌ಗಳನ್ನು ತ[illegible] ವಿತರಿಸಬೇಕು ಹಾಗೂ ಕುಡಿಯುವ ನೀ[illegible] ಸಮರ್ಪಕ ವ್ಯವಸ್ಥೆಯಾಗಬೇಕೆಂ[illegible] ಪ್ರತಿಭಟನಾಕಾರರು ಒತ್ತಾಯಿಸಿದ[illegible] ಸರ್ಕಾರಿ ಆದೇಶದ ಅನ್ವಯ ಸರ್ಕಾ[illegible] ಜಮೀನಿನಲ್ಲಿ ಅನಧಿಕೃತ ವಾಸದ ಮನೆಗ[illegible] ಸಕ್ರಮ ಗೊಳಿಸುವಂತೆ ಅರ್ಜಿ ಸಲ್ಲಿಸಿ ಮು[illegible] ವರ್ಷ ಕಳೆದರೂ ಹಕ್ಕು [illegible] ವಿತರಿಸಿಲ್ಲವೆಂದು ಆರೋಪ[illegible] ಡಿ.ವೈ.ಎಫ್.ಐನ ತಾಲ್ಲೂಕು ಅಧ್ಯಕ್ಷ[illegible] ಅಶೋಕ್ ಕುಮಾರ್‌ರವರು ಈ [illegible] ಹಲವು ಬಾರಿ ತಾಲ್ಲೂಕು ಕಛೇರಿ ಮ[illegible] ಧರಣಿ ನಡೆಸಿ ತಹಸಿಲ್ದಾರರಿಗೆ ಮ[illegible] ಸಲ್ಲಿಸಿದರೂ ಯಾವ[illegible] ಪ್ರಯೋಜನವಾಗಿಲ್ಲವೆಂದು ದೂರಿದರ[illegible]

ಈ ಸಂದರ್ಭದಲ್ಲಿ ಧರಣಿ ನಿರತರ[illegible] ಬಂದು ಮನವಿ ಸ್ವೀಕರಿಸಿದ ವಿ[illegible] ಜಿಲ್ಲಾಧಿಕಾರಿಯವರು ಒಂದೆರಡು ತಿಂ[illegible] ಹಕ್ಕು ಪತ್ರಗಳನ್ನು ವಿತರಿಸುವುದಾಗಿ ಆಗಸ್ಟ್ 15ರ ಒಳಗಾಗಿ ಹಳದಿ ರೇ[illegible] ಕಾರ್ಡ್‌ಗಳನ್ನು ವಿತರಿಸುವ ಭ[illegible] ನೀಡಿದರು. 2 ತಿಂಗಳಲ್ಲಿ ಹಕ್ಕು [illegible] ವಿತರಿಸದಿದ್ದಲ್ಲಿ ನಂತರ ಅನಿರ್ದಿಷ್ಟ [illegible] ಧರಣಿ ನಡೆಸಲಾಗುವುದ[illegible] ಡಿ.ವೈ.ಎಫ್.ಐನ ಜಿಲ್ಲಾ ಕಾರ್ಯ[illegible] ಶ್ರೀನಿವಾಸ್ ಎಚ್ಚರಿಕೆ ನೀಡಿದರು. ತಾ[illegible] ಕಾರ್ಯದರ್ಶಿ ರಾಮಕೃಷ್ಣ ತಿಮ್ಮರಾ[illegible] ಕರ್ನಾಟಕ ಪ್ರಾಂತ ರೈತ ಸ[illegible] ಮುಖಂಡರಾದ ಶಿವರಾಮರೆಡ್ಡಿ ಮಹದೇಶ್ ಈ ಸಂದರ್ಭ[illegible] ಮಾತನಾಡಿದ್ದರು. ಎಸ್.ಎಫ್[illegible] ತಾಲ್ಲೂಕು ಅಧ್ಯಕ್ಷರಾದ ಮಂಜ[illegible] ವಂದನಾರ್ಪಣೆ ಮಾಡಿದರು.

ಕುಂದಾಪುರ : ರಸ್ತೆ ದುರಸ್ತಿಗೆ ಆಟೋಚಾಲಕರ ಪ್ರತಿಭಟನೆ

ಕುಂದಾಪುರದ ರಸ್ತೆಗಳನ್ನು ತುರ್ತು ದುರಸ್ಥಿ ಮಾಡುವಂತೆ ಹಾಗೂ ಆದಷ್ಟು ಬೇಗ ಡಾಮರೀಕರಣ ಮತ್ತು ಕಾಂಕ್ರಿಟೀಕರಣ ಮಾಡುವಂತೆ ಒತ್ತಾಯಿಸಿ ಪುರಸಭಾ ಮುಖ್ಯಾಧಿಕಾರಿಯವರಿಗೆ ಹಾಗೂ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ರವರಿಗೆ ಪ್ರತ್ಯೇಕ ಮನವಿ ಅರ್ಪಿಸಲಾಯಿತು. ತುರ್ತು ಕ್ರಮ ವಹಿಸಲು ತಾಲೂಕು ತಹಸಿಲ್ದಾರ್ ಹಾಗೂ ಕುಂದಾಪುರ ವಿಧಾನಸಭಾ ಸದಸ್ಯರವರಿಗೆ ಮನವಿಯ ಪ್ರತಿಗಳನ್ನು ಕೊಟ್ಟು ಒತ್ತಾಯಿಸಲಾಗಿದೆ. ಆಗಸ್ಟ್ 20 ರಂದು ಬೆಳಿಗ್ಗೆ ತಾಲೂಕು ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘ (ಸಿಐಟಿಯು) ದ ನೇತೃತ್ವದಲ್ಲಿ ಈ ಹೋರಾಟ ನಡೆಯಿತು.

ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಸಂಘದ ಮುಖಂಡರಾದ ವಿ.ಚಂದ್ರ, ಎನ್. ಉಮೇಶ್, ಜಿ.ಗೋವಿಂದ, ವಿ.ನಾರಾಯಣ, ರಮೇಶ, ವಿ., ಸುರೇಂದ್ರ ಜಿ.ಮೆಂಡನ್, ಸಂತೋಷ ಕಲ್ಲಾಗರ, ರಾಜು, ಆನಂದ ಹಾಗೂ ನಾಗರಾಜ ನಾಯ್ಕ್‌ರವರು ವಹಿಸಿದರು.

ಪುರಸಭಾ ವ್ಯಾಪ್ತಿಯ ಹೆಚ್ಚಿನ ರಸ್ತೆಗಳು ಹಾಗೂ ಮುಖ್ಯ ರಸ್ತೆಯಲ್ಲಿ ವಾಹನಗಳು ಚಲಿಸಲು ಕಷ್ಟವಾಗಿದ್ದು, ವಾಹನಗಳು ಹಾನಿಯಾಗುವುದಲ್ಲದೆ, ಹೊಂಡಗಳನ್ನು ತಪ್ಪಿಸಲು ಹೋಗಿ ಅಪಘಾತಗಳು ಸಂಭವಿಸುವ ಪರಿಸ್ಥಿತಿ; ವಾಹನಗಳಲ್ಲಿ ಪ್ರಯಾಣ ಮಾಡುವ ಹಾಗೂ ರಸ್ತೆಯಲ್ಲಿ ಬದಿಗಳಲ್ಲಿ ನಡೆದು ಕೊಂಡು ಹೋಗುವ ಜನಸಾಮಾನ್ಯರಿಗೂ ತೊಂದರೆಯಾಗುತ್ತಿದೆ ಎಂದು ಸಿಐಟಿಯುವಿನ ರಾಜ್ಯ ಉಪಾಧ್ಯಕ್ಷರಾದ ಕೆ.ಶಂಕರ[illegible] ಹೇಳಿದರಲ್ಲದೇ ವಿಳಂಬ ಮಾಡಿದ[illegible] ತೀವ್ರವಾಗಿ ಪ್ರತಿಭಟಿಸಬೇಕಾಗುತ್ತದ[illegible] ಎಚ್ಚರಿಸಿದರು.



ಉತ್ತರ ಪ್ರದೇಶ ರಾಜಕೀಯ

ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಮತ್ತು ಬಿಜೆಪಿಯ ಅಪವಿತ್ರ ಮೈತ್ರಿ ಮುರಿದಿದೆ. ಹೊಸ ಸನ್ನಿವೇಶ ನಿರ್ಮಾಣಗೊಂಡ ಹಿನ್ನೆಲೆಯಲ್ಲಿ ಮುಲಾಂಯ ಸಿಂಗ್ ಯಾದವ್ ನೂತನ ಮುಖ್ಯಮಂತ್ರಿಯಾಗಿದ್ದಾರೆ. ಈ ವಿದ್ಯಮಾನಗಳತ್ತ ಒಂದು ನೋಟ

ರೈತರಿಗೆ ಏನೂ ಪರಿಹಾರ ಸಿಗಲಿಲ್ಲ, ಕಬ್ಬು ಬೆಳೆಗಾರರಿಗೆ ಬಾಕಿ ಸಂದಾಯವಾಗಲಿಲ್ಲ, ಹಲವಾರು ಉದ್ದಿಮೆಗಳು ಮುಚ್ಚಿ ಸಂಘಟಿತ ವಲಯದಲ್ಲಿ ಭಾರೀ ಪ್ರಮಾಣದಲ್ಲಿ ಉದ್ಯೋಗಾವಕಾಶಗಳು ನಷ್ಟಗೊಂಡವು. ಕಾನೂನು-ವ್ಯವಸ್ಥೆ ಹದಗೆಟ್ಟಿತು. ಗಂಭೀರ ಅಪರಾಧಗಳ ಸಂಖ್ಯೆ ತೀವ್ರವಾಗಿ ಹೆಚ್ಚಿತು. ಬಿಜೆಪಿ ಮತ್ತು ಬಿಎಸ್‌ಪಿ ನಡುವಿನ ನೀತಿಬಾಹಿರ ಮೈತ್ರಿ ಜಾತಿ ದ್ವೇಷಮ್ಯಗಳನ್ನು ಹೆಚ್ಚಿಸಿತು. ವರ್ಗಾವಣೆ ಮತ್ತು ಪೋಸ್ಟಿಂಗ್‌ಗಳ




ಪವಿತ್ರ ಹಸು

ಹೊಲಸು ನಾಟಕಕ್ಕೆ ಪರದೆ-ಬಿಜೆಪಿ ಬಯಲಿಗೆ

ಮಾಯಾವತಿ ಸರ್ಕಾರ 16 ತಿಂಗಳ ಅಧಿಕಾರದ ನಂತರ ಈಗ ಕುಸಿದು ಬಿದ್ದಿದೆ. ಈ ಮೂಲಕ ಫೆಬ್ರವರಿ 2002 ರ ವಿಧಾನಸಭೆಯ ಚುನಾವಣೆಗಳ ನಂತರ ಬೆಸೆದ ಸಮಯಸಾಧಕ ಮೈತ್ರಿ ಕೊನೆಗೊಂಡಿದೆ. ಇದು ಬಿಜೆಪಿ ಮತ್ತು ಬಿಎಸ್‌ಪಿ ನಡುವಿನ ಮೂರನೇ ಮೈತ್ರಿಯಾಗಿತ್ತು.

ಈ ಅಲ್ಪಕಾಲದ ಮೈತ್ರಿ ಕುಸಿದುದರಲ್ಲಿ ಆಶ್ಚರ್ಯವೇನಿಲ್ಲ. ಈ ಮೈತ್ರಿಯೊಳಗೇ ವೈರುಧ್ಯಗಳು ಅಡಕವಾಗಿದ್ದವು. ಅದನ್ನು ಪರಿಹರಿಸುವುದು ಇಬ್ಬರಿಗೂ ಆಗಲಿಲ್ಲ. ಕಳೆದ ವರ್ಷ ಬಿಜೆಪಿ ಮುಖಂಡತ್ವ ಮಾಯಾವತಿಯವರ ಕಠಿಣ ಶರತ್ತುಗಳನ್ನು ಒಪ್ಪಿಕೊಂಡಿತ್ತು. ಏಕೆಂದರೆ



ಅವರಿಗೆ ಲೋಕಸಭೆಯಲ್ಲಿ 13 ಬಿಎಸ್‌ಪಿ ಸದಸ್ಯರ ಬೆಂಬಲ ಬೇಕಿತ್ತು, ರಾಷ್ಟ್ರಪತಿ ಚುನಾವಣೆಗಳಲ್ಲೂ ಬೆಂಬಲ ಬೇಕಿತ್ತು. ಬಿಜೆಪಿ ಕಿರಿಯ ಪಾಲುದಾರ ನಾಗಿದ್ದ ಮಾಯಾವತಿ ಸರ್ಕಾರದ ರಚನೆಯೊಂದಿಗೇ ಸಮಸ್ಯೆಗಳು ಆರಂಭವಾದವು. ಬಿಎಸ್‌ಪಿಯ ದಲಿತನೆಲೆಗೆ ತಮ್ಮ ಮುಖಂಡರು ಮತ್ತೆ ಮುಖ್ಯಮಂತ್ರಿಯಾದ್ದರಿಂದ ಬಹಳ ಆನಂದವಾಗಿತ್ತು. ಆದರೆ ಬಿಜೆಪಿಯ ಕಾರ್ಯಕರ್ತರು ಖಿನ್ನರಾಗಿದ್ದರು, ಕ್ರೋಧಿತರಾಗಿದ್ದರು. ಬಿಜೆಪಿಯ ಮೇಲ್ಜಾತಿ ನೆಲೆಯಲ್ಲಂತೂ ವಿಶೇಷವಾಗಿ ಅಸಂತೋಷವಿತ್ತು. ಮಾಯಾವತಿ ದಲಿತರ ನಡುವೆ ತನ್ನ ನೆಲೆಯನ್ನು ಕ್ರೋಢೀಕರಿಸುವ ಅಜೆಂಡಾವನ್ನು ಏಕಚಿತ್ತದಿಂದ ಮುಂದೊತ್ತಲು ಅಧಿಕಾರವನ್ನು ಬಳಸಿಕೊಂಡರು. ಇದು ಬಿಜೆಪಿ ಹಿತಾಸಕ್ತಿಗಳಿಗೆ ಅಡ್ಡಿಯಾಗುವುದು ಅನಿವಾರ್ಯವಾಗಿತ್ತು.

ನಂತರ ಕಂಡುಬಂದದ್ದು ಒಂದು ಅಸಹ್ಯ ತಮಾಷೆ - ಒಬ್ಬರನ್ನೊಬ್ಬರು ಮೀರಿಸುವ ಪ್ರಯತ್ನ, ತಮ್ಮ-ತಮ್ಮ ಬೆಂಬಲಿಗರನ್ನು ಮೆಚ್ಚಿಸುವ ಪ್ರಯತ್ನ. ಇದರ ಒಟ್ಟು ಫಲಿತಾಂಶವೆಂದರೆ ಬಿಜೆಪಿ ತನ್ನ ಬೆಂಬಲ ನೆಲೆಯನ್ನು ನಿರಂತರವಾಗಿ ಕಳಕೊಳ್ಳಲಾರಂಭಿಸಿತು.

ಕೆಲವೇ ತಿಂಗಳಲ್ಲಿ ಕೆಲವು ಬಿಜೆಪಿ ಶಾಸಕರು, ವಿಶೇಷವಾಗಿ ರಜಪೂತ ಜಾತಿಯ ಶಾಸಕರ ಬಂಡಾಯ ಸರ್ಕಾರಕ್ಕೆ ಅಪಾಯ ತಂದಿತು; ಆದರೆ ರಾಜ್ಯಪಾಲರ ನೆರವಿನಿಂದ, ವಿಧಾನಸಭಾಧ್ಯಕ್ಷರ ಪಕ್ಷಪಾತದಿಂದ ಹೇಗೋ ಪಾರಾಯಿತು. ಕಳೆದ ಒಂದು ವರ್ಷದಿಂದ ವಿಧಾನಸಭೆಯಲ್ಲಿ ಮಾಯಾವತಿಯ ಬಹುಮತ ಸಂಶಯಾಸ್ಪದವಾಗಿತ್ತು. ಕಳೆದ ವಿಧಾಸಭಾ ಅಧಿವೇಶನದಲ್ಲಿ ಅವಿಶ್ವಾಸ ನಿರ್ಣಯವನ್ನು ಚರ್ಚಿಸಲಿಲ್ಲ, ಏನೋ ತಂತ್ರ ಹೂಡಿ [illegible]ಸಲಾಯಿತು.

ಮಾಯಾವತಿಯವರು ಸಿನಿಕ ಸಮಯಸಾಧಕತೆಯಲ್ಲಿ ಹೊಸ ದಾಖಲೆಗಳನ್ನೇ ನಿರ್ಮಿಸಿದ್ದಾರೆ. ಮೋದಿ ಸರಕಾರದಡಿ ಗುಜರಾತಿನ ನರ ಸಂಹಾರವನ್ನು ಖಂಡಿಸಲು ಆಕೆ ನಿರಾಕರಿಸಿದರು, ಅಷ್ಟೇ ಅಲ್ಲ, ಗುಜರಾತಿನ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಪರ ಪ್ರಚಾರ ಮಾಡಲು ಹೋದರು. ಬಿಜೆಪಿಯ ಮೇಲ್ಜಾತಿ ನೆಲೆಯನ್ನೂ ಎದುರು ಹಾಕಿಕೊಳ್ಳ ಬಾರದೆಂದು ಪರಿಶಿಷ್ಟ ಜಾತಿಗಳ ಮೇಲೆ ಅತ್ಯಾಚಾರಗಳ ತಡೆ ಕಾನೂನಿನ ಜಾರಿಯನ್ನು ಕೂಡಾ ಆಕೆ ಅಮಾನತ್ತಿನಲ್ಲಿಟ್ಟರು. ಅದೇ ವೇಳೆಗೆ ಆಕೆ ತನ್ನ ಗುರಿ ಈಡೇರಿಸಿಕೊಳ್ಳಲು ಬೃಹತ್ ಪ್ರಮಾಣದಲ್ಲಿ ಸರಕಾರೀ ಯಂತ್ರದ ದುರುಪಯೋಗ ನಡೆಸಿದರು.

ಸಂಕಟ ಪಟ್ಟವರು

ಈ ಅವಧಿಯಾದ್ಯಂತ ಸಂಕಟ ಪಟ್ಟವರು ಉತ್ತರ ಪ್ರದೇಶದ ಜನತೆ. ಕಳೆದ ವರ್ಷ ಒಂದು ತೀವ್ರ ಬರ ಕಂಡುಬಂತು. ಅದು ಬಲವಾಗಿ ತಟ್ಟಿದ ಬಹಿರಂಗ ಮಾರಾಟ ಅಧಿಕಾರಶಾಹಿಯನ್ನು ಬುಡಮೇಲು ಮಾಡಿತು, ಭ್ರಷ್ಟಗೊಳಿಸಿತು.

ಬಿಜೆಪಿ ಮುಖಂಡತ್ವ ಮತ್ತು ವಾಜಪೇಯಿ ಸರ್ಕಾರ ಈ ಮೈತ್ರಿಯೆಂಬ ನಾಟಕವನ್ನು ಮುಂದುವರೆಯಲು ಬಿಟ್ಟವು. ಅವರಿಗಿದ್ದ ಏಕೈಕ ಗುರಿ ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ಪ್ರಯೋಜನ ಪಡೆಯುವುದು. ಬಿಎಸ್‌ಪಿಯ

ಹರ್ಕಿಷನ್ ಸಿಂಗ್ ಸುರ್ಜಿತ್

ದೃಢ ದಲಿತ ವೋಟ್ ಬ್ಯಾಂಕ್ ಬಿಜೆಪಿಗೆ ತನ್ನ ನೆಲೆ ಕ್ಷೀಣಗೊಳ್ಳುತ್ತಿರುವ ಸಮಸ್ಯೆಯನ್ನು ಮೀರಿ ಕೇಂದ್ರದಲ್ಲೊಂದು ಸರಕಾರ ರಚಿಸಲು ಸಾಕಷ್ಟು ಸೀಟುಗಳನ್ನು ಗೆಲ್ಲಲು ನೆರವಾಗಬಹುದು ಎಂಬುದು ಲೆಕ್ಕಾಚಾರವಾಗಿತ್ತು. ಈಗ ಪರಸ್ಪರ ದೂಷಣೆಗಳೊಂದಿಗೆ ಮೈತ್ರಿ ಕುಸಿದು ಬಿದ್ದದ್ದು ಬಿಜೆಪಿಗೊಂದು ಗಂಭೀರ ಹಿನ್ನಡೆ. ಬಿಎಸ್‌ಪಿಯ ನೆಲೆಯಿಂದ ಅವರಿಗೆ ಮತ ಬರುವುದಿಲ್ಲ ಮಾತ್ರವಲ್ಲ ಸ್ವಂತ ನೆಲೆಯೂ ಇನ್ನಷ್ಟು ಕ್ಷೀಣಗೊಂಡಿದೆ. 2002 ರ ಚುನಾವಣೆಗಳಲ್ಲಿ ಬಿಜೆಪಿಯು ಸಮಾಜವಾದಿ ಪಕ್ಷ ಮತ್ತು ಬಿಎಸ್‌ಪಿಯ ನಂತರ ಮೂರನೇ ಸ್ಥಾನಕ್ಕೆ ಇಳಿದಿತ್ತು. ಈಗ ತನ್ನ ಪಾರಂಪರಿಕ ಬೆಂಬಲಿಗರ ನಡುವೆಯೂ ವಿಶ್ವಾಸಾರ್ಹತೆಗೆ ಗಂಭೀರ ಧಕ್ಕೆ ಬಂದಿರುವಾಗ ಅದು ಏಕಾಂಗಿಯಾಗಿ ಹೋರಾಡುವ ಸ್ಥಿತಿ ಬಂದಿದೆ.

ಕಳೆದ ವಿಧಾನಸಭಾ ಚುನಾವಣೆಗಳ ನಂತರ ಸಮಾಜವಾದಿ ಪಕ್ಷ ವಿಧಾನಸಭೆಯಲ್ಲಿ ಎಲ್ಲಕ್ಕಿಂತ ದೊಡ್ಡ ಪಕ್ಷವಾಗಿದ್ದರೂ ಅದನ್ನು ಸರಕಾರ ರಚಿಸಬೇಕೆಂದು ಕರೆಯಲು ರಾಜ್ಯಪಾಲರು ನಿರಾಕರಿಸಿದರು. ಬಿಜೆಪಿಗೆ ಬಿಎಸ್‌ಪಿಯೊಂದಿಗೆ ಚೌಕಾಶಿ ನಡೆಸಲು ಅನುವಾಗುವಂತೆ ವಿಧಾನಸಭೆಯನ್ನು ಅಮಾನತ್ತಿನಲ್ಲಿಡಲಾಯಿತು. ಈಗ ಮತ್ತೆ ರಾಜ್ಯಪಾಲರು ನಿರ್ಧರಿಸಬೇಕಾದ ಪರಿಸ್ಥಿತಿ. ಸಮಾಜವಾದಿ ಪಕ್ಷದ ಮುಖಂಡ ಮುಲಾಯಂ ಸಿಂಗ್ ಯಾದವ್ ಸರ್ಕಾರ ರಚಿಸುವ ದಾವೆಯಿಟ್ಟಿದ್ದಾರೆ. ಅವರಿಗೆ ಈಗಾಗಲೇ ಆರ್‌ಎಲ್‌ಡಿ, ಆರ್‌ಕೆಪಿ, ಕಾಂಗ್ರೆಸ್ ಮತ್ತು ಸಿಪಿಐ(ಎಂ)ನ ಬೆಂಬಲ ದೊರೆತಿದೆ. ಬೇರೆ ಯಾವ ಪಕ್ಷವೂ ಸರ್ಕಾರ ರಚಿಸುವ ದಾವೆ ಮಾಡದ್ದರಿಂದ ರಾಜ್ಯಪಾಲರು ಸಮಾಜವಾದಿ ಪಕ್ಷದ ಮುಖಂಡ ರನ್ನು ಸರ್ಕಾರ ರಚಿಸಲು ಹೇಳಿ ಬೇಗನೇ ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಪಡಿಸುವಂತೆ ಹೇಳಬೇಕಾಗಿತ್ತು. ಅದರ ಬದಲು ರಾಜ್ಯಪಾಲರು 24 ಗಂಟೆಗಳೊಳಗೆ ಸದನದಲ್ಲಿ ಬಹುಮತ ಇದೆ ಎಂಬುದಕ್ಕೆ ಪುರಾವೆ ಬೇಕು ಎಂದರು. ಬಿಜೆಪಿಗೆ ರಾಜ್ಯಪಾಲರ ಆಳ್ವಿಕೆ ಬೇಕಿತ್ತು. ಕಟ್ಟಾ ಆರ್‌ಎಸ್‌ಎಸ್ ಮನುಷ್ಯರಾದ ರಾಜ್ಯಪಾಲ ವಿಷ್ಣುಕಾಂತ ಶಾಸ್ತ್ರಿ ರಾಷ್ಟ್ರಪತಿ ಆಳ್ವಿಕೆ ಹೇರಲು ನೆಲ ಹದ ಮಾಡುತ್ತಿದ್ದಂತಿತ್ತು. ಇದು ಕೇಂದ್ರದಲ್ಲಿನ ಆಳುವ ಪಕ್ಷ ರಾಜ್ಯಪಾಲರ ಹುದ್ದೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಇನ್ನೊಂದು ಉದಾಹರಣೆ.

ಉತ್ತರ ಪ್ರದೇಶದಲ್ಲಿ ಈ ಹೊಲಸು ಅಧ್ಯಾಯ ಈಗ ಮುಗಿದಿದೆ. ಇದು ಬಿಜೆಪಿಯ ಅವನತಶೀಲ ರಾಜಕೀಯವನ್ನು ಮತ್ತಷ್ಟು ಬಯಲಿಗೆಳೆದಿದೆ.

ಮುಂಬೈ ಬಾಂಬ್ ಸ್ಫೋಟ: ನಿಷ್ಠುರ ಕ್ರಮ ಅಗತ್ಯ

ಆಗಸ್ಟ್ 25 ರಂದು ಬಾಂಬೆಯ ಹೃದಯಭಾಗದಲ್ಲಿ ನಡೆದ ಬಾಂಬ್ ಸ್ಫೋಟಗಳು ಹಲವಾರು ಮುಗ್ಧ ಜೀವಗಳನ್ನು ಬಲಿ ತೆಗೆದುಕೊಂಡು ಆಧುನಿಕ ಭಾರತ ಮತ್ತು ನಾಗರೀಕ ಸಮಾಜಕ್ಕೆ ಕಠಿಣ ಸವಾಲನ್ನು ಒಡ್ಡಿವೆ. ಕಳೆದ ಒಂಭತ್ತು ತಿಂಗಳುಗಳಲ್ಲಿ ಮುಂಬೈ ನಗರದಲ್ಲಿ ಈ ರೀತಿಯ ಏಳು ಬಾಂಬ್ ಸ್ಫೋಟಗಳು ಜರುಗಿ, ಅರವತ್ತು ಜನರನ್ನು ಬಲಿ ತೆಗೆದುಕೊಂಡಿವೆ ಮತ್ತು ಮುನ್ನೂರಕ್ಕಿಂತ ಹೆಚ್ಚಿನ ಜನರು ಗಾಯಗೊಂಡಿದ್ದಾರೆ. ಇವು ಯಾವುದೇ ಮುಲಾಜಿಲ್ಲದೆ ಮತ್ತು ಬಲವಾಗಿ ಖಂಡನೆಗೊಳಗಾಗಬೇಕಾದ ದೇಶವಿರೋಧಿ ಚಟುವಟಿಕೆಗಳಾಗಿವೆ. ಮುಖ್ಯವಾಗಿ ಇದಕ್ಕೆ ಕಾರಣರಾದವರ ಮತ್ತು ಅದರ ಹಿಂದಿರುವವರನ್ನು ಗುರುತಿಸಿ ಕಟಕಟೆಗೆ ಎಳೆದು ತರಬೇಕಾದುದು ಅಗತ್ಯವಾಗಿದೆ.

ಸೋಮವಾರದ ಹತ್ಯಾಕಾಂಡಕ್ಕೆ ಯಾವುದೇ ಸಂಘಟನೆಯು ತಾನೇ ಹೊಣೆಯೆಂದು ಹೇಳಿಕೊಂಡಿಲ್ಲ. ಹಿಂದಿನ ಆರು ಸ್ಫೋಟಗಳಿಗೂ ಸಹ ಯಾರೂ ತಮ್ಮನ್ನು ಹೊಣೆ ಮಾಡಿಕೊಂಡಿಲ್ಲ. ಮುಂಬೈ ಪೋಲೀಸರು ಅಧಿಕೃತವಾಗಿ ಯಾವುದೇ ಸಂಘಟನೆಯನ್ನು ಹೆಸರಿಸಿಲ್ಲವಾದರೂ ಪೊಲೀಸ್ ಅಧಿಕಾರಿಗಳು ಪಾಕಿಸ್ತಾನಿ ಮೂಲದ ಲಷ್ಕರ್-ಇ-ತೊಯಿಬಾ ಮತ್ತು ನಿಷೇಧಿತ ಸಿಮಿ ಸಂಘಟನೆಗಳು ಈ ದಾಳಿಯ ಹಿಂದಿವೆ ಎಂದು ಪತ್ರಕರ್ತರಿಗೆ ಮಾಹಿತಿ ನೀಡಿದ್ದಾರೆ. ಉಪಪ್ರಧಾನಿ ಮತ್ತು ಗೃಹಸಚಿವ ಎಲ್.ಕೆ.ಅದ್ವಾನಿಯವರಿಗೆ ಇದರ ಕೀರ್ತಿ ಸಲ್ಲಬೇಕು. ಇದು ನಿಜವಾದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

ಕಳೆದ ವರ್ಷ ಗುಜರಾತ್‌ನಲ್ಲಿ ಮೋದಿ ಸರ್ಕಾರ ಹರಿಯಬಿಟ್ಟ ಹತ್ಯಾಕಾಂಡಕ್ಕೆ ಈ ಸ್ಫೋಟಗಳು ಪ್ರತೀಕಾರವಾಗಿವೆ ಎಂಬಂತೆ ಬಿಂಬಿಸುವುದು ಅದ್ವಾನಿಯವರ ಉದ್ದೇಶವಾಗಿದೆ. ಈ ರೀತಿಯ ಸಂಬಂಧಗಳನ್ನು ಕಲ್ಪಿಸುವುದು ಅದ್ವಾನಿಯವರ ಬಯಕೆಯಾದರೂ ಮುಂಬೈಯಲ್ಲಿ ಜರುಗಿದ ಕಳೆದ ಏಳೂ ಘಟನೆಗಳೂ ಗುಜರಾತ್‌ನಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿವೆ ಎಂದು ಮುಂಬೈಯಲ್ಲಿನ ಪ್ರಚಲಿತ ಪೂರ್ವಾಗ್ರಹ ವಾಗಿದೆ. ಹಿಂದಿನ ಸ್ಫೋಟಗಳಿಗೆ ಸಂಬಂಧಿಸಿ ಮುಂಬೈ ಪೋಲೀಸರು ಬಂಧಿಸಿರುವ ಬಹುತೇಕ ಮಂದಿ ಒಂದು ದಶಕದ ಹಿಂದೆ ಮಹಾರಾಷ್ಟ್ರದಲ್ಲಿ ಜರುಗಿದ

ಪುಟ 9 ಕ್ಕೆ



ಶಿಕ್ಷಣ ರಂಗದಲ್ಲಿನ ಧಾಳಿಗಳು : ಹಿಮ್ಮೆಟ್ಟಿಸಿದ ವಿ

ಶಿಕ್ಷಣ ರಂಗವು ಉದಾರೀಕರಣ-ಜಾಗತೀಕರಣದ ಪ್ರಕ್ರಿಯೆಯ ಪ್ರಮುಖ ಧಾಳಿಗೊಳಗಾಗಿದೆ. ನ್ಯಾಯಾಲಯದ ತೀರ್ಪುಗಳು ಖಾಸಗಿಯವರ ಕೈ ಬಲಪಡಿಸುತ್ತಿವೆ. ಇದನ್ನು ಬಳಸಿಕೊಂಡು ಶಿಕ್ಷಣ ವ್ಯಾಪಾರಿಗಳು ಮನಬಂದಂತೆ ಸುಲಿಗೆ ಆರಂಭಿಸಿದ್ದಾರೆ. ಸರ್ಕಾರವೂ ಅದೇ ಜಾಡಿನಲ್ಲಿ ಹೊರಟಿದೆ. ಇವುಗಳ ವಿರುದ್ಧ ವಿದ್ಯಾಥಿ ಚಳುವಳಿಯ ಪ್ರತಿರೋಧ ಬೆಳೆದು ಹಿಮ್ಮೆಟ್ಟಿಸಿದ ಸ್ಫೂರ್ತಿದಾಯಕ ಕೆಲವು ವರದಿಗಳು ಇಲ್ಲಿವೆ...

ವಂತಿಗೆ ಸುಲಿಗೆ ವಿರುದ್ಧ ರಾಯಚೂರಿನಲ್ಲಿ ಅಭೂತಪೂರ್ವ ವಿಜಯ

ಆರ್.ರಾಮಕೃಷ್ಣ
SFI ರಾಜ್ಯ ಕಾರ್ಯದರ್ಶಿ

ತಾರಾನಾಥ ಶಿಕ್ಷಣ ಸಂಸ್ಥೆ ರಾಯಚೂರಿನ ಒಂದು ಪ್ರಮುಖ ಶಿಕ್ಷಣ ಸಂಸ್ಥೆ. ಈ ಶಿಕ್ಷಣ ಸಂಸ್ಥೆಯ ಎಲ್.ವಿ.ಡಿ. ಮತ್ತು ಬಿ.ಆರ್.ಬಿ. ಮತ್ತಿತರ ಕಾಲೇಜುಗಳಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ರಾಜ್ಯದಾದ್ಯಂತ- ದೇಶದಾದ್ಯಂತ ಹೆಚ್ಚುತ್ತಿರುವ ಶಿಕ್ಷಣ ವ್ಯಾಪಾರೀಕರಣ ನೀತಿಯ ಭಾಗವಾಗಿ ರಾಯಚೂರಿನ ಈ ಸಂಸ್ಥೆಯು ತನ್ನ ಧನದಾಹಿ ನೀತಿಯನ್ನು ವಿದ್ಯಾರ್ಥಿ- ಪೋಷಕರ ಮೇಲೆ ಹೇರಿತು. ಅನ್ಯಾಯ ಸುಲಿಗೆಯ ವಿರುದ್ಧ ಧೀಮಂತ ಹೋರಾಟದ ಪರಂಪರೆಯಿರುವ ರಾಯಚೂರಿನ ವಿದ್ಯಾರ್ಥಿಗಳು ಈ ಅನ್ಯಾಯವನ್ನು ಸಹಿಸಿಕೊಳ್ಳದೇ ಸುಮಾರು ಒಂದು ತಿಂಗಳ ಕಾಲ ನಿರಂತರ ಸಂಘರ್ಷ ಹೂಡಿ ತಾರಾನಾಥ ಶಿಕ್ಷಣ ಸಂಸ್ಥೆಯನ್ನು ಮಣಿಸಿ ಅನ್ಯಾಯವನ್ನು ಹಿಮ್ಮೆಟ್ಟಿಸಿದ್ದಾರೆ.

ಸರ್ಕಾರದಿಂದ ಅನುದಾನ ಪಡೆಯುವ ಒಂದು ಅನುದಾನಿತ ಶಿಕ್ಷಣ ಸಂಸ್ಥೆಯಾದ ತಾರಾನಾಥ ಶಿಕ್ಷಣ ಸಂಸ್ಥೆಯು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ತನ್ನ ಸಂಸ್ಥೆಯ ವಿದ್ಯಾರ್ಥಿಗಳಿಂದ ಕಲಾ ವಿಭಾಗದಲ್ಲಿ 500, ವಾಣಿಜ್ಯ ವಿಭಾಗದಲ್ಲಿ 1000 ರೂ., ವಿಜ್ಞಾನ ವಿಭಾಗದಲ್ಲಿ 1500 ರೂ. ಹೆಚ್ಚು ವಂತಿಗೆ ವಸೂಲಿ ಮಾಡಲು ನಿರ್ಧರಿಸಿತು. ಇದಲ್ಲದೆ ಮೈಕ್ರೋ ಬಯೋಲಾಜಿ ಮತ್ತು ಕಂಪ್ಯೂಟರ್ ಸೈನ್ಸ್ ಕೋರ್ಸುಗಳಿಗೆ ಶುಲ್ಕವನ್ನು ತಲಾ 2000 ಏರಿಸಿತು. ಒಂದು ಸಾಮಾನ್ಯ ಪದವಿ ಕಾಲೇಜಿನ ಅರ್ಜಿ ಶುಲ್ಕವೇ 200 ರೂ. ಗೆ ಏರಿರುವಾಗ ಶಿಕ್ಷಣ ಶುಲ್ಕಗಳು ಯಾವ ಲೆಕ್ಕ!

ಇದೇ ಶಿಕ್ಷಣ ಸಂಸ್ಥೆಯಲ್ಲಿ ಪಿಯುಸಿ ವಿಭಾಗದ ವಿದ್ಯಾರ್ಥಿಗಳಿಗೆ 4 ಸಾವಿರ ರೂ.ಗಳನ್ನು ವಸೂಲಿ ಮಾಡಲಾಗುತ್ತಿದೆ. ಇದು ಸಾಲದೆಂದು ಸಿಇಟಿ ಕೋಚಿಂಗ್ ಶುಲ್ಕವಾಗಿ ವಿದ್ಯಾರ್ಥಿಗಳಿಂದ 5 ಸಾವಿರ ವಾರ್ಷಿಕ ಶುಲ್ಕ ವಸೂಲಿ. ಯಾವ ಯಾವ ಹೆಸರಿನಲ್ಲಿ ಸುಲಿಗೆ ಸಾಧ್ಯವೋ ಆ ಎಲ್ಲಾ ಹೆಸರಿನಲ್ಲಿ ವಿದ್ಯಾರ್ಥಿ-ಪೋಷಕರ ಸುಲಿಗೆ ಮಾಡುವುದೇ ಸಂಸ್ಥೆಯ ಧೋರಣೆ ಎಂಬುದಕ್ಕೆ ಬೇರೆ ಸಾಕ್ಷಿ ಬೇಕಿಲ್ಲ. ಪದವಿ ಪ್ರಥಮ ವರ್ಷದಲ್ಲಿ ಕಟ್ಟಡ ಇತ್ಯಾದಿ ಹೆಸರಿನಲ್ಲಿ ವಂತಿಗೆ ಕಟ್ಟಿದ ವಿದ್ಯಾರ್ಥಿಗಳು ಮತ್ತೆ ದ್ವಿತೀಯ-ತೃತೀಯ ವರ್ಷಗಳಲ್ಲೂ ಇದೇ ವಂತಿಕೆ ಕಟ್ಟಬೇಕು.


ರಾಜ್ಯದಲ್ಲಿ ಈಗಾಗಲೇ ಬಹುತೇಕ ಶಿಕ್ಷಣ ರಂಗದ ಎಲ್ಲಾ ವಿಭಾಗಗಳಲ್ಲಿಯೂ ಶಿಕ್ಷಣ ಶುಲ್ಕಗಳು ತೀವ್ರವಾಗಿ ಏರಿದೆ. ಇದು ಸಾಲದೆಂದು ರಾಯಚೂರು ಜಿಲ್ಲೆಯಲ್ಲೂ ಮತ್ತು ರಾಜ್ಯದಲ್ಲೂ ಕಳೆದೆರೆಡು ವರ್ಷಗಳಿಂದ ಗಂಭೀರ ಬರ ಆವರಿಸಿದೆ. ಇಂತಹ ಪರಿಸ್ಥಿತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಸಂಸ್ಥೆಯ ಧನದಾಹ ಮಿತಿ ಮೀರಿದೆ.

ಎಸ್ಎಫ್ಐ ಸಂಘಟನೆಗೆ ಈ ತಾರಾನಾಥ ಶಿಕ್ಷಣ ಸಂಸ್ಥೆಯ ಬಿ.ಆರ್.ಬಿ. ಕಾಲೇಜಿನಲ್ಲಿ ಘಟಕವಿದೆ. ಈ ಆಘಾತಕಾರಿ ಶುಲ್ಕ ಏರಿಕೆಯ ವಿರುದ್ಧ ಈ ಶೈಕ್ಷಣಿಕ ವರ್ಷದ ಆರಂಭದಲ್ಲೇ ಎಸ್ಎಫ್ಐ ಯೋಜನಾಬದ್ಧವಾಗಿ ಕಾರ್ಯಾಚರಣೆಗಿಳಿಯಿತು.

ಅತಿ ದುಬಾರಿಯಾದ ಶುಲ್ಕಗಳನ್ನು ಕಟ್ಟಿ ಯಾರೂ ಕಾಲೇಜಿಗೆ ಪ್ರವೇಶ ಪಡೆಯಬಾರದೆಂದು ವಿದ್ಯಾರ್ಥಿಗಳಿಗೆ ಎಸ್ಎಫ್ಐ ಘಟಕ ಕರೆ ನೀಡಿತು. ಅನಿರ್ದಿಷ್ಟಾವಧಿ ತರಗತಿ ಬಹಿಷ್ಕಾರ ಕರೆ ನೀಡಿತು. ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು. ಸಾಮೂಹಿಕ ಧರಣಿ ಆರಂಭವಾಯಿತು.

ಆಡಳಿತ ಮಂಡಳಿ ಸಮಸ್ಯೆಗೆ ಸ್ಪಂದಿಸಲಿಲ್ಲ. ತಮ್ಮ ಸುಲಿಗೆಕೋರ ನೀತಿಗಳಿಗೆ ನೆಪಗಳನ್ನು ನೀಡತೊಡಗಿತು. ಕಾಲೇಜು ಕಟ್ಟಡ ವಿಸ್ತರಿಸಬೇಕು, ಸುಣ್ಣ ಬಣ್ಣ ಮಾಡಬೇಕು, ಅನುದಾನವಿಲ್ಲದ ಶಿಕ್ಷಕರ ಸಂಬಳ ಕೊಡಬೇಕು... ಹೀಗೆ. ಕನಿಷ್ಟ ಚಳುವಳಿ ನಿರತ ವಿದ್ಯಾರ್ಥಿಗಳೊಂದಿಗೆ ಮಾತನಾಡಲೂ ನಿರಾಕರಿಸಿದರು. ಕೆಲ ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿ ಸೇರಿಸಿ ತಿಪ್ಪೆ ಸಾರಿಸಲು ಪ್ರಯತ್ನಿಸಿದರು. ವಿದ್ಯಾರ್ಥಿಗಳು ಇಂತಹ ಪ್ರಯತ್ನಕ್ಕೆ ಸೊಪ್ಪು ಹಾಕಲಿಲ್ಲ.

ಈ ಪ್ರತಿಭಟನೆಯ ನಂತರ ಕಾಲೇಜು ಆಡಳಿತ ವಿದ್ಯಾರ್ಥಿ ಮುಖಂಡರ ಜೊತೆಯಲ್ಲಿ ಮಾತನಾಡಲು ಒಪ್ಪಿತು. ಆದರೆ ಮಾತಾಡಿದ್ದೇನು? ಅದೇ ಹಳೆಯ ರಾಗ. ಶುಲ್ಕ ಇಳಿಸುವುದು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಶುಲ್ಕ ಕಟ್ಟಬೇಕು. ಮಾತುಕತೆ ಮುರಿದುಬಿತ್ತು. ಮುಷ್ಕರ ಮುಂದುವರಿಯಿತು.



ಈ ನಡುವೆ ತಾರಾನಾಥ್ ಶಿಕ್ಷಣ ಸಂಸ್ಥೆಯ ಹೋರಾಟ ರಾಯಚೂರಿನಲ್ಲಿ ಮನೆ ಮನೆ ಮಾತಾಯಿತು. ಹಲವು ಪತ್ರಿಕೆಗಳು ಮಾಧ್ಯಮಗಳು ಚಳುವಳಿಯ ಪರವಾಗಿ ನಿಂತು ಉತ್ತಮ ವರದಿ ನೀಡಿದವು. ವಿದ್ಯಾರ್ಥಿ ಪೋಷಕರ ಅಸಮಾಧಾನ ಹಾಗೂ ಚಳುವಳಿ ತೀವ್ರಗೊಂಡಿತು.

ಜುಲೈ 10, 2003 ಈ ಗಂಭೀರ ಶೈಕ್ಷಣಿಕ ಸಮಸ್ಯೆಯಲ್ಲಿ ಜಿಲ್ಲಾಡಳಿತ ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸಿ ನೂರಾರು ವಿದ್ಯಾರ್ಥಿ- ವಿದ್ಯಾರ್ಥಿನಿಯರು ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಕಛೇರಿಗೆ ಬಂದು ಧರಣಿ ಕುಳಿತರು. ಧೋ ಧೋ ಎಂದು ಸುರಿಯುವ ಮಳೆಯಲ್ಲೂ ಸಹ ವಿದ್ಯಾರ್ಥಿನಿಯರು, ವಿದ್ಯಾರ್ಥಿಗಳು ಏಳಲಿಲ್ಲ. ವಿದ್ಯಾರ್ಥಿಗಳು ಅದರಲ್ಲಿಯು ವಿದ್ಯಾರ್ಥಿನಿಯರ ಪ್ರತಿಭಟನೆಯ ಕಿಚ್ಚನ್ನು ಕಂ ಜಿಲ್ಲಾಡಳಿತ ಮತ್ತು ಕಾಲೇಜು ಆಡಳಿತ ಬೆಚ್ಚಿತು.

ಆರ್ಥಿಕವಾಗಿ-ಸಾಮಾಜಿಕವಾಗಿ ಹಿಂದು ದಂತಹ ರಾಯಚೂರು ಜಿಲ್ಲೆಯ ವಿದ್ಯಾರ್ಥಿ ಯರು ಕಾಲೇಜಿನ ಮುಂದೆ ವಾರಗಟ್ಟಲೆ ಧರ ಕೂರುವುದು ಕಾಲೇಜಿಗೆ ಮುತ್ತಿಗೆ ಹಾಕುವು ಸುರಿಯುವ ಮಳೆಯಲ್ಲಿ ಜಿಲ್ಲಾಧಿಕಾರಿಗಳ ಕಛೇ ಮುಂದೆ ಪಟ್ಟು ಹಿಡಿದು ಕೂರುವುದೆಂದರೇನ

ಜೂನ್ 10, 2003 ಎಸ್ಎಫ್ಐ ತಾರಾನಾಥ ಶಿಕ್ಷಣ ಸಂಸ್ಥೆಗೆ ಮುತ್ತಿಗೆ ಹಾಕಿ, ಪ್ರತಿಭಟಿಸಿತು. ಪೋಲೀಸರು ಮತ್ತು ವಿದ್ಯಾರ್ಥಿ ಮುಖಂಡರೊಡನೆ ವಾಗ್ವಾದ ನಡೆಯಿತು. ಕಾಲೇಜಿನ ಈ ಸಮಸ್ಯೆಯ ಕುರಿತು ಮಧ್ಯ ಪ್ರವೇಶಿಸ ಬೇಕೆಂದು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾಗ್ಯೂ ಜಿಲ್ಲಾಡಳಿತ ಈ ಬಗೆಗೆ ಮುಗುಂ ಆಗಿದ್ದು ತನ್ನ ಜಾಣ ಕುರುಡುತನ ಪ್ರದರ್ಶಿಸಿತು.

ಕಾಲೇಜು ಬಂದ್- ರಸ್ತೆ ತಡೆ ಯಶಸ್ವಿ

ಉಡುಪಿ : ಸಿ.ಇ.ಟಿ. ಶುಲ್ಕ ಏರಿಕೆ, ಏಕರೂಪ ಶುಲ್ಕ ವಿರೋಧಿಸಿ, ಪದವಿ ಕಾಲೇಜುಗಳ ಶುಲ್ಕ ಏರಿಕೆಯನ್ನು ಖಂಡಿಸಿ, ಸಮರ್ಪಕ ಬಿಸಿಯೂಟ ಜಾರಿಗಾಗಿ, ಶಾಲಾ ಶುಲ್ಕಗಳ ಸಂಪೂರ್ಣ ರದ್ದತಿಗೆ ಒತ್ತಾಯಿಸಿ, ಶಿಕ್ಷಕರ ಹುದ್ದೆಗಳು ಖಾಲಿ ಇರುವಲ್ಲಿ ಭರ್ತಿಗಾಗಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಒತ್ತಾಯಿಸಿ, ಹಾಸ್ಟೆಲ್ ಅವ್ಯವಸ್ಥೆ - ಭ್ರಷ್ಟಾಚಾರ ಪ್ರತಿಭಟಿಸಿ, ಆಹಾರದ ವೆಚ್ಚ ಹೆಚ್ಚಳಕ್ಕಾಗಿ, ಶಿಕ್ಷಣದ ಕೋಮುವಾದೀಕರಣವನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಫ್ಎಫ್ಐ) ಕರೆ ನೀಡಿದ್ದ ಕಾಲೇಜು ಬಂದ್ ಯಶಸ್ವಿಯಾಗಿದೆ.

ಉಡುಪಿ ನಗರದಲ್ಲಿ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ನಗರದ ಮಧ್ಯೆ ಇರುವ ಹನುಮಾನ್ ವೃತ್ತದ ಬಳಿ ರಸ್ತೆ ತಡೆ ನಡೆಸಿದರು. ಪ್ರತಿಭಟನಾ ನಿರತ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷರಾದ ಕವಿರಾಜ್ ಎಸ್.ರವರು ಮಾತನಾಡಿ ಶೈಕ್ಷಣಿಕ ಬೇಡಿಕೆ ಈಡೇರಿಸಲು ರಾಜ್ಯ ಸರಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಎಸ್.ಎಫ್.ಐ. ಮುಖಂಡರಾದ ವಿದ್ಯಾರಾಜ, ವಿನಯರಾಜ್, ಆನಂದ ಇಲಿಯಾಸ್, ಕಿಶೋರ್ ಮುಂತಾದವರು ವಹಿಸಿದ್ದರು.

ಉಡುಪಿಯಲ್ಲಿ ಪೂರ್ಣಪ್ರಜ್ಞ ಕಾಲೇಜು, ಪೂರ್ಣಪ್ರಜ್ಞ ಪಿ.ಯು.ಸಿ ಕಾಲೇಜು, ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು, ಎಂ.ಜಿ.ಎಂ, ಎಂ.ಪಿ.ಎಂ.ಪಿ., ಯು.ಪಿ.ಎಂ.ಸಿ., ಮೈಕ್ರೊ ಬಿ.ಬಿ.ಎಂ., ಸರಕಾರಿ ಪ್ರಥಮ ದರ್ಜೆ ಕಾಲೇಜು, ಪದವಿ ಪೂರ್ವ ಕಾಲೇಜು, ಸರಕಾರಿ ಹೆಣ್ಣು ಮಕ್ಕಳ ಕಾಲೇಜು, ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ ಮತ್ತು ಕಾಪು, ಮಂಚಕಲ್, ಹೆಜಮಾಡಿ ಕಾಲೇಜು ಹಾಗೂ ಇನ್ನು ಹೆಚ್ಚಿನ ಕಾಲೇಜಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು.

ಕಾರ್ಕಳದಲ್ಲಿ ಎಸ್.ಎಫ್.ಐ.ನ ಜಿಲ್ಲಾ ಸಮಿತಿ ಕರೆಯಂತೆ ಕಾರ್ಕಳದಲ್ಲೂ ಕೂಡಾ, ಹೆಚ್ಚಿನ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು.

ಕುಂದಾಪುರದಲ್ಲಿ ಕೂಡಾ ಹೆಚ್ಚಿನ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ.



ಬ್ರಹ್ಮಾವರದಲ್ಲಿ ಯಶಸ್ವಿ ಕಾಲೇಜು ಬಂದ್ -ರಸ್ತೆ ತಡೆ

ಎಸ್.ಎಫ್.ಐ.ನ ಉಡುಪಿ ಜಿಲ ಸಮಿತಿಯ ಕರೆಯಂತೆ ಬ್ರಹ್ಮಾವರದ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ರ ತಡೆಯನ್ನು ಮಾಡಲಾಯಿತು.

ಬ್ರಹ್ಮಾವರದಲ್ಲಿ ಎಸ್.ಎಂ.ಎಸ್. ಜ ಕಾಲೇಜು, ಎಸ್.ಎಂ.ಎಸ್.ಪಿ.ಯು ಕಾಲೇಜು, ಕ್ರಾಸ್‌ಲ್ಯಾಂಡ್ ಕಾಲೇಜು, ಸರ್ಕಾ ಪ್ರಥಮ ದರ್ಜೆ ಕಾಲೇಜು, ಬಾರಕೂರ ಕೊಕ್ಕರ್ಣೆ ಕಾಲೇಜು ಮುಂತಾದ ಕಾ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು ಹೋರಾಟದ ನೇತೃತ್ವವನ್ನು ಅಖಿಲ್ ಹೆ ಪ್ರವೀಣ್ ಕುಮಾರ್, ನಾರಾಯ ರಾಘವೇಂದ್ರ ಶೆಟ್ಟಿ, ರಾಜೇಂದ್ರ ಮುಂತಾದವ ವಹಿಸಿದ್ದರು.

ಚಳುವಳಿ

ಮಸ್ಯೆ ಭೀಕರತೆ ಏನೆಂಬುದಕ್ಕೆ ವಿದ್ಯಾರ್ಥಿ-
ದ್ಯಾರ್ಥಿನಿಯರು ಇದರಿಂದ ಎಷ್ಟು ನೊಂದಿದ್ದರು
ಂಬುದಕ್ಕೆ ಇಂತಹ ದೃಢವಾದ ಪ್ರತಿಭಟನೆಯೇ
ಕ್ಷಿ.

ಜುಲೈ 13 ರಂದು ಈ ಹೋರಾಟವನ್ನು
ುಂದುವರಿಸಲು ಎಐಡಿಎಸ್‌ಓ, ಎಬಿವಿಪಿ,
ನ್‌ಎಸ್‌ಯುಐ ಮತ್ತಿತರ ಸಂಘಟನೆಗಳ
ತಿನಿಧಿಗಳನ್ನೊಳಗೊಂಡ ವಿಶಾಲ ಹೋರಾಟ
ಮಿತಿಯನ್ನು ರಚಿಸಲಾಯಿತು. ಎಸ್‌ಎಫ್‌ಐ
ರವಾಗಿ ರಾಜ್ಯ ಸಮಿತಿ ಸದಸ್ಯರಾದ ವೀರಭದ್ರ
ಮಿತಿಯ ಒಬ್ಬ ಸಂಚಾಲಕರಾಗಿ, ಎಐಡಿಎಸ್‌ಓ
ಸಂಘಟನೆಯ ಪರವಾಗಿ ಮತ್ತೊಬ್ಬರು
ಸಂಚಾಲಕರಾಗಿ ಆಯ್ಕೆಯಾದರು
ಹೋರಾಟ ಮುಂದುವರೆಯಿತು.

ಜುಲೈ 15 ರಂದು ಜಿಲ್ಲಾಧಿಕಾರಿಗಳು,
ವಿದ್ಯಾರ್ಥಿ ಪ್ರತಿನಿಧಿ ಸರ್ಕಾರ ಪ್ರತಿನಿಧಿ
ಹಾಗೂ ಆಡಳಿತ ಮಂಡಳಿ ಪ್ರತಿನಿಧಿಗಳ
ತ್ರಿಪಕ್ಷೀಯ ಸಭೆ ಕರೆದರು. ಈ
ಸಭೆಯಲ್ಲಿಯೂ ಕಾಲೇಜು ಪ್ರತಿನಿಧಿಗಳದ್ದೂ
ಅದೇ ಮೊಂಡುವಾದ ಮುಂದುವರೆಯಿತು.
್ಯಾರ್ಥಿಗಳು ಚಳುವಳಿ ತೀವ್ರಗೊಳಿಸುವ
ರ್ಕಾರಕ್ಕೆ ಬಂದರು.

ಸರ್ಕಾರದಿಂದ ಅನುದಾನ ಪಡೆಯುವ
ಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಏಕಾಏಕಿ ಏಕಿಷ್ಟು
ತಿಗೆಯ ಹೊರೆ. ಇದುವರೆಗೆ ಸಂಗ್ರಹವಾದ
ತಿಗೆಯ ಮೊತ್ತವೆಷ್ಟು? ಅದು ಯಾವ ಯಾವ
ಬಳಕೆಯಾಗಿದೆ? ಇತ್ಯಾದಿ ಪ್ರಶ್ನೆಗಳಿಗೆ ಆಡಳಿತ
ಂಡಳಿ ಬಳಿ ಸಮರ್ಪಕ ಉತ್ತರವಿರಲಿಲ್ಲ.
ತ್ರವಲ್ಲ ಆಡಳಿತ ಮಂಡಳಿ ಚರ್ಚೆಯಲ್ಲಿ ತೀವ್ರ
ಖಭಂಗವನ್ನು ಎದುರಿಸಿತು.

ಂದು ಹಂತದಲ್ಲಿ ಆಡಳಿತ ಮಂಡಳಿಯ
ನಿಧಿ, ತಾವು ವಿದ್ಯಾರ್ಥಿಗಳಿಂದ ವಸೂಲಿ
ಡುವ ವಂತಿಗೆ ಕಾನೂನುಬದ್ಧ ಅಲ್ಲ.
ತ್ವಾದಲ್ಲಿ ತಾವು ಸರ್ಕಾರದ ಸಂಬಂಧಿಸಿದ
ುವಮಾವಳಿಗಳನ್ನು ತೋರಿಸುವುದಾಗಿ
ಿದರು. ಇದಕ್ಕಾಗಿ ಆಡಳಿತ ಮಂಡಳಿಗೆ
ಯವನ್ನು ನೀಡಲಾಯಿತು. ಆದರೆ ತಮ್ಮ
ಗೆ ವಸೂಲಿಗೆ ಸಮರ್ಥನೆಯಾಗಿ ಸರ್ಕಾರದ
ವುದೇ ನಿಯಮಾವಳಿಯನ್ನು ಪ್ರದರ್ಶಿಸುವಲ್ಲಿ
ಳಿತ ಮಂಡಳಿ ವಿಫಲವಾಗಿ ಮುಖಭಂಗ
ಭವಿಸಿತು.

ರ್ಕಾರದ ನಿಯಮಾವಳಿಯು ಖಾಸಗಿ ಶಿಕ್ಷಣ
ಯೊಂದು ತಲಾ ವಿದ್ಯಾರ್ಥಿಗಳಿಂದ ಗರಿಷ್ಟ
ರೂಪಾಯಿ ವಂತಿಗೆಯನ್ನು ಮಾತ್ರವೇ
ೂಲಿ ಮಾಡಲು ಅವಕಾಶವಿದೆ.
ರ್ಥಿಗಳಿಗೆ ಈ ಹೊತ್ತಿಗಾಗಲೇ ನೈತಿಕ ವಿಜಯ
ು. ಆದರೆ ಆಡಳಿತ ಮಂಡಳಿ ಸೋಲೊಪ್ಪಲು
ರಲಿಲ್ಲ.

ಚಳುವಳಿಯ ಕಾವು ಏರಿದಂತೆ ಹೋರಾಟದ ರಾಜಕೀಯ ಲಾಭ ಪಡೆಯಲು ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಚಳುವಳಿ ನಿರತ ವಿದ್ಯಾರ್ಥಿಗಳನ್ನು ಕಂಡು ಹೋರಾಟಕ್ಕೆ ತಮ್ಮ ಬೆಂಬಲ ತೋರ್ಪಡಿಸಿಕೊಂಡವು. ಜುಲೈ 19 ರಂದು ಜಿಲ್ಲಾ ಉಸ್ತುವಾರಿ ಮಂತ್ರಿ ರಾಜಾ ಅಮರೇಶ್ವರ ನಾಯಕ್ ಭೇಟಿ ನೀಡಿ ಭರವಸೆ ನೀಡಿದರು.

ಮಂತ್ರಿ, ಶಾಸಕರ ಭರವಸೆ ನಂಬಿ ಕೂರಲಿಲ್ಲ ವಿದ್ಯಾರ್ಥಿಗಳು. ಸಮಸ್ಯೆ ಇತ್ಯರ್ಥವಾಗದಿದ್ದಲ್ಲಿ, ಜುಲೈ 22 ರಂದು ರಾಯಚೂರು ಬಂದ್ ನಡೆಸಲು ವಿದ್ಯಾರ್ಥಿಗಳ ಜಂಟಿ ಹೋರಾಟ ಸಮಿತಿ ಕರೆ ನೀಡಿತು. ಸಿದ್ಧತೆಗಳು ಆರಂಭವಾದವು. ಈ ನಡುವೆ ಜಿಲ್ಲಾಧಿಕಾರಿಗಳು, ಆಡಳಿತ ಸಂಸ್ಥೆ ವಸೂಲಿ ಮಾಡುತ್ತಿರುವ ವಂತಿಗೆ ಅಕ್ರಮ ನಿಲ್ಲಿಸಬೇಕೆಂದು ಆದೇಶ ನೀಡಬೇಕಾಯಿತು. ಜಿಲ್ಲಾ ಉಸ್ತುವಾರಿ ಸಚಿವರು, ಸರ್ಕಾರದ ಆದೇಶ ಪಾಲಿಸದಿದ್ದರೆ ಆಡಳಿತ ಮಂಡಳಿಯ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಬೇಕಾಗಿ ಬಂತು.

ಆಡಳಿತ ಮಂಡಳಿಯು ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳನ್ನು ಒಪ್ಪದಿದ್ದರೆ ತಾರಾನಾಥ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯನ್ನು ರದ್ದುಪಡಿಸಿ, ಸರ್ಕಾರದ ಪರವಾಗಿ ಆಡಳಿತಾಧಿಕಾರಿ ಯನ್ನು ನೇಮಿಸಬೇಕೆಂದು ಒತ್ತಾಯಿಸಿತು.

ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಮನಗಂಡ ಆಡಳಿತ ಮಂಡಳಿ ರಾಯಚೂರು ಬಂದ್‌ಗೆ ಒಂದು ದಿನ ಮುಂಚೆ ವಿದ್ಯಾರ್ಥಿ ಮುಖಂಡರೊಂದಿಗೆ ಮಾತುಕತೆ ನಡೆಸಿ ವಿದ್ಯಾರ್ಥಿಗಳ ಬೇಡಿಕೆಗಳನ್ನು ಒಪ್ಪುವುದಾಗಿ ಪ್ರಕಟಿಸಿತು. ಸುಮಾರು ಒಂದು ತಿಂಗಳ ಸುದೀರ್ಘ ಹೋರಾಟದಲ್ಲಿ ಅನ್ಯಾಯದ ವಿರುದ್ಧ ಪ್ರತಿಭಟನೆಗಿಳಿದ ವಿದ್ಯಾರ್ಥಿ- ವಿದ್ಯಾರ್ಥಿನಿಯರ - ಪೋಷಕ - ಶಿಕ್ಷಣ ಪ್ರೇಮಿಗಳ ಕೈ ಮೇಲಾಗಿ ಸುಲಿಗೆಕೋರ ಶಕ್ತಿಗಳು ಹಿಮ್ಮೆಟ್ಟಬೇಕಾಯಿತು. ಸಂಘಟಿತ ವಿದ್ಯಾರ್ಥಿ ಚಳುವಳಿ ಈ ಕೆಳಕಂಡ ನಿರ್ದಿಷ್ಟ ಬೇಡಿಕೆಗಳನ್ನು ಗೆದ್ದಿದೆ.

200 ರೂ ಇದ್ದ ಅರ್ಜಿ ಶುಲ್ಕವನ್ನು 100 ರೂಪಾಯಿಗೆ ಇಳಿಸಲಾಗಿದೆ.

ಪದವಿ ವಿಜ್ಞಾನದ ವಿದ್ಯಾರ್ಥಿಗಳಿಗೆ ವಾರ್ಷಿಕ 1500 ರೂ. ವಾಣಿಜ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ 1000 ರೂ. ವಂತಿಗೆ ಏರಿಕೆಯನ್ನು ಕೈಬಿಡಲಾಗಿದೆ. ಕಲಾ ವಿದ್ಯಾರ್ಥಿಗಳ 500 ರೂ. ವಂತಿಗೆಯಲ್ಲಿ ಬಡ ಹಾಗೂ ದಲಿತ- ಹಿಂದುಳಿದ ವಿದ್ಯಾರ್ಥಿಗಳಿಗೆ ರಿಯಾಯತಿ ನೀಡಲಾಗಿದೆ. ಕಂಪ್ಯೂಟರ್ ಸೈನ್, ಮೈಕ್ರೋ ಬಯಾಲಜಿ ಕೋರ್ಸುಗಳಿಗೆ 2000 ರೂ ವಂತಿಗೆ ಏರಿಕೆಯನ್ನು ವಾಪಸ್ ಪಡೆಯಲಾಗಿದೆ.

ಸಿಇಟಿ - ತರಬೇತಿಗೆಂದು ಪಿಯುಸಿ ವಿದ್ಯಾರ್ಥಿಗಳಿಂದ ವಾರ್ಷಿಕ 5000 ರೂ ವಸೂಲಿ, ಮಾಡುತ್ತಿರುವುದು ಅನಧಿಕೃತವಾದ್ದರಿಂದ ಈ ತರಬೇತಿಯನ್ನು ರದ್ದುಪಡಿಸಲಾಗಿದೆ.

ವಿದ್ಯಾರ್ಥಿಗಳ ಸಂಘಟಿತ ಹೋರಾಟದಿಂದ ಶಿಕ್ಷಣ ವ್ಯಾಪಾರೀಕರಣಕ್ಕೆ ಶಿಕ್ಷಣ ಸಂಸ್ಥೆಗಳ ಧನದಾಹಕ್ಕೆ ತಡೆ ಒಡ್ಡಬಹುದು ಎಂಬುದಕ್ಕೆ ಈ ಹೋರಾಟ ಒಂದು ಯಶಸ್ವಿ ಉದಾಹರಣೆ. ತಮ್ಮ ಸುದೀರ್ಘ ಹೋರಾಟದಿಂದ ವಿದ್ಯಾರ್ಥಿಗಳು ಒಂದು ದೈತ್ಯ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯನ್ನು ಮಣಿಸಿದ್ದಾರೆ. ಒಂದು ಅಂದಾಜಿನಂತೆ ಒಟ್ಟಾರೆಯಾಗಿ ಈ ಚಳುವಳಿಯಿಂದ ವರ್ಷಕ್ಕೆ ಸುಮಾರು ಒಂದು ಕೋಟಿಗೂ ಮೀರಿದ ಬಡ ವಿದ್ಯಾರ್ಥಿಗಳ - ಪೋಷಕರ ಹಣ ಶಿಕ್ಷಣ ವ್ಯಾಪಾರೀಕರಣದ ಶಕ್ತಿಗಳ ಕೈಸೇರುವುದು ತಪ್ಪಿದಂತಾಗಿದೆ. ●

ಹಾವೇರಿ ಜಿಲ್ಲೆಯಲ್ಲಿ ವಿದ್ಯಾರ್ಥಿ ಚಳುವಳಿಯ ಮುನ್ನಡೆ

ವಿದ್ಯಾರ್ಥಿಗಳೇ ಉದ್ಘಾಟಿಸಿದ ಹಾಸ್ಟೆಲ್

ರಾಜ್ಯದ ಅನೇಕ ಕಡೆ ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ಸ್ವಂತಃ ಕಟ್ಟಡಗಳಿಲ್ಲ. ಬಾಡಿಗೆ ಕಟ್ಟಡಗಳು, ಗೂಡಂಗಡಿಗಳು, ಮೂಲಭೂತ ಸೌಕರ್ಯಗಳಿಲ್ಲದಿರುವುದು ಕಠೋರ ವಾಸ್ತವ. ಆದರೆ ಹಾವೇರಿ ಜಿಲ್ಲೆ ಗಬ್ಬೂರಿನದು ಭಿನ್ನ ಕಥೆ. ಅಲ್ಲಿ ಕಳೆದ ಒಂದು ವರ್ಷದಿಂದ ಹಾಸ್ಟೇಲ್ ಕಟ್ಟಡವಿದೆ. 17.61 ಲಕ್ಷ ವೆಚ್ಚ ಮಾಡಿ ಸುಸಜ್ಜಿತವಾಗಿ ಕಟ್ಟಿಸಲಾಗಿದೆ. 50 ವಿದ್ಯಾರ್ಥಿಗಳ ಸಾಮರ್ಥ್ಯವಿರುವ ಈ ಹಾಸ್ಟೇಲ್ ವಿದ್ಯಾರ್ಥಿಗಳ ಪಾಲಿಗೆ ಇಲ್ಲವಾಗಿತ್ತು. ವಿವಿಧ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಪ್ರಭುಗಳದ್ದು ತಮ್ಮ ನಾಯಕರನ್ನೇ ಉದ್ಘಾಟನೆಗೆ ಕರೆಸಬೇಕೆಂದು ಹಠ. ಒಂದು ಪಕ್ಷದವರಂತೂ ನಮ್ಮ ಪಕ್ಷದ ಆಡಳಿತವಿದ್ದಾಗ ಮಂಜೂರಾದ ಕಟ್ಟಡ ಹಾಗಾಗಿ ನಮ್ಮ ಪಕ್ಷ ಮತ್ತೆ ಅಧಿಕಾರಕ್ಕೆ ಬಂದಾಗಲೇ ನಮ್ಮ ಮಂತ್ರಿಗಳನ್ನು ಕರೆಸಿ ಉದ್ಘಾಟಿಸಬೇಕೆಂಬ ಒತ್ತಡ ಹೇರುತ್ತಿದ್ದರು. ಅಲ್ಲಿಯವರೆಗೆ ಹಂದಿಗೂಡಿನಂತ ಕಟ್ಟಡದಲ್ಲೇ ವಿದ್ಯಾರ್ಥಿಗಳ ವಾಸ.

ಇದು ಹಾವೇರಿ ಜಿಲ್ಲಾ ಎಸ್.ಎಫ್.ಐ.ನ ಗಮನಕ್ಕೆ ಬಂತು. ಹೋಗಿ ನೋಡಿದರೆ ಸುಸಜ್ಜಿತ ಕಟ್ಟಡ ತುಕ್ಕು ಹಿಡಿಯುತ್ತಿದೆ. ಹಂದಿಗೂಡಿನಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳು ಸರಿಯಾಗಿ ನೀರು, ನೆರಳಿಲ್ಲದೆ ಬಳಲಿ ಬೆಂಡಾಗಿದ್ದಾರೆ. ಎಸ್.ಎಫ್.ಐ ಮುಖಂಡರು ಅಧಿಕಾರಿಗಳನ್ನು ಕೇಳಿದರು, ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿದರು. ಎಸ್.ಎಫ್.ಐ. ನ ಪ್ರಯತ್ನ ಕಂಡ ರಾಜಕೀಯ ಮುಖಂಡರು ವಿದ್ಯಾರ್ಥಿಗಳಿಗೆ ಧಮಕಿ ಹಾಕಿದರು. ಆದರೆ ಎಸ್.ಎಫ್.ಐ ತಮ್ಮ ಹಿಂದಿದೆ ಎಂದು ಅರಿತ ವಿದ್ಯಾರ್ಥಿಗಳು, ಹಳೆಯ ಹಾಸ್ಟೇಲ್‌ನಿಂದ ತಮ್ಮ ಲಗೇಜುಗಳನ್ನು ಹೊತ್ತು ಸರದಿಯಲ್ಲಿ ನಡೆದರು. ಎಸ್.ಎಫ್.ಐ ಮುಖಂಡರೂ ನಡೆದರು, ಸುತ್ತಿಗೆ ತಂದರು. ಬೀಗಕ್ಕೆ ಪೆಟ್ಟು ಕೊಟ್ಟರು. ಪೆಟ್ಟು ತಿಂದ ಬೀಗ ಬಾಗಿಲು ತೆರೆಯಿತು. ವಿದ್ಯಾರ್ಥಿಗಳು ನೂತನ ಕಟ್ಟಡದಲ್ಲಿ ಸಾಮಾನುಗಳನ್ನಿಟ್ಟರು. ಹಾಸ್ಟೆಲ್ ಉದ್ಘಾಟನೆಯಾಯಿತು. ಜುಲೈ 21 ರಂದು ವಿದ್ಯಾರ್ಥಿಗಳಿಂದಲೇ ವಿಶೇಷ ರೀತಿಯಲ್ಲಿ ಉದ್ಘಾಟನೆಗೊಂಡ ಈ 'ಕಾರ್ಯಕ್ರಮ' ದ ಚಿತ್ರ ಪತ್ರಿಕೆಗಳಲ್ಲಿ ಪ್ರಕಟವಾಯಿತು. ದೂರದರ್ಶನ ಮಾಧ್ಯಮದಲ್ಲೂ ವರದಿಯಾಗಿ ಊರೆಲ್ಲಾ ಸುದ್ದಿಯಾಯಿತು. ಸ್ಥಳೀಯ ಸಂಸ್ಥೆಯ ಜನ, ಮತ್ತು ಅಧಿಕಾರಿಗಳು ರಾಗ ಬದಲಿಸಿದರು. ಕುಡಿಯುವ ನೀರಿನ ವ್ಯವಸ್ಥೆ ಇರಲಿಲ್ಲ. ಹಾಗಾಗಿ ಹಾಸ್ಟೇಲ್ ಉದ್ಘಾಟಿಸಿರಲಿಲ್ಲ ಎಂಬ ನೆಪ ಹೇಳುತ್ತಿದ್ದಾರೆ. ಆದರೆ ಬಾಯಿ ಮುಚ್ಚಿಕೊಂಡು ಈಗ ಊಟ ವಸತಿಗೆ ವ್ಯವಸ್ಥೆ ಮಾಡಿ ತಮ್ಮ ಮುಖ ಉಳಿಸಿಕೊಳ್ಳುವ ಯತ್ನ ನಡೆಸಿದ್ದಾರೆ. ವಿದ್ಯಾರ್ಥಿಗಳ ಅಧ್ಯಯನ-ವಾಸ ಈಗ ಸುಗಮವಾಗಿ ಸಾಗಿದೆ.

ಹಾನಗಲ್ ತಾಲೂಕಿನ ಸರ್ಕಾರಿ ಪದವಿ ಕಾಲೇಜಿನ ಕಟ್ಟಡ ಮೂಲಭೂತ ಸೌಕರ್ಯಗಳ ಸುಧಾರಣೆಗಾಗಿ ಒತ್ತಾಯಿಸಿ ನಡೆಸಿದ ಹೋರಾಟದ ಫಲವಾಗಿ ಕಾಲೇಜು ಅಭಿವೃದ್ಧಿಗೆ 14 ಲಕ್ಷ ರೂಪಾಯಿಗಳ ಮಂಜೂರಾತಿ ದೊರೆತಿದೆ.

ಒಂದು ಪ್ರಮುಖ ನಗರವೂ ಜಿಲ್ಲಾ ಕೇಂದ್ರವೂ ಆದ ಹಾವೇರಿಯಲ್ಲಿ ಒಂದೇ ಒಂದು ಸರ್ಕಾರಿ ಪದವಿ ಕಾಲೇಜು ಇಲ್ಲದ ಪರಿಸ್ಥಿತಿಯಲ್ಲಿ ಹಾವೇರಿ ಸರ್ಕಾರಿ ಪದವಿ ಕಾಲೇಜಿಗಾಗಿ ಆಗ್ರಹಿಸಿ ಜುಲೈ 25 ರಂದು ಎಸ್‌ಎಫ್‌ಐ ಕರೆ ನೀಡಿದ ಹಾವೇರಿ ಶಾಲಾ ಕಾಲೇಜು ಬಂದ್ ಸಂಪೂರ್ಣ ಯಶಸ್ವಿಯಾಗಿದ್ದು ಸುಮಾರು 3000 ಕ್ಕೂ ಅಧಿಕ, ವಿದ್ಯಾರ್ಥಿಗಳು ಹಾವೇರಿಯ ರಾಷ್ಟ್ರೀಯ ಹೆದ್ದಾರಿ 4 ಅನ್ನು ಎರಡು ಗಂಟೆಗೂ ಹೆಚ್ಚು ಕಾಲ ಬಂದ್ ಮಾಡಿ ಪ್ರತಿಭಟಿಸಿದ್ದಾರೆ.

...ಲೇಜು ಉಳಿಸಿಕೊಂಡ ಗಜೇಂದ್ರಗಢದ ವಿದ್ಯಾರ್ಥಿಗಳು...

ದಗ್ ಜಿಲ್ಲೆಯ ಗಜೇಂದ್ರಗಡದ ಹೋರಾಟ
ಬಗೆಯದು ವಿವಿಧ ಕುಂಟು ನೆಪಗಳ
ರದಲ್ಲಿ ಸರ್ಕಾರ ಮುಚ್ಚಬೇಕೆಂದು
ರ್ಣಿಸಿದ್ದ ಕಾಲೇಜನ್ನು ವ್ಯವಸ್ಥಿತ ಯೋಜನೆ
ಚಳುವಳಿಯ ಮೂಲಕ ಉಳಿಸಿಕೊಂಡ
ಹೋರಾಟದ ಕತೆ ಇದು. ಗಜೇಂದ್ರಗಡ
ದಲ್ಲಿ ಸುವ್ಯವಸ್ಥಿತ ಕಟ್ಟಡವುಳ್ಳ ಸರ್ಕಾರಿ
ಜೊಂದು ನಗರದ ಮಧ್ಯಭಾಗದಲ್ಲೇ ಇದೆ.
ಈ ಪ್ರದೇಶದ ಖಾಸಗಿ ಕಾಲೇಜುಗಳ
ತ ಲಾಬಿಯು ಈ ಕಾಲೇಜನ್ನು ಸುಗಮವಾಗಿ
ುವಂತೆ ಬಿಡಲು ಸಿದ್ಧವಿಲ್ಲ. ಹಲವು
ಗಳಲ್ಲಿ ಅಡ್ಡಿ ಆತಂಕ ಒಡ್ಡುತ್ತಿವೆ. ಮೊದಲಿಗೆ
ಗೆ ಅಗತ್ಯವಾದ ಶಿಕ್ಷಕರನ್ನು ಕೊಡದೆ, ಮತ್ತು
ರ್ಥಿಗಳಿಗೆ ಖಾಸಗಿ ಕಾಲೇಜುಗಳಲ್ಲಿ
ತೆ ವೈವಿಧ್ಯಮಯ ವಿಷಯ ಸಂಯೋಜನೆಗೆ

ಅವಕಾಶ ನೀಡದೇ ನಿರಾಕರಿಸಲಾಯಿತು. ಆದರೂ ಖಾಸಗಿ ಕಾಲೇಜುಗಳ ವಂತಿಗೆ ನೀಡಲಾಗದ ವಿದ್ಯಾರ್ಥಿಗಳು ಸರ್ಕಾರಿ ಕಾಲೇಜಿಗೆ ಸೇರಿದರು. ಕೊನೆಗೆ ಕಳೆದ ಶೈಕ್ಷಣಿಕ ವರ್ಷದಲ್ಲಿ ಸರ್ಕಾರ ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಈ ಕಾಲೇಜನ್ನು ಮುಚ್ಚಲು ತೀರ್ಮಾನಿಸಿತ್ತು. ಈ ಕಾಲೇಜು ಮಾತ್ರವಲ್ಲ ಇಂತಹ ಸರ್ಕಾರಿ 12 ಕಾಲೇಜುಗಳನ್ನು ಗುರುತಿಸಿ 8 ಕಾಲೇಜುಗಳನ್ನು ತತ್‌ಕ್ಷಣ ಮುಚ್ಚಿ ಆದೇಶ ಹೊರಡಿಸಿತ್ತು. ರಾಜ್ಯವ್ಯಾಪಿಯಾಗಿ ಎಸ್.ಎಫ್.ಐ ನಡೆಸಿದ ಆಂದೋಲನದಿಂದ ಕಳೆದ ವರ್ಷ ಕಾಲೇಜು ಮುಚ್ಚುವ ಆದೇಶ ವಾಪಸ್ಸಾದರೂ ಅಪಾಯದ ಕತ್ತಿ ಇನ್ನೂ ಕಾಲೇಜಿನ ಮೇಲೆ ತೂಗುತ್ತಿತ್ತು.

ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿದ ಗಜೇಂದ್ರಗಡ ನಗರಸಮಿತಿ ವೈವಿಧ್ಯಮಯವಾದ ವಿಷಯ ಸಂಯೋಜನೆಯನ್ನು ನೀಡಬೇಕೆಂದು ಮತ್ತು ಶಿಕ್ಷಕ ಹುದ್ದೆ ಭರ್ತಿ ಮಾಡಬೇಕೆಂದು ಒತ್ತಾಯಿಸಿ ಚಳುವಳಿ ನಡೆಸಿತ್ತು. ಕಳೆದ ವರ್ಷ ಹೊಸ ಹೊಸ ಸಂಯೋಜನೆಗಳು ಸಿಕ್ಕವು. ಆದರೆ ಸಂಯೋಜನೆ ಸಿಗುವ ವೇಳೆಗೆ ನಗರದ ವಿವಿಧ ಖಾಸಗಿ ಕಾಲೇಜುಗಳಲ್ಲಿ ಆಗಲೇ ವಿದ್ಯಾರ್ಥಿಗಳ ಪ್ರವೇಶ ಮುಗಿದೇ ಹೋಗಿತ್ತು. ತಾವೇ ಚಳುವಳಿ ಮಾಡಿ ಸರ್ಕಾರಕ್ಕೆ ಸ್ಥಳೀಯ ಜನ ಪ್ರತಿನಿಧಿಗಳಿಗೆ ಸರ್ಕಾರಿ ಕಾಲೇಜನ್ನು ಉಳಿಸಿಕೊಳ್ಳುವ ಮನಸ್ಸಿಲ್ಲ ಎಂಬುದು ಪದೇ ಪದೇ ಸಾಬೀತಾಯಿತು.

ಎಸ್.ಎಫ್.ಐ ನಗರ ಸಮಿತಿ ಕೈಚೆಲ್ಲಿ ಸುಮ್ಮನೆ ಕೂರಲಿಲ್ಲ. ಈ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಒಂದು ಆಂದೋಲನ ಆರಂಭಿಸಿತು. ಸರ್ಕಾರಿ ಕಾಲೇಜು ಉಳಿಸುವ ಸಲುವಾಗಿ ನಗರದ ಮನೆ ಮನೆಗೆ ತೆರಳಿದ ಎಸ್.ಎಫ್.ಐ ಕಾರ್ಯಕರ್ತರು ಸರ್ಕಾರಿ ಕಾಲೇಜಿನಲ್ಲಿ ಈಗ ಲಭ್ಯವಿರುವ ವಿಷಯ ಸಂಯೋಜನೆ ಸೌಲಭ್ಯಗಳನ್ನು ವಿವರಿಸಿದರು, ಸರ್ಕಾರಿ ಕಾಲೇಜನ್ನು ಉಳಿಸಿಕೊಳ್ಳಬೇಕಾದ ಅಗತ್ಯವನ್ನು ಮನದಟ್ಟು ಮಾಡಿಸಿದರು. ಕರಪತ್ರ ಮುದ್ರಿಸಿ ವಿತರಿಸಿದರು. ಧ್ವನಿವರ್ಧಕ ಕಟ್ಟಿಕೊಂಡು ಊರೆಲ್ಲಾ ಪ್ರಚಾರ ಮಾಡಿದರು. ಶಿಕ್ಷಣ ಖಾಸಗೀಕರಣದ ವಿರುದ್ಧದ ಹೋರಾಟದಲ್ಲಿ ಒಂದು ಪುಟ್ಟ ವಿಜಯ ಈ ವರ್ಷ ಈ ಕಾಲೇಜಿಗೆ ಉತ್ತಮ ಸಂಖ್ಯೆಯ ವಿದ್ಯಾರ್ಥಿಗಳು ಎಸ್.ಎಫ್.ಐ ಪರಿಶ್ರಮದಿಂದ ದಾಖಲಾಗಿದ್ದಾರೆ. ಇನ್ನು ಮುಂದೆ ಸರ್ಕಾರ ಕಾಲೇಜು ಮುಚ್ಚಲು ವಿದ್ಯಾರ್ಥಿಗಳ ಕೊರತೆಯ ನೆಪ ಹೇಳುವಂತಿಲ್ಲ. ಈ ಸರ್ಕಾರಿ ಕಾಲೇಜನ್ನು ಮುಚ್ಚಲು ಸರ್ಕಾರ ಇನ್ನೇನೂ ಕಾರಣ ಹುಡುಕುವುದೋ ಅಂತಹ ಸನ್ನಿವೇಶ ಎದುರಿಸಲು ಈ ಕಾಲೇಜಿನ ಎಸ್.ಎಫ್.ಐ ಘಟಕ ಈಗ ಸಜ್ಜಾಗಿದೆ.

ಈ ನೀರಾವರಿ ಯೋಜನೆ ಜಾರಿಯಾದಲ್ಲಿ ತಮ್ಮ ಒಣ ಭೂಮಿಗೆ ನೀರು ದೊರೆತು ಬದುಕು ಬಂಗಾರವಾದೀತೆಂದು ಹಿಗ್ಗಿದ್ದರು ಅಲ್ಲಿನ ಜನ. ಇದರ ನಿರ್ಮಾಣಕ್ಕೆ 30 ವರುಷಗಳೇ ಸಂದವು. ಭೂಮಿ ಕಳೆದುಕೊಂಡ ಮುಳುಗಡೆ ಪ್ರದೇಶದ ಜನರಿಗೆ ಇಂದಿಗೂ ಸೂಕ್ತ ವ್ಯವಸ್ಥೆ ಆಗಿಲ್ಲ. ಶಾಸಕರು, ಅಧಿಕಾರಿಗಳ ಆಟದ ವಿರುದ್ಧ ಪ್ರತಿಭಟನೆಗೆ ಇಳಿದಿರುವ ವರದಿ...

ಬೆಣ್ಣೆತೊರೆ ನಿರಾಶ್ರಿತರು


ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ಹಾಗೂ ಚಿಂಚೋಳಿ ತಾಲುಕಿನ 55 ಸಾವಿರ ಎಕರೆಗೆ ನೀರಾವರಿ ಒದಗಿಸುವ ಬೆಣ್ಣೆ ತೊರೆ ನೀರಾವರಿ ಯೋಜನೆ ಕೇವಲ 65 ಕೋಟಿ ಅಂದಾಜು ವೆಚ್ಚದಲ್ಲಿ 1972ರಲ್ಲಿ ಪ್ರಾರಂಭವಾದದ್ದು ಈಗ 300 ಕೋಟಿ ರೂಪಾಯಿ ನುಂಗಿ ನೀರು ಕುಡಿದಿದೆ. ಇನ್ನೂ ಪೂರ್ತಿಗೊಂಡಿಲ್ಲ. ಈ ವರ್ಷ ರೈತರ ಹೊಲಗಳಿಗೆ ನೀರು ಹರಿದು ಬರಲಿದೆಯೆಂದು ನೀರಾವರಿ ಮಂತ್ರಿ ಹೇಳಿದರೂ ಅದು ಅಸಾಧ್ಯದ ಮಾತಾಗಿದೆ. ಸ್ವತಃ ಮಂತ್ರಿ ಮಹೋದಯರು ಗೇಟ್ ತೆರೆಯಿಸಿ ನೀರು ಬಿಡಲು ಹೋದಾಗ ಗೇಟ್ ತೆರೆಯದೆ ಹೋದದ್ದು ಈ ಯೋಜನೆಯ ಕಾಮಗಾರಿಯ ಕಳಪೆತನಕ್ಕೆ ಸಾಕ್ಷಿ. ಈ ಕಳಪೆ ಕಾಮಗಾರಿಯನ್ನು ಮಾನ್ಯ ಲೋಕಾಯುಕ್ತರು ಎತ್ತಿ ತೋರಿಸಿದ್ದರೂ ಸಚಿವರು ಹಾಗೂ ಈ ಭಾಗದ ಶಾಸಕರಾದ ಬಾಬುರಾವ್ ಚಿಂಚನಸೂರು ಅದನ್ನು ಅಲ್ಲಗಳೆಯುತ್ತಲೇ ಬಂದಿದ್ದಾರೆ. ಅಷ್ಟೇ ಅಲ್ಲದೆ ಈ ಯೋಜನೆಯ ಕಾಮಗಾರಿ ಬಗ್ಗೆ ತೃಪ್ತಿ ವ್ಯಕ್ತಪಡಿಸಿ ಕೋಟಿಗಟ್ಟಲೇ ಹಣ ಕೊಳ್ಳೆ ಹೊಡೆದ ಇಂಜನಿಯರನ್ನು ಹಾಗೂ ಅದರಲ್ಲಿ ಸಾಕಷ್ಟು ಪಾಲು ಪಡೆದ ತಮ್ಮನ್ನು ಆರೋಪ ಮುಕ್ತಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಮುಳುಗಡೆ ಪ್ರದೇಶ

ಇದು ಯೋಜನೆಯ ಸ್ಥಿತಿಯಾದರೆ ಈ ಬೆಣ್ಣೆತೊರೆ ಯೋಜನೆಯಲ್ಲಿ ಮುಳುಗಡೆಯಾದ ಗ್ರಾಮಗಳ ಗ್ರಾಮಸ್ಥರ ಸ್ಥಿತಿ ಚಿಂತಾಜನಕವಾಗಿದೆ. ಈ ಯೋಜನೆ ಅಡಿಯಲ್ಲಿ ಒಟ್ಟು 10 ಗ್ರಾಮಗಳು (ಸಿರಗಾಪೂರ, ನಾಗೂರ, ಅಂಕಲಗಿ, ಹರಕಂಚಿ, ಯಕ್ಕಂಟಿ, ಕಡಬೂರ, ತೊಂಡಕಲ್, ಕನ್ನಡಗಿ, ಸಾತಖೇಡ ಹೇರ ಗ್ರಾಮಗಳು) ಮುಳುಗಡೆಯಾಗಿವೆ. ಈ ಮುಳುಗಡೆಯಾಗುವ ಗ್ರಾಮಗಳ ರೈತರ ಭೂಮಿ ಹಾಗೂ ಮನೆಗಳನ್ನು 1992ರಲ್ಲಿ ಭೂ ಸ್ವಾಧೀನಪಡಿಸಿಕೊಳ್ಳಲಾಯಿತು. ಅದಕ್ಕೆ ಪರಿಹಾರ ರೂಪದಲ್ಲಿ ಒಂದು ಮನೆಗೆ 3 ಸಾವಿರದಿಂದ 8 ಸಾವಿರದವರೆಗೆ ಹಣ ನೀಡಲಾಯಿತು. ಅದರಲ್ಲಿ ಶೇ. 80 ಹಣ 1992ರಲ್ಲಿ ನೀಡಿ, ಉಳಿದ ಶೇ.20 ಹಣ 1994 ರಲ್ಲಿ ಕೊಡಲಾಯಿತು. ಈ ಮನೆಗಳ ಮೌಲ್ಯ ನಿರ್ಧಾರ (valuation) ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಆದದ್ದು. ಇದನ್ನು ವಿಭಾಗಾಧಿಕಾರಿಗಳ ಮಟ್ಟದಲ್ಲಿ ನಿರ್ಧಾರವಾದರೆ ಇನ್ನೂ ಹೆಚ್ಚಿನ ಹಣ ಸಿಗಬಹುದಿತ್ತು. ಆದರೆ ಹಣ ಬೇಗ ಪಡೆಯುವ ಕಾತುರ ದಿಂದ ಇದನ್ನು ಜಿಲ್ಲಾಧಿಕಾರಿಗಳ ಮಟ್ಟದಲ್ಲಿಯೇ ಮೌಲ್ಯ ನಿರ್ಧಾರ ಮಾಡಲಾಯಿತು. ನಂತರ ಇದನ್ನು ಪುನಃ ಪರಿಶೀಲಿಸಲು ವಿಭಾಗಾಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಿದ್ದರೂ ಇಲ್ಲಿಯವರೆಗೂ ಅದು ಜಾರಿಯಾಗದೇ ಅಲ್ಲೇ ಕೊಳೆಯುತ್ತಿವೆ.

ಸಾಲಿ ಕಲಿಯದ ಗರೀಬನೆಂದು ಕೈಜೋಡಿಸಿ ತಿರುಗಾಡುವ ಶಾಸಕ ರೇವು ನಾಯಕ

ಕಳೆದ ಎರಡು ಅವಧಿಗಳಿಂದ ಈ ಎಲ್ಲಾ ಗ್ರಾಮಗಳನ್ನೊಳಗೊಂಡ ಕಮಲಾಪೂರ ಮತಕ್ಷೇತ್ರದ ಬಿ.ಜೆ.ಪಿ. ಶಾಸಕ ರೇವು ನಾಯಕ ದಿನಬೆಳಗಾದರೆ ನಾನೊಬ್ಬ ಸಾಲಿ ಕಲಿಯದ ಗರೀಬ ಮನುಷ್ಯನೆಂದು ಹೇಳಿ ಕೈಜೋಡಿಸಿಕೊಂಡು ಕಂಡ ಕಂಡವರಿಗೆ ನಮಸ್ಕಾರ ಹಾಕುತ್ತ ಗುತ್ತೇದಾರರ ಹಿಂದೆ ಪರಸಂಟೇಜ್ ಎತ್ತುತ್ತಾ ಅಡ್ಡಾಡುತ್ತಿರುತ್ತಾರೆ.


ಪ್ರತಿಭಟನೆಯ ಮಹಾಪೂರ

ಸೆಪ್ಟಂಬರ್ 8 ಬೆಂಗಳೂರಿನತ್ತ

ಈ ಯೋಜನೆ ಜೊತೆಗೆ ಇದೇ ಕ್ಷೇತ್ರದ ಇನ್ನೊಂದು ನೀರಾವರಿ ಯೋಜನೆ ಗಂಡೋರಿ ನಾಲಾ ಯೋಜನೆಯ ಗುತ್ತೇದಾರರ ಹಾಗೂ ಇಂಜನಿಯರ್‌ರಿಂದ ಕೋಟಿ ಗಟ್ಟಲೆ ಹಣ ವಸೂಲಿ ಮಾಡಿರುವ ಈ ಶಾಸಕ, ತಾನೂ ಗುತ್ತಿಗೆ ಹಿಡಿದು ಪೂರ್ಣ ಕೆಲಸವೇ ಮಾಡದೇ ಬಿಲ್ಲು ಎತ್ತುತ್ತ, ಜನರ ಯಾವ ಸಮಸ್ಯೆಗೂ ಸ್ಪಂದಿಸದೇ ತಿರುಗುತ್ತಿರುವ ಬಗ್ಗೆ ಜನರು ಬಹಿರಂಗವಾಗಿ ಮಾತನಾಡುತ್ತಾರೆ. ಈ ಮುಳುಗಡೆ ಪ್ರದೇಶದ ಕನಿಷ್ಠ ಮಾಹಿತಿಯು ಇಲ್ಲ. ಇದರಿಂದ ಅಭಿವೃದ್ಧಿ ಕೆಲಸ ಶೂನ್ಯವಾಗಿದೆ. ಕಳೆದ ಅವಧಿಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ (ಹೆಚ್.ಕೆ.ಡಿ.ಬಿ) ಬಂದ ಹಣ ಕೆಲವು ಗ್ರಾಮಗಳಿಗೆ ಗುಡಿ ಕಟ್ಟಲು ಕೊಟ್ಟು ಜನರನ್ನು ಭಾವನಾತ್ಮಕ ಹಿಡಿತಕ್ಕೆ ತಂದುಕೊಂಡ. ಆದರೆ ಈತ ಗುಡಿಗೆ ಹಣ ಕೊಟ್ಟಾಗಲೆಲ್ಲಾ ಆ ಗ್ರಾಮದ ರಸ್ತೆ, ಸಮುದಾಯ ಭವನದ ಹೆಸರಿಗೆ ಇಟ್ಟ ಹಣ ಕೆಲಸ ಮಾಡದೇ ಲೂಟಿ ಮಾಡಿದ್ದು ಗೊತ್ತಾಗಿದೆ. ಈಗ ಪ್ರತಿ ಗ್ರಾಮದಲ್ಲಿ ಶಾಸಕನ ಡೋಂಗಿ ನಾಟಕವನ್ನು ಜನ ಅರಿತಿದ್ದಾರೆ, ದೂರ ತಳ್ಳುತ್ತಿದ್ದಾರೆ. ಇದನ್ನರಿತ ಶಾಸಕ ರೇವು ನಾಯಕ ತಾನು ಈ ಚುನಾವಣೆಯಲ್ಲಿ ಆರಿಸಿ ಬರುವುದು ಅಸಾಧ್ಯವೆಂದರಿತು ಕೇವಲ ಹಣ ಮಾಡುವುದರಲ್ಲಿ ತೊಡಗಿದ್ದಾನೆ. ಹಣದಿಂದ ಓಟು ಖರೀದಿಸುವ ಭ್ರಮೆ ಇದೆ.

ಬೆಣ್ಣೆ ತೊರೆ ಮುಳುಗಡೆ ಪ್ರದೇಶದ ನಿರಾಶ್ರಿತರ ಹೋರಾಟ

ಬೆಣ್ಣೆತೊರೆ ಯೋಜನೆಗೆ ಗೇಟ್ ಅಳವಡಿಸಿ ಕಳೆದ ವರ್ಷ ನೀರು ನಿಲ್ಲಿಸಿದಾಗ ಹತ್ತು ಹಳ್ಳಿಗಳು ನೀರಿನಿಂದ ಆವೃತವಾದವು. ಆಗ ಜಿಲ್ಲಾಧಿಕಾರಿಗಳು ಮುಳುಗಡೆ ಪ್ರದೇಶದ ಜನರನ್ನು ಪುನರ್ ವಸತಿ ಕೇಂದ್ರಕ್ಕೆ ತೆರಳಲು ಹೇಳಿದರು. ಮೂರು ನಾಲ್ಕು ಸಾವಿರ ರೂಪಾಯಿಯಲ್ಲಿ ಮನೆ ಕಳೆದುಕೊಂಡ ಜನ ಪುನರ್ ವಸತಿ ಪ್ರದೇಶಕ್ಕೆ ಹೋಗಿ ಕನಿಷ್ಠ ಒಂದು ಗುಡಿಸಲು ಹಾಕಲು ಹಣವಿಲ್ಲ. ಆದರೂ ಸರಕಾರ ಯಾವುದನ್ನೂ ಕೇಳದೇ ಪುನರ್‌ವಸತಿ ಕೇಂದ್ರಕ್ಕೆ ತೆರಳಲು ಹೇಳಿದೆ. ಅಲ್ಲಿ ನೀರು, ಶಾಲೆಯಂಥ ಕನಿಷ್ಠ ಸೌಲಭ್ಯಗಳು ಇಲ್ಲ. ಕೇವಲ ಬಯಲು ಪ್ರದೇಶ ತೋರಿಸಿ ವಸತಿ ಸ್ಥಾಪಿಸಲು ಹೇಳಿದ್ದಾರೆ. ಕೆಲವು ಗ್ರಾಮಗಳಿಗೆ ಈ ವ್ಯವಸ್ಥೆ ಇದ್ದರೂ ಅವು ಈಗ ಸಂಪೂರ್ಣ ಶಿಥಿಲಗೊಂಡಿವೆ, ಇಲ್ಲವೇ ಹಾಳಾಗಿವೆ. ಇನ್ನು ಸಿರಗಾಪೂರದಂತ ಗ್ರಾಮಸ್ಥರಿಗೆ ಹಕ್ಕು ಪತ್ರ ಸಹ ಕೊಟ್ಟಿಲ್ಲ. ಇಂ ಸ್ಥಿತಿಯಲ್ಲಿ ಪುನರ್‌ವಸತಿ ಪ್ರದೇಶಕ್ಕೆ ತೆರಳುವುದ ಹೇಗೆ? ಸರ್ಕಾರವಂತು ತನ್ನ ಕೆಲಸ ಮುಗಿದ ಎಂದು ಕೇವಲ ಆದೇಶ ನೀಡುತ್ತಿದೆ. ಈ ಅನಿವಾರ್ಯವಾಗಿ ಈ ಮುಳುಗಡೆ ಪ್ರದೇಶ ಜನರು ಹೋರಾಟವೊಂದೇ ಉಳಿದಿರು ದಾರಿಯೆಂದು ತೀರ್ಮಾನಿಸಿದ್ದಾರೆ. ಅದಕ್ಕಾ ಬೆಣ್ಣೆತೊರೆ ಮುಳುಗಡೆ ಪ್ರದೇಶದ ನಿರಾಶ್ರಿ ಹೋರಾಟ ಸಮಿತಿ ಹುಟ್ಟಿಕೊಂಡಿದೆ.

ಬೃಹತ್ ಪ್ರತಿಭಟನಾ ರೂಪದಲ್ಲಿ ಪ್ರಾರಂಭವಾದ ಹೋರಾಟ

ಹೊರಾಟ ಸಮಿತಿ ಕಟ್ಟಿಕೊಳ್ಳುವ ಪ್ರಾರಂಭ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ವಿರುಪಾಕ್ಷಪ್ಪ ತಡಕಲ್ ಹಾ ಈಗಿನ ಹೋರಾಟ ಸಮಿತಿ ಕಾರ್ಯ ಶ್ರೀಮಂತ ನಿಪ್ಪಾಣಿ ಹಾಗೂ ಕೆಲವು ಪ್ರಮು ಸೇರಿ ಎಲ್ಲಾ ಮುಳುಗಡೆ ಗ್ರಾಮಕ್ಕೆ ತೆರಳ ನಡೆಸಿ ಎಲ್ಲರನ್ನು ಒಟ್ಟುಗೂಡಿಸಿ ಒಂದು ಹೋ ಸಮಿತಿ ರಚಿಸಿದರು. ಈ ಹೋರಾಟ ಸ ಅಧ್ಯಕ್ಷರಾಗಿ ಶಿವಶರಣಪ್ಪ ಅಂಬ ಉಪಾಧ್ಯಕ್ಷರಾಗಿ ಸಂಗಶೆಟ್ಟಿ ಪಾಟೀಲ, ಅಪ್ಪ ಪಾಟೀಲ, ಷಡಕ್ಷರಿ ಸ್ವಾಮಿ, ಚಂದ್ರಶೇಖರ ಕಾರ್ಯದರ್ಶಿಯಾಗಿ ಶ್ರೀಮಂತ ನಿಪ ಸಹಕಾರ್ಯದರ್ಶಿಯಾಗಿ ಲಕ್ಷ್ಮಣ ನಾಟಿ ಶ್ರೀಕಾಂತ ಬಡಲಿ, ಗುಂಡಪ್ಪ ಕುದಮ ಗುಂಡೇರಾವ ಪಾಟೀಲ, ಖಜಾಂಚಿ ಬಸವರಾಜ ಕುಮ್ಮಣ್ಣ, ವಿರುಪಾಕ್ಷಪ್ಪ ತ ಇವರನ್ನು ಆಯ್ಕೆ ಮಾಡಲಾಗಿದೆ.

ಈ ಸಮಿತಿಯ ನೇತೃತ್ವದಲ್ಲಿ ಮೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾ ನಂತರ ಜುಲೈ 31 ರಂದು ಸಾವಿರಾರು ಬೃಹತ್ ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿಗಳಿಗೆ ಹಾಗೂ ಅವರ ಮೂಲ ನೀರಾವರಿ ಮಂತ್ರಿ ಎಚ್.ಕೆ. ಪಾಟಿ ಬೇಡಿಕೆಗಳ ಮನವಿ ಸಲ್ಲಿಸಲಾಯಿತು.

ಈ ಹತ್ತು ಬೇಡಿಕೆಗಳಲ್ಲಿ ಮೊದಲಿನ ಬೇಡಿಕೆಗಳನ್ನು ಹೊರತುಪಡಿಸಿ ಬೇಡಿಕೆಗಳನ್ನು ಪರಿಶೀಲಿಸಲು ಜಿಲ್ಲಾಧಿ ಒಪ್ಪಿ, ಈ ಪ್ರದೇಶಕ್ಕೆ ಭೇಟಿ ಕೊಡಲು ಒ ಆದರೆ ಹೋರಾಟ ಸಮಿತಿ ಬಯಸಿದ್ದು, ಮ ಎರಡು ಪ್ರಮುಖ ಬೇಡಿಕೆ. ಅಂದರೆ ಪುನ ಮಾಪನ ಮಾಡಿ, ಈಗಿನ ಬೆಲೆಗನು ಮನೆ ಮತ್ತು ಭೂಮಿಗೆ ಹಣ ನೀಡಬೇ ಹಾಗೂ ಕೃಷ್ಣ ಮೇಲ್ದಂಡೆ ಯೋಜನೆಯ ಸಂತ್ರಸ್ತರಿಗೆ ನೀಡಿದಂತೆ ನಮಗೂ ಏಕ್ಸ್ ನೀಡಬೇಕೆಂಬುದು. ಅದಕ್ಕಾಗಿ ನೀರಾವ ಮನೆ ಮುಂದೆ ಧರಣಿ ನಡೆಸಲು ಸೆಪ್ಟೆ ತಂದು ಬೆಂಗಳೂರು ಚಲೋಗೆ ಕರೆಕೊ

■ ವಿರೂಪಾಕ್ಷಪ್ಪ

ನಿರಾಶ್ರಿತರ ಹೋರಾಟ ಸಮಿತಿ ಬೇಡಿಕೆಗಳು

1. ಪುನರ್‌ಮೌಲ್ಯ ಮಾಪನ ಮಾಡಿ ಈಗಿನ ಬೆಲೆಯನ್ನು ಮನೆ ಮತ್ತು ಭೂಮಿಗೆ ನೀಡಬೇಕು.
2. ಕೃಷ್ಣಮೇಲ್ದಂಡೆ ಯೋಜನೆಯ ಅಲ್ಲಿಯ ಸಂತ್ರಸ್ತರಿಗೆ ನೀಡಿದಂತೆ ಬೆಣ್ಣೆತೊರೆ ಸಂತ್ರಸ್ತರಿಗೂ ಎಕ್ಸ್‌ಗ್ರೇಸಿಯ ನೀಡಬೇಕು.
3. ಮುಳುಗಡೆಯಾದ ಅಂಕಲಗಾ, ಸಿರಗಾಪೂರ, ಕಡಬೂರ, ತೊಂಡಕಲ, ಹರಕಂಚಿ, ಯಕಂಚಿ, ನಾಗೂರ, ಕನಡಗಿ ಸಾತಖೇಡ ಹೇರ್, ಕುಟುಂಬಗಳಿಗೆ ಆವಶ್ಯಕತೆಗನುಸರಿಸಿ ಮನೆ, ನಿವೇಶನ ನೀಡುವಂತಾಗಬೇಕು ಮತ್ತು ಸಿರಗಾಪೂರ ಗ್ರಾಮದವರಿಗೆ ಹಕ್ಕು ಪತ್ರ ಕೊಡಬೇಕು.
4. ರಾಜೀವಗಾಂಧಿ ಆಶ್ರಯ, ಅಂಬೇಡ್ಕರ ನವಗ್ರಾಮ ಯೋಜನೆ ಅಡಿಯಲ್ಲಿ ಬಡವರಿಗೆ ಮನೆಗಳು ಕಟ್ಟಿಸಿ ಕೊಡುವಂತಾಗಬೇಕು.
5. ನಾಗೂರ ಹರಕಂಚಿ ಹಾಗೂ ಕೋರ್ಟಿನ ಆದೇಶ ಅನ್ವಯ ಪಾವತಿ ಮಾಡಬೇಕಾದವರಿಗೆ ಬಾಕಿ ಉಳಿದಿರುವ ಹಣ ಪಾವತಿ ಮಾಡುವಂತಾಗಬೇಕು.
6. ನಾಗೂರ ಮತ್ತು ಕಡಬೂರ ಗ್ರಾಮಕ್ಕೆ ಜಮೀನು, ಉಳಿದ ಕಡೆಗೆ ಸಂತ್ರಸ್ಥರ ಕೋರಿಕೆಯಂತೆ ಕಡಬೂರ ಗ್ರಾಮದ ಹತ್ತಿರ ಮತ್ತು ನಾಗೂರ ಗ್ರಾಮದವರಿಗೆ ಹೇರ ಕ್ರಾಸ್ ಹತ್ತಿರ ಪುನರ್‌ವಸತಿ ಕೇಂದ್ರ ಸ್ಥಾಪಿಸುವಂತಾಗಬೇಕು.
7. ಎಲ್ಲಾ ಪುನರ್ ವಸತಿ ಕೇಂದ್ರದಲ್ಲಿ ಸ್ಮಶಾನ ಭೂಮಿ ಕೊಡಬೇಕು ಮತ್ತು ಕುಡಿಯುವ ನೀರು, ಶಾಲೆ, ರಸ್ತೆ, ವಿದ್ಯುತ್ ಮತ್ತಿತರ ಸೌಲಭ್ಯ ಒದಗಿಸಬೇಕು.
8. ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ ಮಾಡಬೇಕು.
9. ಅಂಕಲಗಿ ಗ್ರಾಮದ ಏತ ನೀರಾವರಿ ಕಾಮಗಾರಿ ಪೂರ್ಣಗೊಳಿಸಬೇಕು.
10. ಗುಲಬರ್ಗಾ ನಗರಕ್ಕೆ ನೀರು ಸರಬರಾಜು ಸಲುವಾಗಿ 1 ಮೀಟರ್ ಅಣೆಕಟ್ಟು ಎತ್ತರಿಸಲಾಯಿತು. ಅದರ ಪ್ರಕಾರ ಅಕಲಗಾ, ಸಿರಗಾಪೂರ, ಸಿರಡೋಣ, ಮತ್ತು ಕುರಿಕೋಟಾ ಗ್ರಾಮದ ಮನೆಗಳು ಸ್ವಾಧೀನ ಮಾಡಕೊಂಡು ಪರಿಹಾರ ಧನ ನೀಡಬೇಕು.

ದುಡಿವ ಜನತೆಯ ಮಾರ್ಗ ಆತ್ಮಹತ್ಯೆಯಲ್ಲ, ಪ್ರತಿಭಟನೆಯ ಅಲೆ

ರಾಜ್ಯದ ಜನತೆ ಕಂಗಾಲಾಗಿರುವಾಗ, ಸಮಸ್ಯೆಗಳ ಸೃಷ್ಟಿಕರ್ತರುಜನರ ಹಾದಿ ತಪ್ಪಿಸುತ್ತಿರುವಾಗ - ಇರುವುದೊಂದೇ ಮಾರ್ಗ ಆತ್ಮವಿಶ್ವಾಸದ ಹೋರಾಟ ಹೊರತು ಆತ್ಮಹತ್ಯೆಯಲ್ಲ. ಈ ಸನ್ನಿವೇಶ ಹಿಮ್ಮೆಟ್ಟಿಸಲು,ಆಳುವವರ ನೀತಿಗಳೆದುರು ಸಮರ ಸಾರಿರುವ ಸಿಪಿಐ(ಎಂ), ಅದರ ಭಾಗವಾಗಿ ಯೋಜಿಸಿರುವ ಜನರ ಸಂಘರ್ಷದ ರ್‍ಯಾಲಿಯ ಹಿನ್ನಲೆಯನ್ನು ವಿಶ್ಲೇಷಿಸಿದ್ದಾರೆ ರಾಜ್ಯ ಕಾರ್ಯದರ್ಶಿಯವರು

1980 ಹಾಗೂ 81 - ಇಡೀ ರಾಜ್ಯದಲ್ಲಿ ಪ್ರತಿಭಟನೆಗಳ ಮಹಾಪೂರ. ನರಗುಂದ, ನವಲಗುಂದ, ಸೌಂದತ್ತಿಗಳಲ್ಲಿ ಆರಂಭವಾಗಿ ಇಡೀ ರಾಜ್ಯಕ್ಕೆ ಹಬ್ಬಿದ ಪ್ರತಿಭಟನೆಯು ಕಾಳ್ಗಿಚ್ಚು ಅಲೆಯಾಗಿ ರೈತರ, ಕಾರ್ಮಿಕರ, ದಲಿತರ, ಸಾಹಿತಿಗಳ, ರಂಗ ಕಲಾವಿದರ, ಬುದ್ಧಿಜೀವಿಗಳ ಪ್ರತಿಭಟನೆಯಾಗಿ ಇಡೀ ರಾಜ್ಯವನ್ನೇ ಆವರಿಸಿತು.

'ದಲಿತರು ಬರುವರು ದಾರಿಬಿಡಿ, ದಲಿತರ ಕೈಗೆ ರಾಜ್ಯ ಕೊಡಿ'
ರೈತರು ಬರುವರು ದಾರಿಬಿಡಿ
ರೈತರ ಕೈಗೆ ರಾಜ್ಯ ಕೊಡಿ'

ಎಂಬ ಧ್ವನಿಗಳು ಮೊಳಗಿದವು. ಬೆಂಗಳೂರಿನಲ್ಲಿ ಇತರ ಕಾರ್ಮಿಕ ಕೇಂದ್ರಗಳಲ್ಲಿ ಕಾರ್ಮಿಕ ಮುಷ್ಕರಗಳು. ಈ ಮುಷ್ಕರಗಳ ಮೇಲೆ ಕಳಸವಿಟ್ಟಂತೆ ಸಾರ್ವಜನಿಕ ವಲಯದ ಕಾರ್ಮಿಕರ 71 ದಿನಗಳ ದೀರ್ಘಕಾಲದ ಮುಷ್ಕರ.

ಆದರೆ ಇಂದು ರೈತರ ಆತ್ಮಹತ್ಯೆಗಳ ಅಲೆ ಇಡೀ ರಾಜ್ಯವನ್ನೇ ಆತಂಕದೆಡೆಗೆ ದೂಡಿದೆ. ಗ್ರಾಮೀಣ ಕೃಪಾಂಕ ನೌಕರರ ಆತ್ಮಹತ್ಯೆಗಳು, ಹಸಿವಿನಿಂದ ಕೂಲಿಕಾರರ ಕುಟುಂಬದ ಆತ್ಮಹತ್ಯೆ, ಮುಚ್ಚಿದ ಫ್ಯಾಕ್ಟರಿಗಳ, ವಿಆರ್‌ಎಸ್ ನಿಂದ ಹೊರಬಂದ, ಕಾರ್ಮಿಕರ ಬವಣೆಗಳು ಹೇಳತೀರದು.

ಬವಣೆ - ಮೂಲಕಾರಣ

ಕೃಷಿ ವಸ್ತುಗಳ ಆಮದು ಹಾಗೂ ಸಹಾಯಧನಗಳ ಹಿಂತೆಗೆತ, ಬೆಲೆ ಏರಿಕೆಗಳಿಂದಾಗಿ ಕೃಷಿಯ ಬಿಕ್ಕಟ್ಟು, ಕೈಗಾರಿಕೆಯ ಬಿಕ್ಕಟ್ಟು, ಜೊತೆಗೆ ಬರಗಾಲದ ಬವಣೆ, ವಸ್ತುಗಳನ್ನು ಕೊಳ್ಳಲು ಹಣವಿಲ್ಲದೆ ವ್ಯಾಪಾರದ ಕುಸಿತ.

ನಮ್ಮ ದೇಶವನ್ನಾಳುತ್ತಿರುವ ಬಿಜೆಪಿ ಕೂಟದ ಸರ್ಕಾರವೇ ಅವರ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಧಾವಂತವೇ ಕಾರಣವಾಗಿರುವ ಈ ಬಿಕ್ಕಟ್ಟುಗಳ ಬಗ್ಗೆ, ಅದಕ್ಕೆ ಪರಿಹಾರ ನೀಡುವ ಸರ್ವ ಅಧಿಕಾರಗಳನ್ನು ಕೂಡ ತನ್ನಲ್ಲೇ ಕೇಂದ್ರೀಕರಿಸಿಕೊಂಡಿರುವ ಕೇಂದ್ರ ಸರ್ಕಾರ ಯಾವುದೇ ಸಣ್ಣ ಪರಿಹಾರವನ್ನೂ ನೀಡುವ ಯೋಚನೆ ಮಾಡದಿರುವುದು ಈ ಬೃಹತ್ ಪ್ರಮಾಣದಲ್ಲಿ ಜನರ ಸಂಕಷ್ಟಗಳಿಗೆ ಮೂಲ ಕಾರಣ.

- ರೈತರ ಆತ್ಮಹತ್ಯೆ ಹಾಗೂ ಇತರ ಕೋಟ್ಯಾನುಗಟ್ಟಲೇ ರೈತರ ಸಂಕಷ್ಟಗಳ ತಡೆಗೆ, ಕೈಗಾರಿಕಗಳ ಬಿಕ್ಕಟ್ಟಿನ ಪರಿಹಾರಕ್ಕೆ, ಮುಖ್ಯವಾಗಿ ಆಗ ಬೇಕಾದದ್ದು ಬಡ, ಮಧ್ಯಮ ರೈತರ ಸಾಲಮನ್ನಾ, ರೈತರಿಗೆ, ಕೈಗಾರಿಕೆಗಳಿಗೆ ಸಂಕಷ್ಟ ತರುವ ಆಮದುಗಳ ನಿಷೇಧ(ಪ್ರಮಾಣಾತ್ಮಕ ನಿರ್ಬಂಧಗಳು ಎನ್ನುತ್ತಾರೆ ವಿದೇಶಿ ವ್ಯಾಪಾರದ ಭಾಷೆಯಲ್ಲಿ).
- ಕೃಷಿ ಉತ್ಪಾದನೆಗೆ ಸಹಾಯ ಧನಗಳ ಮುಂದುವರಿಕೆ ಮತ್ತು ಏರಿಕೆ. ಅಮೇರಿಕ, ಯುರೋಪ್, ಜಪಾನು ಮೊದಲಾದ ದೇಶಗಳು ಕೃಷಿಗೆ ನೀಡುತ್ತಿರುವ ಅಪಾರ ಸಹಾಯಧನಗಳ ತೀವ್ರ ಕಡಿತ
- ಸಣ್ಣ ಕಡಿತ ಕೈಗಾರಿಕೆಗಳಿಗೆ ಸಹಾಯಧನ ಮುಂದುವರಿಕೆ, ಸಾರ್ವಜನಿಕ ವಲಯದ ರಕ್ಷಣೆ, ಬೆಳವಣಿಗೆಗೆ ಯೋಜನೆ
- ವಿದ್ಯುತ್ ತಯಾರಿಕೆ, ನೀರಾವರಿ ಅಭಿವೃಧಿ, ಗ್ರಾಮೀಣ ಅಭಿವೃದ್ಧಿ, ಕೃಷಿ ಕೈಗಾರಿಕಾ ಸಂಶೋಧನೆ, ಮೂಲಸೌಲಭ್ಯಗಳ ನಿರ್ಮಾಣದಲ್ಲಿ ಹಣ ಹೂಡಿಕೆಯಲ್ಲಿ ಮಾಡುತ್ತಿರುವ ಕಡಿತ ನಿಲುಗಡೆ, ಹೆಚ್ಚು ಹಣ ಹೂಡಿಕೆ.
- ಆಹಾರ ಮೊದಲಾದ ಅಗತ್ಯ ವಸ್ತುಗಳ ಬೆಲೆ ಏರಿಕೆ ತಡೆಗೆ, ಜೀವನದ ಕನಿಷ್ಟ ಮಟ್ಟದ ಖಾತರಿಗೆ ಸಾರ್ವತ್ರಿಕ ವಿತರಣಾ ವ್ಯವಸ್ಥೆ - ಬಡವರಿಗೆ ಅಂತ್ಯೋದಯ ಕಾರ್ಡು, ಉಳಿದೆಲ್ಲವರಿಗೂ ಅವಶ್ಯಕ ಪಡಿತರ
- ಬರಗಾಲ ಪರಿಹಾರಕ್ಕೆ ಸಮರೋಪಾದಿ ಕೆಲಸಗಳು, ವ್ಯಾಪಕ ಕೂಲಿಗಾಗಿ ಕಾಳು ಕಾರ್ಯಕ್ರಮ

ಸೆ.9 ಬೆಂಗಳೂರಿನಲ್ಲಿ ಪ್ರತಿಭಟನಾ ರ್‍ಯಾಲಿ

ಕೇಂದ್ರದ ಪಾತ್ರ


ಇದೆಲ್ಲಕ್ಕೂ ಬ್ಯಾಂಕು, ರಿಸರ್ವ್ ಬ್ಯಾಂಕುಗಳ ಮೇಲಿನ ಹತೋಟಿ, ಬಜೆಟ್ ಸಂಪನ್ಮೂಲ ಹಾಗೂ ಅಧಿಕಾರ ಇರುವುದು ಕೇಂದ್ರ ಸರ್ಕಾರದ ಕೈಯಲ್ಲಿ. ಆದ್ದರಿಂದ ಬಿಜೆಪಿ ಕೂಟದ ಕೇಂದ್ರ ಸರ್ಕಾರವೇ ಇದಕ್ಕೆ ಹೊಣೆ. ಆದರೆ ರಾಜ್ಯ ಸರ್ಕಾರಗಳು ತಮ್ಮ ಅಧಿಕಾರದ ಮಿತಿಯಲ್ಲಿ ಈ ನೀತಿಗಳ ಮಾರ್ಪಾಡು ಮಾಡಲಿಕ್ಕಾಗದಿದ್ದರೂ ಎರಡು ರೀತಿಯಲ್ಲಿ ಪ್ರಮುಖ ಪಾತ್ರ ವಹಿಸಬಹುದು.

ಒಂದು : ತಮ್ಮ ಅಧಿಕಾರದ ಸಂಪನ್ಮೂಲ ಪರಿಧಿಯಲ್ಲಿ ಜನತೆಯ ಜೀವನಮಟ್ಟದ ರಕ್ಷಣೆಗೆ ಬೇಕಾದ ನೀತಿಗಳನ್ನು ರೂಪಿಸುವುದು. ಭೂಸುಧಾರಣೆಯ ಮೂಲಕ ಕೃಷಿ ಹಾಗೂ ಕೈಗಾರಿಕಾ ಬಿಕ್ಕಟ್ಟಿನ ಪರಿಹಾರಕ್ಕೆ, ಕನಿಷ್ಟ ಕೂಲಿ ಜಾರಿ, ಕೆಲಸದ ಪರಿಸ್ಥಿತಿಗಳ ನಿಯಂತ್ರಣ, ಕಾರ್ಮಿಕ ಕಾನೂನುಗಳ ಜಾರಿ, ಒಂದು ಪ್ರಮುಖ ದಾರಿ. ರೈತರ ಫಸಲಿನ ಬೆಲೆಗೆ ರಕ್ಷಣೆ, ಸಾಲ ಪೂರೈಕೆ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ ಇವುಗಳ ವ್ಯವಸ್ಥಿತ, ದಕ್ಷ ನಿರ್ವಹಣೆ, ರಾಜ್ಯದ ಸಹಾಯ ಧನಗಳನ್ನು ಹಿಂತೆಗೆಯದಿರುವುದು ಇತ್ಯಾದಿ.

ಎರಡು : ರಾಜ್ಯದ ಜನತೆಯ, ಕೃಷಿ ಕೈಗಾರಿಕೆಗಳ ರಕ್ಷಣೆಗಾಗಿ ಮೇಲೆ ವಿವರಿಸಿದಂತೆ ಕೇಂದ್ರ ಸರ್ಕಾರದ ನೀತಿಗಳ ಮಾರ್ಪಾಡಿಗಾಗಿ ನಿರಂತರವಾಗಿ ಧ್ವನಿಯೆತ್ತುವುದು.

ಕೃಷ್ಣರ ಸ್ಪರ್ಧೆ

ಆದರೆ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್



ಸರ್ಕಾರವು ಬಿಜೆಪಿ ಕೂಟದ ಸರ್ಕಾರವನ್ನು ಜಾಗತೀಕರಣ, ಖಾಸಗೀಕರಣ ಸ್ಪರ್ಧೆಯಲ್ಲಿ, ವಿಶ್ವಬ್ಯಾಂಕ್ ಶಹಬ್ಬಾಸ್‌ಗಿರಿಯನ್ನು ಪಡೆಯುವುದರಲ್ಲಿ ಸ್ಪರ್ಧೆಯಲ್ಲಿದೆಯೇನೋ ಎಂಬಂತೆ ತರಾತುರಿಯಲ್ಲಿ ಅದೇ ಜನವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿದೆ. ದುಡಿಯುವವರ ಅಳಲು ಕೇಳಲು ಸಮಯವಿಲ್ಲದ ಮುಖ್ಯಮಂತ್ರಿಗಳು, ಮಂತ್ರಿಗಳು ಇನ್ಫೋಸಿಸ್, ವಿಪ್ರೋಗಳಂತಹ ಕಂಪನಿಗಳ ಸಮಸ್ಯೆಗಳಿಗೆ ದಿನಗಟ್ಟಲೆ, ವಾರಗಟ್ಟಲೆ ಸಮಯ ಕಳೆಯುತ್ತಾರೆ. ಅವರೊಂದು ಗುಟುರು ಹಾಕಿದರೆ ಇಡೀ ರಾಜ್ಯ ಸರ್ಕಾರದ ಯಂತ್ರವೇ ಅವರ ಸೇವೆಗೆ ಸಜ್ಜಾಗುತ್ತಾರೆ. ಹೀಗಾಗಿ ಅವರ ಅಧಿಕಾರವನ್ನೆಲ್ಲಾ ಬಳಸಿ ವಿಶ್ವಬ್ಯಾಂಕ್ ಹಾಗೂ ಬಂಡವಾಳಶಾಹಿಗಳ ಸೇವೆ ನಡೆಸುತ್ತಿದ್ದಾರೆ ಎಂದಮೇಲೆ ಕೇಂದ್ರ ಸರ್ಕಾರದ ನೀತಿಗಳ ಮಾರ್ಪಾಡಿಗೆ ಒತ್ತಾಯಿಸುವುದೆಲ್ಲಿಂದ ಬಂತು?.

ಕೋಮು ಹಿಂಸೆಯ ಸರಣಿ

ಹೀಗೆ ರಾಜ್ಯದ ಜನತೆ ಕಂಗಾಲಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಜನರ ಅತೃಪ್ತಿಯ ಬೆಳವಣಿಗೆಯೊಡನೆಯೇ ಜನರ ಚಳುವಳಿಗಳು ಬೆಳೆಯುವುದನ್ನು ಹತ್ತಿಕ್ಕಲು ಬಿಜೆಪಿಯ ಮಾತೃಸಂಸ್ಥೆಯಾದ ಆರೆಸ್ಸೆಸ್, ಅದರ ಅಂಗಗಳಾದ ವಿಶ್ವ ಹಿಂದೂ ಪರಿಷತ್, ಭಜರಂಗದಳ, ಹಿಂದೂ ಜಾಗರಣಾ ವೇದಿಕೆಗಳು ಹಿಂದೂ-ಮುಸ್ಲಿಂ ದ್ವೇಷವನ್ನು ಬೆಳೆಸಲು ಹಗಲೂ ಇರುಳು (ಹಗಲಿಗಿಂತ ಇರುಳಲ್ಲಿಯೇ ಹೆಚ್ಚು ಎನ್ನುವುದು ರಾಜ್ಯದ ಅನೇಕ ಭಾಗಗಳ ಅನುಭವ) ದುಡಿಯುತ್ತಿದ್ದಾರೆ. ರಾಜ್ಯದ ಪಲವಾರೆಡೆಗಳಲ್ಲಿ ಸಣ್ಣ, ಮಧ್ಯಮ ಪ್ರಮಾಣದ ಕೋಮುದಂಗೆಗಳನ್ನು ನಡೆಸಿದ್ದಾರೆ. ಭಾರಿ ಅಬ್ಬರಗಳೊಂದಿಗೆ ಹಿಂದೂ ಸಮಾಜೋತ್ಸವಗಳನ್ನು ನಡೆಸಿದ್ದಾರೆ. ಬಾಬಾಬುಡನ್ ಗಿರಿ ಸಮಸ್ಯೆಯನ್ನೆತ್ತಿ ರಾಜ್ಯಾದ್ಯಂತ, ಅಯೋಧ್ಯೆಯ ಪ್ರಶ್ನೆಯನ್ನೆತ್ತಿ ಮತ್ತೆ ದೇಶಾದ್ಯಂತ ಕೋಮುಹಿಂಸೆಗಳ ಸರಣಿಯ ಪ್ರಯತ್ನ ನಡೆಸಿದ್ದಾರೆ.

ಚಳುವಳಿಗೆ ತಡೆಗಳು

ಆ ಮೂಲಕ ತಮ್ಮನ್ನು ಛೀ, ಥೂ.. ಎಂದುಗುಳಿ ದೂರ ಸರಿದ ಜನರ ಮತಗಳನ್ನು ಮತ್ತೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಜಾಗತೀಕರಣ, ಖಾಸಗೀಕರಣದ ಬಗೆಗಿನ ಅಬ್ಬರದ ಪ್ರಚಾರ, ಬಂಡವಾಳ ಶಾಹಿಗಳ ಆಕ್ರಮಕಾರಿ ಸೈದ್ಧಾಂತಿಕ ಸಮರ. ಇದು ಜನತೆಯ ಪ್ರಜ್ಞಾವಂತಿಕೆಯ ವಿಸ್ತಾರಕ್ಕೆ ಹಾಗೂ ಚಳುವಳಿ ಎದ್ದು ಬರುವುದಕ್ಕೆ ಒಂದು ದೊಡ್ಡ ತಡೆಯಾಗಿದೆ.

ಈ ಮೂಲಕ ಬಿಜೆಪಿಯ ಕೇಂದ್ರ ಸರ್ಕಾರದ ವಿರುದ್ಧ, ಕಾಂಗ್ರೆ ರಾಜ್ಯ ಸರ್ಕಾರದ ವಿರುದ್ಧ ಸಮರಧೀರ ಚಳುವಳಿ 1980-81 ರ ಪ್ರಮಾಣದಲ್ಲಿ ಕಾಡುಕಿಚ್ಚಿನಂತೆ ಹಬ್ಬುವುದಕ್ಕೆ ತಡೆಯಾಗಿದೆ. ಆತ್ಮಹತ್ಯೆಗಳ ಹಾಗೂ ಕೆಲಸ ತ್ಯಾಗಗಳ (ವಿಆರ್‌ಎಸ್) ಪಲಾಯನವಾದಕ್ಕೆ, ಕಾರ್ಮಿಕ ಚಳುವಳಿ ತಮ್ಮಹಕ್ಕು, ಸೌಲಭ್ಯಗಳನ್ನು ವಿಸ್ತರಿಸುವ 'ಆಕ್ರಮಣಾತ್ಮಕ ಹೋರಾಟ'ಕ್ಕೆ ಬದಲಾಗಿ ತಮ್ಮ ಹಕ್ಕುಗಳನ್ನು ಅಷ್ಟಿಷ್ಟಾದರೂ ಉಳಿಸಿಕೊಳ್ಳುವ, ತಮ್ಮ ಉದ್ಯೋಗಗಳನ್ನು ಉಳಿಸಿಕೊಳ್ಳುವ 'ರಕ್ಷಣಾತ್ಮಕ ಹೋರಾಟ' ಮಾಡುತ್ತಾ ಹಿಂದೆ ಹಿಂದೆ ಸರಿಯುತ್ತಿದ್ದಾರೆ. ರೈತರ ಚಳುವಳಿಗಳು ಒಮ್ಮೆಎದ್ದು ಮತ್ತೆ ಮರೆಯಾಗುತ್ತಾ ಮತ್ತೊಮ್ಮೆ ಏಳಲು ಸಮಯ ಕಾಯುವಂತಿದೆ. ಚಳುವಳಿ ಎದ್ದಾಗ ಆತ್ಮಹತ್ಯೆಗಳು ಕಡಿಮೆಯಾಗುತ್ತಿವೆ. ಮರೆಯಾದಾಗ ಆತ್ಮಹತ್ಯೆಯ ವಿಜೃಂಭಣೆಯಾಗುತ್ತಿದೆ.

ಮೈ ಕೊಡವಿ ಮುನ್ನುಗ್ಗಿ

ಇಂತಹ ಸಮಯದಲ್ಲಿ ಕರ್ನಾಟಕದ ದುಡಿಯುವ ಜನತೆಯ ಕಾರ್ಮಿಕರು, ರೈತರು, ಕೂಲಿಕಾರರು ವಿದ್ಯಾರ್ಥಿ ಯುವಜನತೆ ಮಹಿಳೆಯರು ಮತ್ತೊಮ್ಮೆ ಮೈ ಕೊಡವಿ ಏಳಬೇಕಾಗಿದೆ. ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಶೋಷಕ ಶಕ್ತಿಗಳೊಡನೆ ಸಮರಕ್ಕೆ ಮುನ್ನಗ್ಗಬೇಕಾಗಿದೆ.

ಇದೊಂದೇ ದಾರಿ

ಮತ್ತೆ ಮತ್ತೆ ಕಾರ್ಮಿಕ ರೈತ ಸಮರದ ಕಹಳೆಗಳ ಮೊಳಗಬೇಕಾಗಿದೆ.

- ಅದೊಂದೇ ದಾರಿ ಜನರ ದೇಶದ ಸಮಸ್ಯೆಗಳ ಸಂಕಟಗಳ ಪರಿಹಾರಕ್ಕೆ, ಜನತೆಯಲ್ಲಿ ಸಮರೋತ್ಸಾಹ ಮೂಡುವುದೊಂದೆ ದಾರಿ. ಆತ್ಮಹತ್ಯೆಗಳ, ಖಿನ್ನತೆಯ ಹಿಂಜರಿಕೆಯ ವಾತಾವರಣವನ್ನು ಕಿತ್ತೊಗೆಯುವುದಕ್ಕೆ
- ಅದೊಂದೇ ದಾರಿ ಕೋಮು ದ್ವೇಷಗಳ ಹಿಂದೂ-ಮುಸ್ಲಿಂ ಮೂಲಭೂತವಾದಗಳನ್ನಡಗಿಸುವುದಕ್ಕೆ
- ಅದೊಂದೇ ದಾರಿ ಇಡೀ ವಿಶ್ವದ ಜನತೆಯ ಜೊತೆ, ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧದ ಸಮರಕ್ಕೆ ಸೇರುವುದಕ್ಕೆ

"ಸೇರಿಕೊಳ್ಳಿ, ಕೂಡಿಕೊಳ್ಳಿ ಉತ್ಸಾಹದ ಈ ಧಾಳಿಗೆ ಕ್ರತ್ರಕ ತಿಮಿರದಾಳದಿಂದ ವಿಷ್ಣಾದ ಬೆಳಕಿಗೆ ಬನ್ನಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ವಿರುದ್ಧದ ಧಾಳಿಗೆ ಬನ್ನಿ ಕೋಮುವಾದ, ಮೂಲಭೂತವಾದಗಳ ಮೂಲೆ ಗುಂಪು ಮಾಡುವುದಕ್ಕೆ"

ಮುಂಬೈ ಬಾಂಬ್ ಸ್ಫೋಟ .....

ಪುಟ 5 ರಿಂದ

ಕೋಮುಗಲಭೆಗಳಲ್ಲಿ ಬಲಿಪಶುಗಳಾದವರು ಎಂದು ಮಾಧ್ಯಮದ ವರದಿಗಳು ಹೇಳುತ್ತಿವೆ. 1993 ರ ಸರಣಿ ಬಾಂಬ್ ಸ್ಫೋಟವೂ ಕೂಡ ಕೇವಲ ಬಾಬ್ರಿ ಮಸೀದಿ ನಾಶಕ್ಕೆ ಪ್ರತೀಕಾರ ಮಾತ್ರವಲ್ಲ, ಮುಂಬೈ ಎಂದೂ ಕಂಡರಿಯದ ಕೋಮುವಾದಿ ಹತ್ಯಾಕಾಂಡಕ್ಕೆ ಪ್ರತೀಕಾರಗಳು.

ಕೋಮುವಾದದ ದ್ವೇಷದ ರಾಜಕೀಯದ ಬೆಂಕಿಯಾಟಕ್ಕೆ ಸಾಮಾನ್ಯ ಮುಗ್ಧ ಜನತೆ ಬಲಿಯಾಗುತ್ತಿದ್ದಾರೆ ಎಂಬುದು ಸ್ಪಷ್ಟ. ಆರ್.ಎಸ್.ಎಸ್ ಪ್ರಕ್ಷೇಪಿಸುತ್ತಿರುವ ಬಹುಸಂಖ್ಯಾತ ಹಿಂದೂ ಕೋಮುವಾದ ಮತ್ತು ಅನೇಕ ರಾಷ್ಟ್ರವಿರೋಧಿ ಸಂಘಟನೆಗಳು ಹರಡುತ್ತಿರುವ ಇಸ್ಲಾಮಿಕ್ ಮೂಲಭೂತವಾದಗಳು ಪರಸ್ಪರ ಪೂರಕವಾಗಿವೆ. ಭಯೋತ್ಪಾದನೆ ಮತ್ತು ಪ್ರತೀಕಾರಿ ಭಯೋತ್ಪಾದನೆಗಳು ದ್ವೇಷವನ್ನು ಬಿತ್ತುತ್ತಿವೆ ಮತ್ತು ಭಯೋತ್ಪಾದನೆ ಮತ್ತು ಪ್ರತಿ ಭಯೋತ್ಪಾದನೆಯ ದುರಂತಮಯ ಸುರುಳಿಗೆ ಕಾರಣವಾಗುತ್ತಿವೆ.

1993 ರ ಕೋಮುದಂಗೆಗಳು ತದನಂತರದ ಸರಣಿ ಬಾಂಬ್‌ಸ್ಫೋಟದ ಕಾಲದಿಂದಲೂ ದ್ವೇಷ ಮತ್ತು ಕೋಮು ಹಿಂಸಾಚಾರವನ್ನು ಹರಡುವಲ್ಲಿ ತೊಡಗಿರುವ ಯಾವ ಅಪರಾಧಿಯ ಮೇಲೂ ಕ್ರಮ ಕೈಗೊಂಡಿಲ್ಲ. ದೇಶದ ಸಂಸತ್ತು ಮತ್ತು ಕೆಂಪುಕೋಟೆಯ ಮೇಲೆ ನಡೆದ ಭಯೋತ್ಪಾದಕರ ದಾಳಿಗಳು ಇವುಗಳಲ್ಲಿ ಅತ್ಯಂತ ಹೇಯ ಕೃತ್ಯಗಳು ನಮ್ಮ ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಹಲವಾರು ಸಂಘಟನೆಗಳು ಗುರುತಿಸಿ ಹೆಸರಿಸಲಾಗಿದೆ. ಆದರೂ ಇಂತಹ ಹೇಯ ಕೃತ್ಯಗಳು ಮುಂದುವರಿಯುತ್ತಿವೆ. ಈ ಸಂದರ್ಭದಲ್ಲಿ ಕೇಂದ್ರಸರ್ಕಾರ ಮತ್ತು ಮಹಾರಾಷ್ಟ್ರದ ರಾಜ್ಯ ಸರ್ಕಾರಗಳು ಅಪರಾಧಿಗಳನ್ನು ಪತ್ತೆಹಚ್ಚಲು ಮತ್ತು ನಿರ್ಮೂಲನಗೊಳಿಸಲು ಗಂಭೀರ ಹೆಜ್ಜೆ ಇಡಬೇಕಿದೆ. ತಮ್ಮ ರಾಜಕೀಯ ಲಾಭಕ್ಕಾಗಿ ಕೋಮುವಾದಿ ಶಕ್ತಿಗಳು ಭಯೋತ್ಪಾದನೆ ಮತ್ತು ಭಯೋತ್ಪಾದಕ ದಾಳಿಗಳನ್ನು ಬಳಸಿಕೊಳ್ಳುವುದನ್ನು ಭಾರತ ಸಹಿಸಿಕೊಳ್ಳುವುದಿಲ್ಲ. ಭಾರತದ ಭದ್ರತೆ ಮತ್ತು ಸ್ಥಿರತೆ ಉಳಿಯಬೇಕಾದರೆ ದೇಶದ ರಾಜಕೀಯವನ್ನು ಸೋಲಿಸಬೇಕಾಗಿದೆ.

ಈ ದಾಳಿಗಳನ್ನು ಖಂಡಿಸುವಾಗಲೇ ಕೋಮು ವಿಷವನ್ನು ಹರಡಿ ತಮ್ಮ ರಾಜಕೀಯ ಮತ್ತು ಚುನಾವಣಾ ಲಾಭ ಮಾಡಿಕೊಳ್ಳಲು ಹೊರಡುತ್ತಿರುವ ಶಕ್ತಿಗಳ ವಿರುದ್ಧ ಎಲ್ಲಾ ದೇಶಪ್ರೇಮಿಗಳು ಒಟ್ಟಾಗಿ ಈ ಸನ್ನಿವೇಶಕ್ಕೆ ಭಾರತವನ್ನು ಉಳಿಸಬೇಕಾಗಿದೆ.

ದೇಶದ ಸಂವಿಧಾನ ಮತ್ತು ಧರ್ಮ ನಿರಪೇಕ್ಷತೆಯನ್ನು ಜನಸಾಮಾನ್ಯರ ಹಕ್ಕುಗಳನ್ನು ಎತ್ತಿ ಹಿಡಿದ ಸರ್ವೋಚ್ಚ ನ್ಯಾಯಾಲಯವೇ ಈಗ ನೌಕರರ ಹಕ್ಕುಗಳ ವಿಷಯದಲ್ಲಿ ಕಟುವಾಗಿ ವರ್ತಿಸಿದೆ. ಅಲ್ಲದೇ ಶಿಕ್ಷಣವೂ ಸೇರಿದಂತೆ ಮಹತ್ವದ ಹಲವು ವಿಷಯದಲ್ಲಿ ತಿರುಗುಮುರುಗು ತೀರ್ಪು ನೀಡಿದೆ. ಈ ಬದಲಾವಣೆಯ ಹಿಂದಿರುವ ಮೂಲ ತಿರುಳು ಏನೆಂಬುದನ್ನು ಲೇಖಕರು ವಿವರಿಸಿದ್ದಾರೆ

ಜಾಗತೀಕರಣದ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯ

ಪ್ರಕಾಶ್ ಕಾರಟ್

ತಮಿಳುನಾಡಿನಲ್ಲಿ ಅಮಾನತುಗೊಳಿಸಿದ 1,70 ಸಾವಿರ ನೌಕರರ ವಿಚಾರವಾಗಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪು ದೇಶದ ದುಡಿಯುವ ಜನತೆಯ ಪಾಲಿಗೆ ಆಘಾತಕಾರಿಯಾದುದು. ತಿದ್ದುಪಡಿ ತಂದ ಭಯಾನಕ ಸುಗ್ರೀವಾಜ್ಞೆಯ ಮೂಲಕ TESMA ಕ್ಕೆ (Tamilnadu Essential Serivice maintenancl Act) ತಿದ್ದುಪಡಿ ತಂದು ಈ ರೀತಿಯ ಅಮಾನತ್ತು ಮಾಡಿದ ತಮಿಳ್ನಾಡು ಸರ್ಕಾರದ ವಿರುದ್ಧ ಸಲ್ಲಿಸಿದ ಧಾವೆಯನ್ನು ಪರಿಶೀಲಿಸಿದ ದ್ವಿಮೂರ್ತಿ ನ್ಯಾಯಾಧೀಶ ಸಮಿತಿಯು ಆ ಸುಗ್ರೀವಾಜ್ಞೆಯನ್ನು ರದ್ದುಪಡಿಸುವ ಬದಲಿಗೆ ಮುಷ್ಕರ ನಿರತ ಸರ್ಕಾರಿ ನೌಕರರ ಬಗ್ಗೆ ಸರ್ಕಾರದ ತೀವ್ರ ವಿರೋಧಿ ನಿಲುವನ್ನೆ ಸಮರ್ಥಿಸಿತು. "ಮುಷ್ಕರ ನಿರತ ಸರ್ಕಾರಿ ನೌಕರರ ವಿಚಾರದಲ್ಲಿ ಬೇರೆ ದಾರಿಯಿಲ್ಲದ ಸರ್ಕಾರ ಸರಿಯಾದ ಕ್ರಮ ಜರುಗಿಸಿದೆ" ಎಂದು ಅದು ತಿಳಿಸಿದೆ. ತಮಿಳ್ನಾಡು ಸರ್ಕಾರವು ಮುಷ್ಕರ ನಿರತ ನೌಕರರೋ ವಿಚಾರವಾಗಿ "ಸೌಜನ್ಯ ಮತ್ತು ಔದಾರ್ಯ" ತೋರಿ ಕಾನೂನು ಬಾಹಿರ ಮುಷ್ಕರದಲ್ಲಿ ಭಾಗವಹಿಸಿದ್ದಕ್ಕಾಗಿ ಅನಿರ್ಬಂದಿತ ಕ್ಷಮಾ ಯಾಚನೆ ಮಾಡಿದ ಮತ್ತು ಭವಿಷ್ಯದಲ್ಲಿ ಎಲ್ಲ ನಿಯಮಗಳನ್ನು ಪಾಲಿಸುವುದಾಗಿ ಹೇಳಿಕೆ ಬರೆದುಕೊಟ್ಟಲ್ಲಿ ಎಲ್ಲ ಅಮಾನತುಗೊಂಡ ನೌಕರರನ್ನು ಕೆಲಸಕ್ಕೆ ಹಿಂತೆಗೆದುಕೊಳ್ಳುವಂತೆ ಆದೇಶ ನೀಡಿತು.

ನಂತರ ಆಗಸ್ಟ್ 6 ರಂದು ನೌಕರರ ಎಲ್ಲಾ ಅರ್ಜಿಗಳನ್ನೂ ತಳ್ಳಿಹಾಕಿದ ನ್ಯಾಯಾಲಯವು ಸರ್ಕಾರಿ ನೌಕರರಿಗೆ "ಯಾವುದೇ ಸಂದರ್ಭದಲ್ಲಿ ಮುಷ್ಕರ ಹೂಡುವ ಕಾನೂನಿನ ಪ್ರಕಾರ ಇಲ್ಲವೇ ಮೂಲಭೂತವಾದ ಹಕ್ಕಿಲ್ಲ. ಸಮೂಹ ಚೌಕಾಶಿ ಹಕ್ಕಿರುವ ಯಾವುದೇ ಕಾರ್ಮಿಕ ಸಂಘಟನೆಗೂ ಈ ಮುಷ್ಕರ ಹೂಡುವ ಹಕ್ಕಿಲ್ಲ" ಎಂದು ಘೋಷಿಸಿತು. ಇಷ್ಟೇ ಸಾಲ ದೆಂಬಂತೆ "ಯಾವುದೇ ರಾಜಕೀಯ ಪಕ್ಷ ಅಲ್ಲವೇ ಸಂಘಟನೆ ದೇಶದ ಆರ್ಥಿಕತೆ ಮತ್ತು ಕೈಗಾರಿಕಾ ಚಟುವಟಿಕೆಗಳನ್ನು ಸ್ಥಗಿತಗೊಳಿಸುವ ಹಕ್ಕನ್ನು ಹೊಂದಿಲ್ಲ" ಎಂದಿತು.

ನ್ಯಾಯಾಲಯದ ಈ ಹೇಳಿಕೆಯು ನೌಕರರು ಸಂಘಟನೆ ಕಟ್ಟುವ ಸಮೂಹ ಚೌಕಾಶಿ ಮತ್ತು ಮುಷ್ಕರ ಹೂಡುವ ಕಾನೂನು ಬದ್ಧ ಮೂಲಭೂತ ಹಕ್ಕಿಗೆ ವಿರುದ್ಧವಾಗಿರುವುದು ದುರದೃಷ್ಟಕರ. ನೌಕರರ ನಾಗರೀಕ ಮತ್ತು ರಾಜಕೀಯ ಹಕ್ಕುಗಳನ್ನು ಗುರುತಿಸುವ ಐ.ಎಲ್.ಓ. (ILO) ಸಮಾವೇಶದಲ್ಲಿ ಭಾರತ ಸರ್ಕಾರವೂ ಸಹಿ ಮಾಡಿದೆ. ILO ಸಮಾವೇಶವು ನಿಗದಿ ಪಡಿಸಿದ ನೌಕರರ ಈ ಹಕ್ಕುಗಳನ್ನು ನ್ಯಾಯಾಲಯದ ಈ ತೀರ್ಪು ನಿರ್ಲಕ್ಷಿಸಿದೆ. ತಮಿಳುನಾಡು ನೌಕರರ ಮುಷ್ಕರವನ್ನು ಅವಮಾನವೀಯವಾಗಿ ದಮನಗೊಳಿಸಲಾಗಿದೆ. ಅಮಾನತುಗೊಂಡ ನೌಕರರು ವೈಯಕ್ತಿಕವಾಗಿ ಕ್ಷಮಾಯಾಚನೆ ಮಾಡಿದಲ್ಲಿ ಅವರನ್ನು ಹಿಂತೆಗೆದುಕೊಳ್ಳುವ ತೀರ್ಪು ನೀಡಿದ ಅದು ಮಾನವೀಯ ದೃಷ್ಟಿಯಿಂದ ಇಂತಹ ತೀರ್ಪು ನೀಡಲಾಗಿದೆ ಎನ್ನುತ್ತಲೇ ನೌಕರರ ಸಂಘಟನೆ ಕಟ್ಟುವ ಮತ್ತು ಮುಷ್ಕರ ಹೂಡುವ ಹಕ್ಕನ್ನು ನಕರಾತ್ಮಕವಾಗಿಸಿದೆ. ಈ ದೇಶದ ನೌಕರರ ಮತ್ತು ಪ್ರಜೆಗಳ ಮೇಲೆ ನ್ಯಾಯಾಂಗದ ಇಂತಹ ಪ್ರಹಾರವನ್ನು ದುಡಿಯುವ ವರ್ಗ ಎಂದಿಗೂ ಒಪ್ಪಿಕೊಳ್ಳದು.

> **ನೌಕರರು ಮತ್ತು ಮಾಲೀಕರ ನಡುವಿನ ವಿವಾದ ಮತ್ತು ನೌಕರರ ನ್ಯಾಯಯುತ ಮುಷ್ಕರದ ಬಗ್ಗೆ ದೇಶದ ನ್ಯಾಯಾಂಗದ ಮನೋಭಾವ ಕಳೆದ ದಶಕದಲ್ಲಿ ಬದಲಾಗಿದೆ. ಅದು ಜಾಗತೀಕರಣ ನೀತಿಯನ್ನು ಮಾರುಕಟ್ಟೆ ಸಂಹಿತೆಯನ್ನು ಮತ್ತು ಗುತ್ತಿಗೆ ಪದ್ಧತಿಯನ್ನು ಪ್ರತಿಬಿಂಬಿಸುತ್ತದೆ. ಆಳುವ ವರ್ಗವು ದೇಶದ ಆಡಳಿತ ವ್ಯವಸ್ಥೆಯ ಅಂಗವಾದ ನ್ಯಾಯಾಂಗದ ಮೇಲೂ ತನ್ನ ಪ್ರಭಾವ ಬೀರಿದೆ.**

ಪ್ರವೃತ್ತಿಯಲ್ಲಿ ಬದಲಾವಣೆ :

ದೇಶದ ಸರ್ಕಾರಿ ನೌಕರರ ಮೇಲೆ ನೇರ ಪರಿಣಾಮ ಬೀರುವ ಈ ತೀರ್ಪು ದೇಶದ ದುಡಿಯುವ ವರ್ಗದ ಮೂಲಭೂತ ಹಕ್ಕಿಗೇ ಧಕ್ಕೆಯಾಗಿದೆ: ಇದು ನೌಕರರ ವಿಚಾರವಾಗಿ ಹೆಚ್ಚು ಹೆಚ್ಚು ನಿರ್ದಯವಾಗಿರುವುದನ್ನು ಮತ್ತು ಉತ್ಪಾದನಾ ಪರಿಕರ ಹೊಂದಿರುವ ಮಾಲೀಕರ ಪರವಾಗಿರುವುದನ್ನು ಸೂಚಿಸುತ್ತದೆ. ನೌಕರರು ಮತ್ತು ಮಾಲೀಕರ ನಡುವಿನ ವಿವಾದ ಮತ್ತು ನೌಕರರ ನ್ಯಾಯಯುತ ಮುಷ್ಕರದ ಬಗ್ಗೆ ದೇಶದ ನ್ಯಾಯಾಂಗದ ಮನೋಭಾವ ಕಳೆದ ದಶಕದಲ್ಲಿ ಬದಲಾಗಿದೆ. ಅದು ಜಾಗತೀಕರಣ ನೀತಿಯನ್ನು ಮಾರುಕಟ್ಟೆ ಸಂಹಿತೆಯನ್ನು ಮತ್ತು ಗುತ್ತಿಗೆ ಪದ್ಧತಿಯನ್ನು ಪ್ರತಿಬಿಂಬಿಸುತ್ತದೆ. ಆಳುವ ವರ್ಗವು ದೇಶದ ಆಡಳಿತ ವ್ಯವಸ್ಥೆಯ ಅಂಗವಾದ ನ್ಯಾಯಾಂಗದ ಮೇಲೂ ತನ್ನ ಪ್ರಭಾವ ಬೀರಿದೆ.

ದೇಶದ ಸಾಮಾನ್ಯ ದುಡಿಯುವ ಜನತೆಗೆ ಈ ತೀರ್ಪು ಆಘಾತಕಾರಿಯಾಗಿದೆ. 70ರ ದಶಕದಲ್ಲಿ ಮತ್ತು 80ರ ದಶಕದ ಆರಂಭದಲ್ಲಿ ನ್ಯಾಯಾಂಗ, ಮುಖ್ಯವಾಗಿ ದೇಶದ ಸರ್ವೋಚ್ಚ ನ್ಯಾಯಾಲಯವು ತನ್ನ ಹಲವಾರು ಗುರುತನ್ನು ತೀರ್ಪಿನ ಮೂಲಕ ನೌಕರರ ಹಕ್ಕನ್ನು ಎತ್ತಿ ಹಿಡಿದಿತ್ತು ಮಾತ್ರವಲ್ಲ ಕಾನೂನು ಮತ್ತು ಸಮಾನತೆಯನ್ನು ಸ್ಥಾಪಿಸಿತ್ತು.

ಈಗ ಹಾಗಿಲ್ಲ. ಜಾಗತೀ ಕರಣದ ಈ ಒಂದು ದಶಕದಲ್ಲಿ ನ್ಯಾಯಾಂಗದ ಮೌಲ್ಯಗಳು ಬದಲಾಗಿವೆ. 1996ರಲ್ಲಿ ಅಂದಿನ ಸರ್ವೋಚ್ಚ ನ್ಯಾಯಾಲಯದ ನ್ಯಾಯ ಮೂರ್ತಿಯವರು ಮಾತನಾಡುತ್ತ. ಉದಾರೀಕರಣವು ತನ್ನಲ್ಲಿ ಸಮಾಜವಾದವನ್ನು ಒಳಗೊಂಡಿದೆ ಏಕೆಂದರೆ ಸಂಪತ್ತು ಸಮಾನವಾಗಿ ಹಂಚಿಕೆಯಾಗ ಬೇಕಾದರೆ ಮೊದಲು ಸಂಪತ್ತು ಸೃಷ್ಟಿಯಾಗಬೇಕು" ಎಂದಿದ್ದರು. ಖಾಸಗೀಕರಣದ ದುರ್ಬಳಕೆ ತಡೆಯುವಲ್ಲಿ ಹಿಂಜರಿಕೆ ಮಾತ್ರವಲ್ಲ ಮತ್ತು ನೌಕರರು ಅನ್ಯಾಯದ ವಿರುದ್ಧ ಮುಷ್ಕರದ ಮೂಲಕ ದನಿಯೆತ್ತುವುದನ್ನೂ ಅದು ತಿರಸ್ಕರಿಸುತ್ತದೆ. ಖಾಸಗೀಕರಣ ಪ್ರಕ್ರಿಯೆಯಲ್ಲಿ ಮತ್ತು ಬಹುರಾಷ್ಟ್ರೀಯ ಕಂಪನಿಗಳು ದೇಶದ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವುದನ್ನು ತಡೆಯುವಲ್ಲಿ ಸರ್ವೋಚ್ಚ ನ್ಯಾಯಾಲಯ ವಿಫಲವಾಗಿದೆ. ಎನ್ರಾನ್ ದಾಬೋಲ್‌ನಲ್ಲಿ ತನ್ನ ಕಾರ್ಯ ಆರಂಭಿಸುವುದನ್ನು ನಿಲ್ಲಿಸಲು ಅದಕ್ಕೆ ಸಾಧ್ಯವಾಗಿಲ್ಲ. ಪ್ರಸ್ತುತ ಕಾನೂನು ಮತ್ತು ನಿಯಮಗಳನ್ನು ಮೀರಿದ ಬಗ್ಗೆ ಸಾಕಷ್ಟು ಮಾಹಿತಿಗಳಿದ್ದಾಗ್ಯೂ ಅದು ಕೊಜೆಂಟ್ರಿಕ್ಸ್, ಬಾಲ್ಕೋ ಮತ್ತಿತರ ಪ್ರಕರಣಗಳಲ್ಲಿ ಅದು ಕಾರ್ಯಶೀಲವಾಗಲಿಲ್ಲ. ಈಗ HPCL & IPCLನ ಖಾಸಗೀಕರಣದ ವಿಚಾರವಾಗಿ ಅದು ಮನವಿಗಳನ್ನು ಪರಿಶೀಲಿಸಬೇಕಿದೆ. ಈ ಕಂಪನಿಗಳನ್ನು ಕಾನೂನಿನ ಮೂಲಕ ರಾಷ್ಟ್ರೀಕರಣ ಗೊಳಿಸಿದ್ದನ್ನೂ ಮರೆಯ ಲಾಗಿತ್ತು.

ಸರ್ವೋಚ್ಚ ನ್ಯಾಯಾಲಯವು ಈ ಹಿಂದೆ ಕೇರಳದ ಉಚ್ಚ ನ್ಯಾಯಾಲಯದ ಬಂದ್ ಗಳನ್ನು ತಡೆಹಿಡಿಯುವ ತೀರ್ಪನ್ನು ಎತ್ತಿ ಹಿಡಿಯಿತು. ನಂತರ ಹರತಾಳಗಳನ್ನು ನಿರ್ಬಂಧಿಸುವ ತೀರ್ಪನ್ನೂ ಎತ್ತಿಹಿಡಿಯಿತು. ಇದೀಗ ನೌಕರರ ಮುಷ್ಕರವನ್ನು ಕಾನೂನು ಬಾಹಿರ ಎಂದು ಮತ್ತು ಮುಷ್ಕರ ಸಮಾಜದಲ್ಲಿ ತಳಮಳ ವುಂಟು ಮಾಡುತ್ತದೆ. ಆದ್ದರಿಂದ ನೌಕರರ ಬಗ್ಗೆ ಬಿಗಿ ಧೋರಣೆ ಇರಬೇಕೆಂಬ ತಮಿಳುನಾಡು ಉಚ್ಚ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿದೆ.

ನ್ಯಾಯಾಲಯದ ಉದಾಸೀನ

ಕಳೆದೊಂದು ದಶಕದ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಗಮನಿಸಿದರೆ ಜಾಗತೀಕರಣದಿಂದ ತತ್ತರಿಸುತ್ತಿರುವ ಸಾಮಾನ್ಯ ಜನತೆಯ ವಿಚಾರವಾಗಿ ಅದು ಉದಾಸೀನವಾಗಿರುವುದು ಸ್ಪಷ್ಟವಾಗುತ್ತದೆ. ಗುತ್ತಿಗೆ ನೌಕರರ ಹಕ್ಕುಗಳನ್ನು ಎತ್ತಿ ಹಿಡಿದಿದ್ದ ಹಿಂದಿನ ತೀರ್ಪುಗಳನ್ನು 2001ರಲ್ಲಿ ಸರ್ವೋಚ್ಚ ನ್ಯಾಯಾಲಯ ಬದಲಾಯಿಸಿತು. ನಿರಂತರವಾಗಿ ಗುತ್ತಿಗೆಯಡಿ ನೌಕರರಾಗಿ ಕೆಲಸ ಮಾಡಿದ್ದಲ್ಲಿ ಅವರನ್ನು ಖಾಯಂ ನೌಕರರನ್ನಾಗಿ ನೇಮಿಸುವಂತೆ ಇದ್ದ ತೀರ್ಪನ್ನು ಅದು ಅಲ್ಲಗಳೆಯಿತು.

ವಜಾ ಮಾಡಲ್ಪಟ್ಟ ನೌಕರರಿಗೆ ಮರು ನೇಮಕಾತಿ ನಂತರ ಸಂಬಳ ನೀಡಬೇಕೆಂಬ ಹಲವು ಉಚ್ಚ ನ್ಯಾಯಾಲಯಗಳ ತೀರ್ಪನ್ನು ಕಳೆದೆರಡು ವರ್ಷಗಳಲ್ಲಿ ಉಚ್ಚ ನ್ಯಾಯಾಲಯ ತಳ್ಳಿಹಾಕಿತು. ಇಂತಹ ಒಂದು ತೀರ್ಪಿನಲ್ಲಿ ಅದು ಕಾನೂನಿನಂತೆ ಪರಿಶೀಲಿಸಿದಾಗ ಈ ವಿಚಾರದಲ್ಲಿ ಉಚ್ಚ ನ್ಯಾಯಾಲಯದ ತೀರ್ಪು ದೋಷಪೂರಿತವಾಗಿದೆ." ಎಂದಿತು. (ಹಿಂದೂಸ್ಥಾನ್ ಮೋಟರ್ಸ್ V/s ತಪಸ್ ಕುಮಾರ್ ಭಟ್ಟಾಚಾರ್ಯ 2002 ಪೋಸ್ಟ್ ಗ್ರಾಜುಯೇಟ್ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಎಜುಕೇಶನ್ ಮತ್ತು ರಿಸರ್ಚ್ ಚಂಡಿಗಡ V/s ರಾಜಕುಮಾರ್ 2001)

ಮಾರುಕಟ್ಟೆಯತ್ತ ಒಲವು

ಜಾಗತೀಕರಣದ ಮೌಲ್ಯಗಳು ಮತ್ತು ಮಾರುಕಟ್ಟೆ ನೀತಿಗಳನ್ನು ನ್ಯಾಯಾಂಗವು ದೃಢೀಕರಿಸುತ್ತಿದೆ. ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಕಾರ್ಮಿಕ ಸುಧಾರಣೆಯ ಹೆಸರಿನಲ್ಲಿ ನೌಕರರನ್ನು ಅಭದ್ರಗೊಳಿಸಿ ಬಂಡವಾಳಗಾರರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಲು ನಡೆಸುತ್ತಿರುವ ಪ್ರಯತ್ನವನ್ನು ನ್ಯಾಯಾಂಗ ಈ ರೀತಿಯಾಗಿ ಬೆಂಬಲಿಸುತ್ತಿದೆ ಇದಕ್ಕೆ ಪೂರಕವಾದ ಇನ್ನೆರಡು ತೀರ್ಪುಗಳು ಹೀಗಿವೆ.


ವಿದ್ಯಾಭ್ಯಾಸದ ವಿಚಾರದಲ್ಲಿ ಹನ್ನೊಂದು ಸದಸ್ಯರನ್ನೊಳಗೊಂಡ ಸಮಿತಿಯು ನೀಡಿದ ತೀರ್ಪು ಆಘಾತಕಾರಿಯಾಗಿದೆ. ಟಿ.ಎಂ.ಎ.ಪೈ V/s ಕರ್ನಾಟಕ ರಾಜ್ಯದ ಧಾವೆಯಲ್ಲಿ ಈ ಸಮಿತಿಯು ಖಾಸಗಿ ಶಿಕ್ಷಣ ಸಂಸ್ಥೆ ತನ್ನ ಸಂಸ್ಥೆಗೆ, ಪ್ರವೇಶ ಮತ್ತು ಶುಲ್ಕವನ್ನು ನಿರ್ಧರಿಸುವಲ್ಲಿ ಸರ್ವ ಸ್ವತಂತ್ರವಾಗಿದೆ ಎಂದು ತೀರ್ಪು ನೀಡುವ ಮೂಲಕ ಈ ಹಿಂದಿನ ತೀರ್ಪಾಗಿದ್ದ ರಾಜ್ಯ ಸರ್ಕಾರ ಈ ಸಂಸ್ಥೆಗಳ ಪ್ರವೇಶ ಮತ್ತು ಶುಲ್ಕವನ್ನು ನಿಯಂತ್ರಿಸ ಬಹುದೆಂದು ನೀಡಿದ್ದ ತೀರ್ಪನ್ನು ತಳ್ಳಿಹಾಕಿತು ಇದರ ಪರಿಣಾಮವಾಗಿ ಹಲವಾರು ವೃತ್ತಿಪರ ಶಿಕ್ಷಣ ಸಂಸ್ಥೆಗಳು ವರ್ಷವೊಂದಕ್ಕೆ ಮಾದರಿಯಾದ ನಾಲ್ಕು ಲಕ್ಷ ಶುಲ್ಕ ವಿಧಿಸಿರುವುದನ್ನು ನಾವು ಗಮನಿಸಬಹುದು.

ನೌಕರರ ವಿಚಾರದಲ್ಲಿರುವಂತೆ ಇಲ್ಲಿಯೂ ನ್ಯಾಯಾಲಯ ಮಾರುಕಟ್ಟೆ ಅಥವ ಪೈಪೋಟಿಗೆ ಒತ್ತುಕೊಟ್ಟು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಲಾಭ ಗಳಿಸಲು ಅನುಕೂಲವಾಗುವಂತೆ ತೀರ್ಪು ನೀಡಿತು.

ಗಗನ ಸಖಿಯರು 50 ವರ್ಷಗಳಿಗೆ ನಿವೃತ್ತಿ ಆಗಬೇಕೆಂಬ ತೀರ್ಪು ನೀಡುವ ಮೂಲಕ ಮುಂಬೈನ ಉಚ್ಚ ನ್ಯಾಯಾಲಯ ತಮ್ಮ ಪುರುಷ ಸಹೋದ್ಯೋಗಿಗಳಂತೆ ಗಗನ ಸಖಿಯರೂ 58 ವರ್ಷಗಳವರೆಗೆ ವಿಮಾನಗಳಲ್ಲಿ ಸೇವೆ ಸಲ್ಲಿಸಬಹುದು ಎಂದು ನೀಡಿದ್ದ ತೀರ್ಪನ್ನು ತಳ್ಳಿಹಾಕಿತು. ಉಚ್ಚ ನ್ಯಾಯಾಲಯದ ಈ ತೀರ್ಪು ಲಿಂಗಾಧಾರಿತ ತಾರತಮ್ಯವನ್ನು ಮಾತ್ರವಲ್ಲ ಹೆಣ್ಣು ಮಕ್ಕಳನ್ನು ಸರಕಿನಂತೆ ಕಾಣುವ, ಅವರ ಸೌಂದರ್ಯಕ್ಕಷ್ಟೇ ಬೆಲೆ ನೀಡುವ ಮಾರುಕಟ್ಟೆಯ ನಿರ್ದೇಶನಕ್ಕೆ ಇಂಬು ಕೊಟ್ಟಿತು.



ಹಲವಾರು ಸಂದರ್ಭಗಳಲ್ಲಿ ಸರ್ವೋಚ್ಚ ನ್ಯಾಯಾಲಯ ಗುರುತರ ತೀರ್ಪು ನೀಡಿದೆ. ಈ ದೇಶದ ಸಂವಿಧಾನ ಮತ್ತು ಧರ್ಮ ನಿರಪೇಕ್ಷತೆಯನ್ನು ಎತ್ತಿ ಹಿಡಿದಿರುವುದು ಮಾತ್ರವಲ್ಲ ಜನಸಾಮಾನ್ಯರ ಹಕ್ಕುಗಳ ರಕ್ಷಕನಾಗಿ ಕಾರ್ಯ ನಿರ್ವಹಿಸಿದೆ. ಆದರೆ ಇತ್ತೀಚೆಗೆ ನೌಕರರ ಸಾಮೂಹಿಕ ಹಕ್ಕುಗಳ ವಿಚಾರದಲ್ಲಿ ಅದು ಕಟುವಾಗಿ ವರ್ತಿಸಿದೆ. ಅದು ದುಡಿಯುವ ವರ್ಗವನ್ನು ಸಮಗ್ರವಾಗಿ ಗುರುತಿಸುವ ಬದಲಿಗೆ ಅವರನ್ನು ವ್ಯಕ್ತಿಗತವಾಗಿ, ನಾಗರೀಕರಾಗಿ ಮಾತ್ರ ಗುರುತಿಸುತ್ತಿದೆ.



ಕಾರ್ಮಿಕ ವರ್ಗದ ಚಳುವಳಿ ಗಟ್ಟಿ ನೆಲೆ ಪಡೆದುಕೊಳ್ಳುತ್ತಿರುವಾಗಲೇ ರೈತ ಚಳುವಳಿಯ ವಿಸ್ತರಣೆಗೆ ಶ್ರಮಿಸಲಾಯಿತು. ಸ್ವಾತಂತ್ರ್ಯ ಚಳುವಳಿ ಕಿಚ್ಚು ತೆಲಂಗಾಣ ಸಾಯುಧ ಹೋರಾಟದ ಸ್ಫೂರ್ತಿ, ದ.ಕನ್ನಡದಲ್ಲಿ ಪ್ರಬಲ ಚಳುವಳಿಗೆ ಪ್ರೇರಕವಾದವು.

ಕರ್ಕಡಾರ ನೆನಪಿನ ದೋಣಿಯಿಂದ ಕೆಲವು ಇಲ್ಲಿ....

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತ ಚಳುವಳಿ ಬೆಳೆದುಬಂದ ದಾರಿ

ಡೇವಿಡ್ ಎ. ಕರ್ಕಡ

1939ರ ನಂತರ ಕಾರ್ಮಿಕ ಚಳುವಳಿ ...ವ್ರವಾಗಿ ಹಬ್ಬಿ ಬೆಳೆಯುತ್ತಿರುವಂತೆಯೇ ರೈತ ...ಘ (ಎ.ಐ.ಕೆ.ಎಸ್.)ವನ್ನು ಕಟ್ಟುವ ...ಯತ್ನವೂ 1946 ರಿಂದಲೇ ಅವಿಭಾಜ್ಯ ...ಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯಿತು. ...ಗಾತಿಗಳಾದ ಎ.ಕೃಷ್ಣ ಶೆಟ್ಟಿ, ಎಂ. ಎಚ್. ...ಣ್ಣಪ್ಪ ರೈತ ಚಳುವಳಿಯ ಮುಖಂಡರಾಗಿ ...ಳೆದುಬಂದರು. 1947ರಲ್ಲಿ ಕಾಂ. ...ಸ್.ಎನ್.ಹೊಳ್ಳರು ಜೈಲಿನಿಂದ ...ಡುಗಡೆಗೊಂಡ ನಂತರ ಅವರ ...ಭಾವದಿಂದ ರೈತರ ...ಘಟನೆಗಾಗಿ ಬೇರೆ ಬೇರೆ ...ಲೂಕುಗಳಿಂದ ಕಾಂ। ...ಳ್ಳರವರು ಬಂದು ರೈತರ ಸಭೆ ...ಸಬೇಕೆಂದು ಹುಡುಕಿಕೊಂಡು ಕಾರ್ಮಿಕ ...ಘದ ಕಛೇರಿಗಳಿಗೆ ಬಂದು ಅವರೊಡನೆ ...ತನಾಡಿ ಸಭೆಗಳಿಗೆ ದಿನ ನಿಗದಿ ...ಡಿಕೊಂಡುಹೋಗಿ ಗ್ರಾಮಾಂತರ ...ಗದವರೇ ಗೇಣುದಾರ ರೈತರ ಸಭೆಗೆ ವ್ಯವಸ್ಥೆ ...ಡಿ ಯಶಸ್ವಿಗೊಳಿಸುವಂತೆ ...ಡಿಯುತ್ತಿದ್ದರು.

ಈಗಾಗಲೇ ಬೆಳೆದು ಬಂದಿದ್ದ ಕಾರ್ಮಿಕ ...ಘಟನೆಗಳ ಮುಖಂಡರಾದ ಕಾಂ। ಬಿ.ವಿ. ...ಲ್ಲಾಯ ಮತ್ತು ಕಾಂ। ಎ. ಶಾಂತಾರಾಮ ...ಯುವರು ಸೇರಿ ಕಾರ್ಮಿಕ ಸಂಘಟನೆಗಳ ...ಮುಖ ಕಾರ್ಯಕರ್ತರು ರೈತರ ಚಳುವಳಿಗೆ ...ಘಟನೆಗೆ ಉತ್ಸಾಹದಿಂದಲೇ ...ಬಲಿಸುತ್ತಿದ್ದರು.

...ಕಾರ್ಮಿಕ ಮುಷ್ಕರಗಳು ನಡೆದಾಗಲೆಲ್ಲಾ ...ಯಂ ಸೇವಕರ ತಂಡಗಳು ಗ್ರಾಮಗಳಿಗೆ ...ಳಿ ಮುಷ್ಕರ ನಿಧಿಯನ್ನು ಸಂಗ್ರಹಿಸುವಾಗಲೇ ...ರ ಮಧ್ಯೆ ಸಂಘಟನೆಯಾಗುವಂತೆ

> ...ಂಘಟನೆ ಮೆರವಣಿಗೆಗಳನ್ನು ...ಾಡಿದಾಗಲೆಲ್ಲ "ಉಳುವವನೆ ...ಹೊಲದೊಡೆಯ, ಬೇರಿನ್ನಾವನು ...ಲದೊಡೆಯ?", "ಭೂಮಾಲಿಕ ...ದ್ಧತಿ ನಾಶವಾಗಲಿ" ಎಂಬಂತಹ ...ಾಂತಿಕಾರಿ ಘೋಷಣೆಗಳೊಂದಿಗೆ 'ಭೂ ...ಾಲಿಕ ಪದ್ಧತಿ ನಾಶವಾಗಲಿ' ...ರವಣಿಗೆಗಳಲ್ಲಿ ಭಾಗವಹಿಸುತ್ತಿದ್ದೆವು.

...ರವನ್ನು ನಡೆಸಲಾಗುತ್ತಿತ್ತು. ರೈತರು ...ರ್ಮಿಕರಿಗೆ ಸಹಾಯದ ರೂಪದಲ್ಲಿ ಅಕ್ಕಿ, ..., ತೆಂಗಿನ ಕಾಯಿಗಳನ್ನು ನೀಡುವುದರ ...ಗೆ ಹಣದ ಸಹಾಯವನ್ನೂ ...ಡುತ್ತಲಿದ್ದರು. ಈ ರೀತಿಯಾಗಿ ಕಾರ್ಮಿಕ ...ಘಟನೆಗಳಿರುವ ಉಡುಪಿ, ಮಂಗಳೂರು, ...ಟ್ವಾಳಗಳಲ್ಲಿ ಬಹುಬೇಗನೇ ಪ್ರಬಲವಾದ ...ಸಂಘಟನೆ ಬೆಳೆದು ಬಂದು, ಉಳಿದ ...ಗಡಿ, ಪುತ್ತೂರು ತಾಲ್ಲೂಕುಗಳಿಗೆ ...ಸಲು ಸಾಧ್ಯವಾಯಿತು. ...ಉಡುಪಿಯಲ್ಲಿ ಕಾಂ। ಕೆ. ದಾಸ ಸೇರಿಗಾರ, ...ಟ್ವಾಳದಲ್ಲಿ ಕಾಂ। ಅಮ್ಮುಶೆಟ್ಟಿ, ಕಾಂ। ಬಾಬು ... ಮತ್ತು ನಂತರದಲ್ಲಿ ಕಾಂ। ವೀರಪ್ಪ ...ಸರವರು, ಪುತ್ತೂರಿನಲ್ಲಿ ಕಾಂ। ಕೆ. ಸಂಜೀವ ರೈ. ಕಾಂ। ವೈ ನಾರಾಯಣ ಭಟ್, ಬೆಳ್ತಂಗಡಿಯಲ್ಲಿ ಕಾಂ। ಇಂದ್ರ, ಕಾಂ. ರಾಮ ನಾಯಕ್, ಕಾಂ। ಕೆ.ವಿ. ರಾವ್ (ಯಳಚಿತ್ತಾಯ) ಕಾಂ। ದೊಮ್ಮಣ್ಣ ಭಂಡಾರಿಯವರೂ ಮುಖ್ಯ ಕಾರ್ಯಕರ್ತರಾಗಿದ್ದರು. 1948ರ ಮೇ ತಿಂಗಳಿನಲ್ಲಿ ಸರಕಾರ ಕಮ್ಯುನಿಸ್ಟ್ ಪಕ್ಷದ ಮೇಲೆ ನಿರ್ಬಂಧ ಹೇರುವವರೆಗೆ ರೈತ ಸಂಘಟನೆ ಪ್ರಬಲ ಶಕ್ತಿಯಾಗಿತ್ತು 1948ರಲ್ಲಿ ಪಕ್ಷವನ್ನು ನಿಷೇಧಿಸಿದಾಗ ಹಲವರ ಬಂಧನವಾದರೂ ಕೂಡಾ ಹೆಚ್ಚಿನವರು ಭೂಗತರಾಗಿದ್ದು ಗ್ರಾಮಾಂತರ ಭಾಗದಲ್ಲಿಯೇ ಇರತೊಡಗಿ ಸಂಘಟನೆಗೆ, ಕಾರ್ಯಕರ್ತರ ಬೆಳವಣಿಗೆಗೆ ಇದರಿಂದ ಸಹಾಯಕವಾಯಿತು.

ಮಂಗಳೂರು ತಾಲೂಕಿನ ಕಂಕನಾಡಿ, ಬಜಾಲು, ಜಪ್ಪಿನ ಮೊಗರು, ಉಳ್ಳಾಲ ವಲಯದಲ್ಲಿ ಕೊಟೆಕಾರು, ಸೋಮೇಶ್ವರ ಬೀದಿ, ಉಚ್ಚಿಲ ಗ್ರಾಮಗಳು ಅಲ್ಲದೆ ದೂರದ ಬಂಟ್ವಾಳದ ಇರಾ, ಬಾಳೆ ಪುಣೆ, ಮತ್ತಿತರ ಗ್ರಾಮಗಳಿಗೆ ಹಬ್ಬಿತು. ಉಡುಪಿಯಲ್ಲಿ ಶಿವಳ್ಳಿ ಗ್ರಾಮದ, ಸಗ್ರಿ, ನೊಳೆ, ಪಣಿಯಾಡಿ, ಕಿದಿಯೂರು, ಕಡೆಕಾರು, ಉದ್ಯಾವರ ಕೊರಂಗ್ರಪಾಡಿಗಳಲ್ಲಿ ಮುಖಂಡರುಗಳು ಭೂಗತರಾಗಿದ್ದುಕೊಂಡು ಸಂಘಟನೆ ಬೆಳೆಸಲು ನೆರವಾದರು.

ಅದಾಗಲೇ ತೆಲಂಗಾಣದಲ್ಲಿ ಬೆಳೆದು ಬರುತ್ತಿದ್ದ ರೈತರ ಸಶಸ್ತ್ರ ಹೋರಾಟಕ್ಕೆ ಬೆಂಬಲ, ಪ್ರಚಾರ, ಸಹಾಯ ಸಂಗ್ರಹಿಸುವ ಕೆಲಸದಲ್ಲಿ ನಾವೆಲ್ಲರು ಸ್ವಯಂ ಸೇವಕರಾಗಿ ಕೆಲಸ ಮಾಡಿದೆವು. ಕಾರ್ಮಿಕ ವರ್ಗದಿಂದ ಪಕ್ಷಕ್ಕೆ ಸೇರಿದ್ದ ಅನೇಕ ಕಾರ್ಯಕರ್ತರು ಅಂದಿನ ಕ್ರೂರ ದಬ್ಬಾಳಿಕೆಗೂ ಹೆದರದೆ ಸಂಘಟನೆಯ ಕೆಲಸವನ್ನು ಜಾಗರೂಕತೆಯಿಂದ ಮುಂದುವರಿಸಿದರು. ಅವರೆಂದಿಗೂ ಶರಣಾಗಲಿಲ್ಲ, ಸರಕಾರ ದೊಡನೆ ರಾಜಿ ಮಾಡಿಕೊಳ್ಳಲಿಲ್ಲ.

ಸಂಘಟನೆ ಮೆರವಣಿಗೆಗಳನ್ನು ಮಾಡಿದಾಗಲೆಲ್ಲ "ಉಳುವವನೆ ಹೊಲದೊಡೆಯ, ಬೇರಿನ್ನಾವನು ನೆಲದೊಡೆಯ?", "ಭೂಮಾಲಿಕ ಪದ್ಧತಿ ನಾಶವಾಗಲಿ" ಎಂಬಂತಹ ಕ್ರಾಂತಿಕಾರಿ ಘೋಷಣೆಗಳೊಂದಿಗೆ 'ಭೂ ಮಾಲಿಕ ಪದ್ಧತಿ ನಾಶವಾಗಲಿ' ಮೆರವಣಿಗೆಗಳಲ್ಲಿ ಭಾಗವಹಿಸುತ್ತಿದ್ದೆವು.

ನನಗೆ ಇಂದಿಗೂ ನೆನಪಿರುವಂತೆ 1945-46 ರಲ್ಲಿ ಅಂದಿನ ಬೆಜವಾಡ (ಈಗ ವಿಜಯವಾಡ) ದಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಅಧಿವೇಶನದ ಬಗ್ಗೆ ಅಂದಿನ ವರದಿಗಳು ಮತ್ತು ಪಕ್ಷ ಪ್ರಕಟಿಸಿದ ಪುಸ್ತಕಗಳಿಂದ ಸ್ಫೂರ್ತಿಗೊಂಡದ್ದೂ ಅಲ್ಲದೆ ಆ ಅಧಿವೇಶನದ ಯಶಸ್ವಿಗಾಗಿ ಕಾಂ। ಪಿ. ಸುಂದರಯ್ಯ ಮೊದಲಾದ ಸಂಗಾತಿಗಳು ಹೇಗೆ ದುಡಿದರು. ಯಶಸ್ವಿಗೊಳಿಸಿದರು. ಅವರ ಐತಿಹಾಸಿಕ ಪಾತ್ರ ಇಂದಿಗೂ ಕಣ್ಣೆದುರು ನಿಲ್ಲುತ್ತದೆ.

ಸ್ವಾತಂತ್ರ್ಯ ಬಂದ ಬಳಿಕ ಕಾಂಗ್ರೆಸ್ ಸರಕಾರ 1947ರಲ್ಲಿಯೇ ಜ್ಯಾರಿಗೆ ತಂದ ಮದ್ಯಪಾನ ನಿಷೇಧ ಕಾನೂನಿನಿಂದಾಗಿ ಸರಾಯಿ ಅಂಗಡಿಗಳು ಮುಚ್ಚಲ್ಪಟ್ಟಂತೆ ಬಡವರೇ ಕಡಿಯುತ್ತಿದ್ದ ಹೆಂಡದ ಉತ್ಪಾದನೆಯೂ ನಿಲ್ಲುವಂತಾಯಿತು. ತಾಳೆಮರ, ತೆಂಗಿನ ಮರ, ಹತ್ತಿ ಮುರ್ತೆ ಮಾಡಿ ಇಳಿದು ತಯಾರಿಸಲಾದ ಹೆಂಡವನ್ನು ಸರಕಾರ ನಿಲ್ಲಿಸಿದಾಗ ಜಿಲ್ಲೆಯಾದ್ಯಂತದ ಸಾವಿರಾರು ಮುರ್ತೆದಾರರು ಕೆಲಸ ಕಳಕೊಂಡು ನಿರುದ್ಯೋಗಿಗಳಾದಾಗ ರೈತ ಸಂಘ ಮುರ್ತೆದಾರರ ಸಭೆಗಳನ್ನು ಜಿಲ್ಲೆಯಾದ್ಯಂತ ಸಂಘಟಿಸಿ ಅವರ ಆಯುಧಗಳಾದ ಮುರ್ತೆ ಮಾಡುವ ತರ್ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಕೈಯಲ್ಲಿ ಕೆಂಬಾವುಟ ಹಿಡಿದುಕೊಂಡು (ಬುಡ್ಡಿಯನ್ನು) ಹೆಂಡಹಾಕುವ ಪಾತ್ರೆಯೊಂದಿಗೆ ಮೆರವಣಿಗೆಗಳಲ್ಲಿ ಭಾಗವಹಿಸಿ ಮಂತ್ರಿ ಮಾಗಧರಿಗೆ ಮನವಿ ಒಪ್ಪಿಸಲು ಹೋಗುವ ಮೆರವಣಿಗೆಗಳಲ್ಲಿ ಕಾರ್ಮಿಕರಾದ ನಾವೆಲ್ಲರೂ ಬೆಂಬಲನೀಡಿ ಭಾಗವಹಿಸುತ್ತಿದ್ದೆವು. "ತರ್ಕತ್ತಿಗೆ ಮಣ್ಣೆ ಪತ್ಯೆರೆ ಬಲ್ಲಿ" ಯೆಂಕ್ಲೆನ ಬಂಜಿದ ಪಸೆ ಅಜೆರೆಬಲ್ಲಿ" ಮುರ್ತೆದಾಯನ ಬೇಲಿ ಉಂತಾವಡೆ" ಕುಜಿಲಿಡ್ ಕಲಿ ಅಜವಡೆ" ಬೆಲ್ಲ ಮೆಲ್ಪೆಲ ಅನುಮತಿ ಕೊರ್ಲೆ" ಬೇಲಿ ಬೆನ್ಪನಾಕ್ಲೆನ ನುಪ್ಪು ಉಂತಾವಡೆ" (ಮುರ್ತೆ ಮಾಡುವ ಕತ್ತಿಗೆ ತುಕ್ಕು ಹಿಡಿಯಬಾರದು. ನಮ್ಮ ಹೊಟ್ಟೆಯ ನೀರು ಆರಬಾರದು. ಬೆಲ್ಲಕ್ಕಾಗಿ ಮುರ್ತೆಗೆ ಅನುಮತಿ ನೀಡಿ ದುಡಿಯುವವರ ಅನ್ನ ಕಸಿಯಬೇಡಿ) ಎಂಬರ್ಥದ ಘೋಷಣೆಗಳು ಕೇಳಿಬರುತ್ತಿದ್ದವು. ದೊಡ್ಡ, ದೊಡ್ಡ, ಸಮ್ಮೇಳನಗಳು, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆದು ತೀವ್ರ ರೀತಿಯ ಒತ್ತಡದ ನಂತರ ಬೆಲ್ಲ ತಯಾರಿಸಲು ಅನುಮತಿಯೊಂದಿಗೆ ಮುರ್ತೆದಾರರಿಗೆ ಹೆಂಡ ಇಳಿಸಲು ಅನುಮತಿ ದೊರೆಯಿತು. ಜಿಲ್ಲೆಯಾದ್ಯಂತ ಬೆಲ್ಲದ ಸೊಸೈಟಿಗಳು (ಮುರ್ತೆದಾರರ ಸೊಸೈಟಿಗಳು) ಆರಂಭಗೊಂಡವು. ಹೆಚ್ಚಿನವರಿಗೆ ಉದ್ಯೋಗ ದೊರೆಯುವಂತಾಯಿತು.

ಮದ್ಯಪಾನ ನಿಷೇಧ ರದ್ದಾಗದೆ ಇದ್ದರೂ ಸಿಹಿ ಕಳ್ಳು" ನೀರಾ ಇಳಿಸಲು ಅನುಮತಿ ನೀಡಲಾಯಿತು. ನಂತರದಲ್ಲಿ ಇದು ಜಾತಿಯಾಧಾರಿತ ಸಹಕಾರಿ ಸಂಘಗಳಾಗಿವೆ. ಈ ಹೋರಾಟದ ಯಶಸ್ಸು ಮುಂದೆ ಜಿಲ್ಲೆಯಲ್ಲಿ ರೈತರ ಚಳುವಳಿ ಬೆಳೆಯಲು ನಾಂದಿ ಯಾಯಿತೆಂದು ಮಾತ್ರವೇ ಹೇಳಬಹುದು.

1948ರಲ್ಲಿ ಮೇ ತಿಂಗಳಲ್ಲಿ ಎಲ್ಲಾ ಸಾಮೂಹಿಕ ಸಂಘಟನೆಗಳ ಮೇಲೆ ಮತ್ತು ಪಕ್ಷದ ಕಾರ್ಯಕರ್ತರ ಮುಖಂಡರ ಮೇಲೆ ತೀವ್ರ ತರದ ಧಾಳಿ ಪ್ರಾರಂಭವಾಯಿತು. ಕೆಲವರು ಬಂಧಿಸಲ್ಪಟ್ಟರು. ಹೆಚ್ಚಿನವರು ಭೂಗತರಾದರು.

ಜಾಗತೀಕರಣದ ಇಬ್ಬಗೆಯ ನೀತಿ



ಜನಾರೋಗ್ಯ ಸಾಧಿಸಲು ಅಲ್ಮಾ ಆಟಾ ಸೂಚನೆಗಳು ಪರಿಣಾಮಕಾರಿಯಾಗಿದ್ದವು. ಆದರೆ ಅವುಗಳನ್ನು ನಾವು ಪಾಲಿಸಲಿಲ್ಲವಾದ್ದರಿಂದ "2000 ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ" ಎಂಬುದನ್ನು ಸಾಧಿಸಲಾಗಲಿಲ್ಲ. ಇದಕ್ಕೆ ಕಾರಣ ಜಾಗತೀಕರಣ ನೀತಿ-ಈ ನೀತಿ ಅಲ್ಮಾ ಆಟಾ ಘೋಷಣೆಯನ್ನು ಜಾರಿಗೆ ತರಲು ಅಡ್ಡಿ ಉಂಟುಮಾಡಿತು. ಅದರ ಬದಲಾಗಿ ವಿಶ್ವಬ್ಯಾಂಕಿನ ಆರೋಗ್ಯ ಆದೇಶಗಳನ್ನು ಕೇಳಿ ಜಾರಿಗೆ ತರುವಂತಾಯಿತು. ವಿಶ್ವಬ್ಯಾಂಕಿನ ಆರೋಗ್ಯ ಆದೇಶಗಳೆಂದರೆ

1) ಸರಕಾರ ಕ್ಷೇಮಾಭಿವೃದ್ಧಿ ವೆಚ್ಚಗಳನ್ನು (ಆರೋಗ್ಯ) ಕಡಿಮೆ ಮಾಡಬೇಕು
2) ಕ್ಷೇಮಾಭಿವೃದ್ಧಿ ಕೆಲಸಗಳಿಗೆ ಖಾಸಗೀ ಕ್ಷೇತ್ರವನ್ನು ಉಪಯೋಗಿಸಿಕೊಳ್ಳಬೇಕು.
3) ಆರೋಗ್ಯದ ಎಲ್ಲ ಜವಾಬ್ದಾರಿಗಳನ್ನೂ ವಹಿಸಿಕೊಳ್ಳದೇ ಕೇವಲ ಕೆಲವೇ (ಉದಾ: ಸಾವು ತಡೆಗಟ್ಟುವ) ವಿಷಯಗಳನ್ನು ಗಮನಿಸಬೇಕು.
4) ಆರೋಗ್ಯ ಸೇವೆಗಳಿಗೆ ಸೇವಾಶುಲ್ಕ ವಿಧಿಸಬೇಕು. (ಬಡವರಿಗೆ ಅದು ಲಭ್ಯವಾಗದಂತೆ ಆದರೂ ಪರವಾಗಿಲ್ಲ)

ಇದರ ಪರಿಣಾಮ ಈಗಾಗಲೇ ಕಂಡುಬರುತ್ತಿದೆ

ಶಿಶುಮರಣ ಸಂಖ್ಯೆ ಕಡಿಮೆಯಾಗುತ್ತಿಲ್ಲ

ಜನಗಳಿಗೆ ನೈರ್ಮಲ್ಯ, ಕುಡಿಯುವ ನೀರು, ಜೀವಿಸಲು ಯೋಗ್ಯವಾದ ಮನೆ ಮುಂತಾದ ಮೂಲಭೂತ ಸೌಕರ್ಯಗಳು ಸಿಗದಂತಾಗಿದೆ.

ಕ್ಷೇಮಾಭಿವೃದ್ಧಿ ವೆಚ್ಚಗಳನ್ನು ಕಡಿಮೆ ಮಾಡಲು ತೃತೀಯ ರಾಷ್ಟ್ರಗಳಿಗೆ ಹೇಳುತ್ತ ಮುಂದುವರೆದ ರಾಷ್ಟ್ರಗಳು ಇಂದಿಗೂ ಆರೋಗ್ಯ ಕ್ಷೇತ್ರದ ಮೇಲೆ ಹೆಚ್ಚಿಗೆ ಖರ್ಚು ಮಾಡುತ್ತಿವೆ. ಖಾಸಗೀಕರಣ ನೀತಿಯನ್ನು ಪ್ರತಿಪಾದಿಸುತ್ತಿವೆ. ಆದರೆ ತಾವೂ ಮಾತ್ರ ಪಾಲಿಸುತ್ತಿಲ್ಲ. ಇದು ಇಬ್ಬಗೆಯ ನೀತಿ ಅಲ್ಲವೆ. ಈ ಕೋಷ್ಟಕವನ್ನು ಗಮನಿಸಿದಾಗ ಈ ಸತ್ಯ ಕಂಡುಬರುತ್ತಿದೆ.

ಆರೋಗ್ಯ ವಲಯದಲ್ಲಿ ಹಣ ಹೂಡಿಕೆ

ಅಭಿವೃದ್ಧಿಗೊಂಡ ದೇಶಗಳು	ಸರ್ಕಾರದ ಪಾಲು %	ಖಾಸಗೀವಲಯದ ಪಾಲು %
ಕೆನಡಾ	74.8	25.3
ಸ್ವೀಡನ್	89.2	10.7
ಯು.ಕೆ	85.2	14.8
ಅಭಿವೃದ್ಧಿಶೀಲ ದೇಶಗಳು		
ಭಾರತ	21.7	78.3
ಫಿಲಿಪ್ಪೈನ್ಸ್	50.0	50.0
ಬಾಂಗ್ಲಾ ದೇಶ	43.8	56.2
ಇಂಡೋನೇಶಿಯಾ	35.0	65.0



ಖ್ಯಾತ ಕ್ರಾಂತಿಕಾರಿ ಸಾಹಿತಿ 'ನಿರಂಜನ' ರ ಸುಪ್ರಸಿದ್ಧ ಕಾದಂಬರಿ, ಕಯ್ಯೂರು ವೀರರ ಮಹಾನ್ ಗಾಥೆ 'ಚಿರಸ್ಮರಣೆ'ಯನ್ನು ಕಿರುತೆರೆಗೆ ತರಲಾಗುತ್ತಿದೆ. ಚಿತ್ರೀಕರಣ ಆರಂಭಗೊಂಡಿದೆ.

ಕಯ್ಯೂರು ವೀರಗಾಥೆ 'ಚಿರಸ್ಮರಣೆ' ಕಿರುತೆರೆಗೆ

ಧಾರ್ಮಿಕತೆ ಹೆಸರಲ್ಲಿ ಮೂಢನಂಬಿಕೆ, ಕಂದಚಾರ, ಅವೈಜ್ಞಾನಿಕತೆಗೆ ಜೋತು ಬಿದ್ದಿದ್ದ ಬೆಂಗಳೂರು ದೂರದರ್ಶನ, ಇತ್ತೀಚೆಗೆ ಖ್ಯಾತ ನಾವುರ ಕಥೆ, ಕಾದಂಬರಿಗಳಾದ ಸರಸಮ್ಮನ ಸಮಾಧಿ, ಸುಬ್ಬಣ್ಣ, ಭಾರತೀಪುರ, ದಲಿತ ಕಥೆಗಳು, ಶತಮಾನದ ಸಣ್ಣ ಕಥೆಗಳ ಜೊತೆಗೆ ನಿರಂಜನರ 'ಚಿರಸ್ಮರಣೆ' ಕಾದಂಬರಿಯನ್ನೂ ಕಿರುತೆರೆಗೆ ತರುವ ಪ್ರಶಂಸನೀಯ ಯತ್ನ ನಡೆಸಿದೆ.

ನಾಡಿನ ಖ್ಯಾತ ಸಾಹಿತಿ ನಿರಂಜನರ ಇತಿಹಾಸ ಪ್ರಸಿದ್ಧ ಕಾದಂಬರಿ 'ಚಿರಸ್ಮರಣೆ' ಚಂದನ ಚಾನಲ್ ಗಾಗಿ ದೃಶ್ಯ ರೂಪಕ ಪಡೆಯುತ್ತಿದೆ.

ಕಿರುತೆರೆಯಲ್ಲಿ ಹಾಸ್ಯ ಧಾರಾವಾಹಿಗಳಾದ ಪಾಪ ಪಾಂಡು, ಸಿಲ್ಲಿ ಲಲ್ಲಿ ನಿರ್ದೇಶಿಸಿದ ಸಿಹಿ ಕಹಿ ಚಂದ್ರು ಪ್ರಥಮ ಬಾರಿಗೆ ಗಂಭೀರ ಕಥಾ ವಸ್ತುವುಳ್ಳ ಚಿರಸ್ಮರಣೆಯನ್ನು ತಮ್ಮ 'ಪೈನಲ್ ಕಟ್' ಸಂಸ್ಥೆಯಿಂದ 13 ಕಂತುಗಳಲ್ಲಿ ನಿರ್ಮಿಸುತ್ತಿದ್ದಾರೆ.

ಚಿರಸ್ಮರಣೆ ಕನ್ನಡದಲ್ಲೇ ಅಲ್ಲದೆ ದೇಶದ ಬಹು ಬಾಷೆಗಳಿಗೆ ಅನುವಾದಗೊಂಡು ಸಾಹಿತ್ಯಲೋಕದಲ್ಲೊಂದು ಇತಿಹಾಸ ಸೃಷ್ಟಿಸಿದ ಕೃತಿ. ಇದು ಕಯ್ಯೂರಿನ ರೈತ ಹೋರಾಟದ ಅಂತಸ್ಸತ್ವವನ್ನು ಬಿಂಬಿಸುವುದಲ್ಲದೆ, ಇಲ್ಲಿನ ಅನೇಕ ಪಾತ್ರಗಳು ನಿಜ ಜೀವನದಿಂದಲೇ ಕಾದಂಬರಿಯ ಪುಟಗಳಿಗೆ ನಡೆದು ಬಂದಿವೆ.

ಚಿರಸ್ಮರಣೆ ಕಾದಂಬರಿ ಬ್ರಿಟಿಷರ ಆಡಳಿತದಲ್ಲಿನ ಕ್ರೂರ ಜಮೀನ್ದಾರಿ ಪದ್ಧತಿ ವಿರುದ್ಧ ರೈತ-ಕೂಲಿಕಾರರನ್ನು ಜಾಗೃತಿ ಗೊಳಿಸಿ ಸ್ವಾತಂತ್ರ್ಯ ಚಳವಳಿಯ ಕಿಚ್ಚು ಹಚ್ಚಿದ ನೈಜ ಕಥೆ.



ಕಾದಂಬರಿಯಲ್ಲಿ ಬರುವ ಪ್ರಮುಖ ನಾಲ್ಕು ಪಾತ್ರದಾರಿ ಗಳನ್ನು 1923 ರಲ್ಲಿ ಗಲ್ಲು ಶಿಕ್ಷೆಗೆ ಒಳಪಡಿಸಿದ ಬ್ರಿಟಿಷರು, ಹುತಾತ್ಮರ ದೇಹಗಳನ್ನು ಸ್ವತ ತಾವೇ ದಹನ ಮಾಡಿ, ಬೂದಿಯನ್ನು ಸಂಬಂಧಿಕರಿಗೆ ನೀಡಲು ನಿರಾಕರಿಸುತ್ತಾರೆ, ಅಷ್ಟರ ಮಟ್ಟಿಗೆ ಕಯ್ಯೂರು ಚಳವಳಿ ಸಾಮ್ರಾಜ್ಯಶಾಹಿಗಳಿಗೆ ಮತ್ತು ಶೋಷಣೆ ಗಾರರ ಎದೆ ನಡುಗಿಸಿತ್ತು ಎಂಬುದು ಸತ್ಯ.

ತನ್ನ ವಿದ್ಯಾರ್ಥಿಗಳಿಗೆ ಬ್ರಿಟಿಷ್‌ರ ವಿರುದ್ಧ ಸೆಟೆದು ನಿಲ್ಲುವಂತೆ, ಇಡೀ ಹಳ್ಳಿಯನ್ನು ಕ್ರೂರ ಜಮೀನ್ದಾರರ ವಿರುದ್ಧ ದಂಗೇಳುವಂತೆ ಮಾಡುವ ಮೇಸ್ಟ್ರು, ಚಳವಳಿಯ ನೇತೃತ್ವ ವಹಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆ ಮತ್ತು ಅವರ ಬಾಲ ಬುಡುಕ ಜಮೀನ್ದಾರರಿಗೆ ನಿದ್ರೆಗೆಡಿಸಿ, ದೇಶದ ಶ್ರಮಿಕ ಜನತೆಗೆ ಆಶಾಕಿರಣದಂತೆ ಪ್ರಕಾಶಿಸುವ ಅಪ್ಪು, ಚಿರಕುಂಡ, ಕುಂಞಂಬು ಮತ್ತು ಅಬೂಬಕ್ಕರ್ ಮತ್ತೊಮ್ಮೆ ದೂರದರ್ಶನದ ಮೂಲಕ ದೇಶಪ್ರೇಮಿ ಜನತೆಯನ್ನು ಜಾಗೃತಗೊಳಿಸಲಿದ್ದಾರೆ.

ಈ ಧಾರಾವಾಹಿಯ ಚಿತ್ರಕರಣ 'ಅಪ್ಪು, ಚಿರಕುಂಡ,



ಕುಂಞಂಬು ಮತ್ತು ಅಬೂಬಕ್ಕರ್'ರರು ಹುತಾತ್ಮರಾದ ಸ್ಥಳ[...] ಆಗಸ್ಟ್ 3 ರಂದು ಆರಂಭಗೊಂಡಿದೆ. ತಮ್ಮ ಬಾಲ್ಯದಲ್ಲಿ ಕಯ[...] ಚಳವಳಿಯಲ್ಲಿ ಭಾಗವಹಿಸಿದ ಹಿರಿಯ ಸ್ವಾತಂತ್ರ್ಯ ಹೋರಾ[...] ವಿ.ಅಪ್ಪು ಕ್ಲಾಪ್ ಮಾಡಿದರು. ಸಿಪಿಐ(ಎಂ) ಕಾಸರಗೋಡು[...] ಸಮಿತಿ ಸದಸ್ಯರಾದ ಸಿ.ಹೆಚ್. ಕುಂಞಂಬು ಕ್ಯಾಮರಾ[...] ಮಾಡಿದರು. ಈ ಸಂದರ್ಭದಲ್ಲಿ ಕಾಸರಗೋಡು[...] ಕೃಷ್ಣಾಮಾಸ್ಟರ್, ಲಕ್ಷ್ಮಿನಾರಾಯಣ ಪ್ರಭು, ದಾಮೋದ[...] ಬಾಲಕೃಷ್ಣನ್, ಕೆ.ಭಾಸ್ಕರನ್ ಮೊದಲಾದವರು ಭಾಗವಹಿ[...]

ಈ ಧಾರಾವಾಹಿಯ ಪ್ರಮುಖ ಪಾತ್ರಧಾರಿ[...] ಮಂಗಳೂರಿನ ರಂಗ ಕಲಾವಿದ ಕಾಸರಗೋಡು ಚಿನ್ನ (ಮ[...] ನವೀನ್ ಪಡೀಲ್(ಪಂಡಿತ), ದಿನೇಶ್ (ಅಣ್ಣು), [...] ಜಯದೇವ, ಕುಲಕರ್ಣಿ ಮತ್ತು ಪೂರ್ಣಚಂದ್ರ (ಅಪ್ಪು, ಚಿ[...] ಕುಂಞಂಜು ಮತ್ತು ಅಬೂಬಕ್ಕರ್) ಬಾಲಕಲಾವಿದರಾಗಿ[...] ಚಿನ್ನಾ, ಮಿಥುನ್ ಶೆಟ್ಟಿ, ಮಿಥಿಲೇಶ್. [...] ಅಭಿನಯಿಸುತ್ತಿದ್ದಾರೆ.

ರಮೇಶ್ ಪಂಡಿತ್, ಸೋರೋಜಿನಿ ಶೆಟ್ಟಿ, ಗೋ[...] ಭಟ್, ಶ್ರೀಕಲಾ ಉಡುಪ, ಪ್ರದೀಪ್, ಸುನಿತಾ ಶೆಟ್ಟಿ, [...] ಲಕ್ಷ್ಮಣ ಕುಮಾರ್, ಸುಧಾ ಪ್ರಸನ್ನ, ಡಾ.ನಾ.ದಾ.ಶೆಟ್ಟಿ ಕು[...] ಮೊದಲಾದವರ ಅಭಿನಯವಿದೆ.

400 ವಿಕೆಟ್ ಕೆಡವಿದ ಹೈಟೆಕ್ ಮುಮ ?!

ಅರಮನೆ ಮೈದಾನದಲ್ಲಿ ಭರ್ಜರಿ ಸಮಾರಂಭ ಮಾಡಿ ಸಚಿನ್ ತೆಂಡೂಲ್ಕರ್‌ರಂಥವರನ್ನು ಸನ್ಮಾನ ಮಾಡಿದ ಹೈಟೆಕ್ ಮುಖ್ಯಮಂತ್ರಿಗಳು, ಕ್ರಿಕೆಟ್ ಆಡೋದರಲ್ಲಿ, ವಿಕೆಟ್ ಉರುಳಿಸೋದರಲ್ಲಿ ನಾನೇನು ಕಮ್ಮಿ ಇಲ್ಲ ಎಂದರು. ಅವರು ಉರುಳಿಸಿದ ವಿಕೆಟ್, ಮಾಡಿದ ರನ್ನು ಎಂತಹವು? 'ನಗಾರಿ'ಯವರ ಮುಂದೆ ಬಿಚ್ಕೊಂಡಿದ್ದು ಹಿಂದೆ...



ಬೆಂಗ್ಳೂರು ಅರಮನೆ ಮೈದಾನ್ದಲ್ಲಿ ರಾಜೀವ್ ಗಾಂಧಿ ಯುವಶಕ್ತಿ ಸಮಾವೇಶ ಮುಗ್ಸಿ ದೊಡ್-ದೊಡ್ ಕ್ರಿಕೆಟ್‌ಸೋರ್ಗಲ್ಲಾ ಕೈ ಕುಲುಕಿ ಪುಳಕಿತ್ರಾಗಿ ಹೈಟೆಕ್ ಮುಮ ರವರು (ಮಾಮ ಅಂತ ಮಾಡ್ಕೊಳಣ ಬಿಡಿ ತಪ್ಪೇನು) ಅದೇ ಖುಷಿಯಲ್ಲಿ ನಗಾರಿ ಸಂದರ್ಶಕರಿಗೆ ಸಿಕ್ಕಿ ಮನಸ್ಸು ಬಿಚ್ಚಿ ಮಾತಾಡಿದ್ರು.

ನಿಮ್ಗ್ ಗೊತ್ತೆ ಈಗಾಗ್ಲೆ ಅವ್ರು ನಿಧಾನಸೌದ್ದಿಂದ್ಲೆ 400 ವಿಕೆಟ್ ಕೆಡವವ್ರಂತ ನೀವೇ ಕೇಳಿ.....

ಸಂ : ಬರ್ಲೇಕು... ಬರ್ಲೇಕು. ಹೈಟೆಕ್ ಮಾಮ ಏನ್ ಬಾಳ ಉತ್ಸಾಹದಲ್ಲಿದ್ದೀರಾ... ಏನ್ ಸಮಾಚಾರ.

ಹೈಟೆಕ್‌ಮಾಮ : ಮೋಡ ಬಿತ್ತನೆ ಮಾಡಿ ಮಳೆ ಬರ್ಲೋ ಹೊತ್ಗೆ ತಾನಾಗ್ ತಾನೆ ಮಳೆ ಬಂದ್ರೆ ಖುಷಿ ಆಗ್ದೆ ಇರುತ್ತಾ.

ಸಂ. : ನಿಧಾನ್‌ಸೌದುದ್ ನೆತ್ತಿ ಮೇಲೆ ನಾಲ್ಕನಿ ಬಿತ್ತಪ್ಪ ಒಪ್ಕಂಡೆ.. ಅಲ್ಲೇನ್ ಉಳ್ಳಿಗ್ಳಿಗೆ ಮಾಡ್ತೀರ.

ಹೈ. ಮಾಮ : ಊರಿಗ್ ಬಂದೋಳ್ ನೀರಿಗ್ ಬರಲ್ವಾ ಅಂತಾ ಇವತ್ ನಿಧಾನ್‌ಸೌಧಕ್ ಬಂದ್ ಮಳೆ ನಾಳೆಗೆ ಮಂಡ್ಯಕ್ಕು ಬರ್ದೆ ಇರ್ತದೇನ್ರಿ.

ಸಂ : ನೀವು ಇಲ್ಲಿಗ್ ಬಂದಿದ್ದ ಅಲ್ಲಿಗೂ ಕಳಿಸ್ತಿರಾ ಅಂತಾ ಎಲ್ಲಾ ಕಾಯ್ತಾ ಕುಂತವ್ರೇಳಿ.

ಹೈ.ಮಾಮ ; ಕಾಯ್ಲಿ, ಕಾಯ್ಲಿ, ನಾನೇನ್ ಒಂದೇವ್ರಿಗೆ ಅಡ್‌ಬಿದ್ದಿದ್ದೀನಾ ಮಳೆ ಬರ್ಲಿಕೆ. ಸಿಕ್-ಸಿಕ್ ದೇವ್ರಿಗೆಲ್ಲಾ ಅಡ್ಬಿದ್ದೆ. ಸೊಂಟ ಬಿದ್ದೋದ್ ಮೇಲೆ ಮಳೇನೇ ಬಿತ್ನೆ ಮಾಡ್ಬಿಡಿ ಅಂತ ಅಡ್ರು ಮಾಡಿದ್ದು.

ಸಂ. ಅದ್ಸರಿ. ನೀವು ಕ್ರಿಕೆಟ್ಗೆ ಸೇರ್ಕಂಡ್ರಂತೆ ಹೌದಾ?

ಹೈ. ಮಾಮ : ಯಾರ್ರೀ ಹೇಳಿದ್ದು ?

ಸಂ. : ಅದೇ ಆ ಟೀವಿಯಲ್ಲಿ ಎದ್ರೆದ್ರು ಕೂರಿಸ್ಕೊಂಡು ಮಾತುಕತೆ ಮಾಡ್ತರಲ್ಲ ಅವರೇಳಿದ್ದು ಒಂದೇ ಉಸ್ರಿಗೆ ಮ್ ಕ್ರೀಡಾಭಿಮಾನದ್ ಬಗ್ಗೆ.

ಹೈ.ಮಾಮ : ಅದೇ ಮೊನ್ನೆ ಸಚಿನ್‌ಗೆ ಮೈಸೂರ್ ಪೇಟ ತೊಡ್ಸಿ ಬಿರ್ದು ಸನ್ಮಾನ ಮಾಡಿ ಬೆಂಗ್ಳೂರು ಅರನ್ಮನೇಲಿ ಭರ್ಜರಿ ಸಮಾರಂಭ ಏರ್ಪಡ್ಸಿದ್ನಲ್ಲ ಅದಕ್ಕಿರ್ಬೇಕು.

ಸಂ. : ಅಲ್ಲ ಸಾರ್, ಎಂಗಿದ್ರು ಮುಂದ್ನೊರ್ಷ ಮನೆಕಡೆಗೆ ಕಳಿಸ್ತರಲ್ಲ ಅದಕ್ಕೆ ಈಗ್ನಿಂದ ಪ್ಲಾನ್ ಮಾಡಿ ಫೇಮಸ್ಸಾಗಿರೋ ಕ್ರಿಕೆಟ್ಗೆ ಸೇರ್ಕಳ ಯೋಚ್ನೆ ಮಾಡಿರ್ಬೋದು ಅಂತ ಅಂದ್ಕೊಂಡ್ವಿ.

ಹೈ.ಮಾಮ : ಅದೇನ್ ಸಚಿನ್ ಜೊತೆ ಆಡಿದ್ರೇನ ಕ್ರಿಕೆಟೇನ್ರಿ ನಿಧಾನ್ ಸೌದ್ದಿಂದ್ಲೆ ಆಡಕಾಗಲ್ವೇನ್ರಿ.

ಸಂ. : ಹೌದಾ ಸಾರ್... ಅದ್ಯಾವ್ರೀತಿ ಅಂತ ಸ್ವಲ್ಪ ಹೇಳ್ತಿರಾ. ನೀವ್ ಯಾವಾಗ್ನಿಂದ ಆಡ್ತಿದ್ದೀರಾ ಏನ್ ಕತೆ?

ಹೈ.ಮಾಮ : ಆ ರೀತಿ ಕೇಳಿ... ನಾನು ಇಪ್ಪತ್ ಮುವತ್ತೊರ್ಷದಿಂದ ಆಡ್ತಿದ್ದೀನಿ. ಆದ್ರೆ ಬ್ಯಾಟಿಂಗ್ ಮೇಲ್ನೆ ಕಂಟ್ರೋಲ್ ಸಿಕ್ಕಿದ್ದು ಕ್ಯಾಪ್ಟನ್ ಆದ್ ಮೇಲೆ. ನಾಲ್ಕೊರ್ಷ ಆಯ್ತು ಅನ್ನಿ.

ಸಂ: ಸಾರ್ ಹಂಗಿದ್ರೆ ಇಲ್ಲೀತನ್ಕ ಎಷ್ಟ್ ರನ್ ಬಾರ್ಸಿದ್ರಿ ಸಾರ್.

ಹೈ.ಮಾಮ : ಹಳ್ಳಿಗಳವೆ ಹತ್ರತ್ರ ನಾನ್ನೂರು ವಿಕೆಟ್ ಕೆಡವಿದ್ದೀನಿ. ಒಟ್ನಲ್ಲಿ ಒಂದಾಕ್ಕೆ ಮಾಡ್ಬೇಕು ಅಂತಿದೀನಿ.

ಸಂ. : ನಿಮ್ಮ್ ದಾಖಲೆ ರನ್ ಬಗ್ಗೆ ಸ್ವಲ್ಪ ಹೇಳ್ತೀರಾ.

ಹೈ.ಮಾಮ : ಇತ್ತೀಚಿಂದೆ ಉದಾಹರಣೆಗೆ ತಗ್ಳಿ. [...] ಕೊಪ್ಪ ಜಿಲ್ಲೆ ಕುಷ್ಟಗಿ ತಾಲ್ಲೂಕಲ್ಲಿ ಭರ್ಜರಿ ಸಿಕ್ಸರ್ ಬಾರ[...]

ಸಂ. : ಸಾರ್, ನಿಮ್ಮೀ ಶೌರ್ಯದ್ದು ಗುಟ್ಟೇನು ಸಾ[...]

ಹೈ.ಮಾಮ : ಬಿಲ್ ಕ್ಲಿಂಟನ್, ಟೋನಿ ಬ್ಲೇರ್, ಇಂ[...] ಎನರ್ಜಿ ಫುಡ್‌ನ ಅಮೇರಿಕಾ ಇಂಗ್ಲೆಂಡಿಂದ ಸಪ್ಲೈ ಮಾಡ್[...] ಐಮ್ಮೆಪ್ಪು, ವರ್ಲ್ಡ್ ಬ್ಯಾಂಕ್ನೋರು ಕುಸ್ತಿಗೆಂಗೆ ತಯಾರಾ[...] ಅಂತ ಟ್ರೈನಿಂಗ್ ಕೊಡ್ತರೆ.

ಸಂ. ಓಹೋ... ನಿಮ್ಮಿಂದೆ ಇವ್ರೆಲ್ಲಾ ಅವ್ರೆ ಅನ್ನಿ.

ಹೈ.ಮಾಮ : ಅಯ್ಯೋ ಇರದೇ ಅವ್ರು. ಅವ್ರಿಂದ್ಲೆ[...] ನಾವು. ಅಮೆರಿಕಾದಲ್ಲೇ ನಾನು ಓದಿದ್ದು.

ಸಂ. ಸರಿ ಸಾರ್ ಈಪಾಟಿ ರನ್ ಹೊಡೆಯದು ಸಾಮಾನ್ಯದ ವಿಷಯ ಅಲ್ಲ. ಏನ್ ನಿವೊಬ್ರೆ ಹೊಡೀತಿದ್[...] ಇಲ್ಲಾ ಪಾಟ್ನರ್‌ಷಿಪ್ಪಾ.

ಹೈ.ಮಾಮ : ಸದ್ಯಕ್ಕೆ ಸೆಂಟ್ರಲ್ ಪಾಟ್ನರ್‌ಷಿಪ[...] ಹೊಡೀತಿದ್ದೀವಿ. ನನ್ ಪಾಟ್ನರ್ ನನಗಿಂತ ಅದ್ಭುತ [...] ನೋಡ್ರಿ. ವಿಕೆಟ್ ಕೆಡ್ವದ್ರಲ್ಲಿ ನನಗಿಂತ ಫಾಸ್ಟು. ಮ[...] ಅವರದ್ದು ಬಹುಮುಖ ಪ್ರತಿಭೆ. ಆಟ, ಡ್ರಾಮ, ಕಥೆ, ಎಲ್ಲದ್ರಲ್ಲು ಎತ್ತಿದ ಕೈ. ಭಾಷಣದಲ್ಲಂತೂ ಯ[...] ಸರಿಸಾಟಿಯಿಲ್ಲ ಬಿಡಿ. ಬಾಷ್ಣ ಮಾಡಕ್ಕು ಸೈ... ಮಾಡ[...] ಮಾಡ್ಲೇ ಇಲ್ಲ ಅನ್ನಕ್ಕು ಸೈ.

ಸಂ. ಹೌದೌದು ಅವರ್ದೊಂದ್ ಥರಾ ರಸಿಕತೆ. ನಿಮ[...] ರಸಿಕತೆ ಗೊತ್ತು ಬಿಡಿ. ಬೆಳಿಗ್ಗೆ ಎದ್ದಿದ್ ಕೂಡ್ಲೆ ಅವ್ರು ಕುಡಿ[...] ನೆಸ್ಲೆ ಕಂಪನಿ ಹಾಲು ನೀವ್ ಕುಡಿಯದು ಅದೇ ಹಾಲು. ತಲೆ ಜುಟ್ಟೆ ಫಾರಿನ್ನು ಅಂದ್ಮೇಲೆ ಕೇಳ್ಬೇಕೆ.

ಹೈ.ಮಾಮ ; ಮತ್ತೆ ಅಪ್ಪಾ ಹಾಕಿದ್ ಆಲದ್ ಮರ[...] ಅದಕ್ಕೆ ನೇತ್‌ಬೀಳದೇನ್ರಿ.

ಸಂ. : ನೀವ್ಯಾಕ್ ಸಾರ್ ನೇತ್ ಬೀಳ್ಬೇಕು. ಬೇರ[...] ಬೀಳಿಸ್ತೀರಿ. ಆಟ ನಿಲ್ಲಿಸ್ತೀರಾ ಇಲ್ಲವಾ?

ಮಾಮ : ಇನ್ಮೇಲೆ ಕುಟ್ಕದು, ಸಿಂಗಲ್‌ರನ್ನು ಇವೆ[...] ಏಕ್‌ದಂ ಫೋರು - ಸಿಕ್ಸರ್ರೇ.....

ಸಂ : ಹೌದಾ! ನಮ್ಮಡೆ ಸೆಂಚುರಿ ಹಂಗಿರುತ್ತೇ ತೋರುಸ್ತೀನಿ. ಸಿಕ್ಸು ಹಂಗಿರವೆ ಅಂತ ಜನ ತೋರಿಸ್ತರೆ. ಉದ್ಯೋಗ್ಗೇಕು ಬನ್ನಿ... ಬನ್ನಿ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕರಾಜ್ಯಸಮಿತಿಯ ಪರವಾಗಿ ಮುದ್ರಣಮತ್ತುಪ್ರಕಾಶನ:ಜಿ.ಎನ್.ನಾಗರಾಜ್
ಸಂಪಾದಕರು:ಎಸ್.ವೈ.ಗುರುಶಾಂತ್ ಸಂಪಾದಕೀಯಕಛೇರಿ:ನಂ.12, 1ನೇಅಡ್ಡರಸ್ತೆ,ಸಂಪಂಗಿರಾಮನಗರ,ಬೆಂಗಳೂರು-27ಫೋನ್ ನಂ. 2236462.
ಮುದ್ರಣ:ಸನ್ ಪ್ರಿಂಟರ್ಸ್, ಕ್ವೀನ್ ರಸ್ತೆ,ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH